# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 33 | ಆಗಸ್ಟ್ 10–16, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com




## ಅಂದು 'ಕ್ವಿಟ್ ಇಂಡಿಯಾ'
## ಇಂದು 'ಸೇವ್ ಇಂಡಿಯಾ'
## ದುಡಿಯುವ ಜನರ ಸವಾಲು

**10 ಆಗಸ್ಟ್ 2020**

**Long Live Worker-Peasant Unity**




## 'ಆತ್ಮ ನಿರ್ಭರ ಭಾರತ'ವೋ 'ರಿಲೈಯನ್ಸ್ ಇಂಡಿಯಾ'ವೋ




## ಆಗಸ್ಟ್ 5, ಆಗಸ್ಟ್ 15ಕ್ಕೆ ಸಮಾನವೇ?



**ಕಾಂ. ಶ್ಯಾಮಲ್ ಚಕ್ರವರ್ತಿ**



## ಪ್ರಭುತ್ವ + ರಾಜಕೀಯ + ಧರ್ಮ
### ಅಯೋಧ್ಯೆಯಲ್ಲಿ ಕಲಸುಮೇಲೊಗರ

# ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣ: ಟ್ರಸ್ಟ್ ತನ್ನ ಕೆಲಸ ಮಾಡಲಿ

## ಜನಗಳ ಧಾರ್ಮಿಕ ಭಾವನೆಗಳೊಂದಿಗೆ ಆಟ ಬೇಡ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಯೋಧ್ಯಾ ವಿವಾದವನ್ನು ಒಂದೋ ಎರಡೂ ಕಡೆಯವರು ಮಾತುಕತೆಗಳ ಮೂಲಕ ಪರಸ್ಪರ ಒಪ್ಪಿಗೆಯಾದ ಒಂದು ಒಪ್ಪಂದದ ಮೂಲಕ, ಇಲ್ಲವೇ ಒಂದು ನ್ಯಾಯಾಲಯದ ತೀರ್ಪಿನ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಸಿಪಿಐ(ಎಂ) ಮೊದಲಿಂದಲೂ ಹೇಳುತ್ತ ಬಂದಿದೆ. ಸುಪ್ರಿಂ ಕೋರ್ಟ್ ತನ್ನ ತೀರ್ಪು ನೀಡಿ ಮಂದಿರ ನಿರ್ಮಾಣಕ್ಕೆ ದಾರಿ ಮಾಡಿ ಕೊಟ್ಟಿದೆ. ಆದರೆ ಅದು ಈ ನಿರ್ಮಾಣವನ್ನು ಒಂದು ಟ್ರಸ್ಟ್ ಕೈಗೊಳ್ಳಬೇಕು ಎಂದು ನಿರ್ದೇಶನ ಕೊಟ್ಟಿತ್ತು. ಅಯೋಧ್ಯೆಯಲ್ಲಿ ಭೂಮಿಪೂಜಾ ವಿಧಿಯನ್ನು ಉತ್ತರಪ್ರದೇಶ ಆಡಳಿತವು ವಹಿಸಿಕೊಂಡಿರುವುದು, ಜತೆಗೆ ಕೇಂದ್ರ ಸರಕಾರ ಪ್ರಧಾನ ಮಂತ್ರಿಗಳ ಅತ್ಯುಚ್ಚ ಮಟ್ಟದಿಂದಲೇ ಇದರಲ್ಲಿ ಜತೆಗೂಡಿರುವುದು ಸುಪ್ರಿಂ ಕೋರ್ಟಿನ ತೀರ್ಪಿಗೆ ವಿರುದ್ಧವಾಗಿದೆಯಷ್ಟೇ ಅಲ್ಲ, ಭಾರತದ ಸಂವಿಧಾನದಲ್ಲಿ ಹೇಳಿರುವುದಕ್ಕೂ, ಅದರ ಆಶಯಕ್ಕೂ ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಆಗಸ್ಟ್ 3ರಂದು ಪೊಲಿಟ್‌ಬ್ಯುರೊ ನೀಡಿರುವ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದೆ.

ಸುಪ್ರಿಂ ಕೋರ್ಟ್ ಡಿಸೆಂಬರ್ 6, 1992ರ ಬಾಬ್ರಿ ಮಸೀದಿ ಧ್ವಂಸ ಒಂದು ಕ್ರಿಮಿನಲ್ ಕೃತ್ಯ ಎಂದು ವರ್ಣಿಸಿ ಅದನ್ನು ಖಂಡಿಸಿತ್ತು ಕೂಡ. ಈ ಅಪರಾಧ ಎಸಗಿದವರನ್ನು ಶಿಕ್ಷಿಸುವುದು ಅಂತಿರಲಿ, ಕೇಂದ್ರ/ರಾಜ್ಯಸರಕಾರಗಳು ಸೇರಿಕೊಂಡಿರುವುದು ಈ ಧ್ವಂಸಕೃತ್ಯಕ್ಕೆ ಪೂರ್ವಾನ್ವಯವಾಗುವಂತೆ ಕಾನೂನುಬದ್ಧತೆಯನ್ನು ಒದಗಿಸಬಾರದು.

ಕೊವಿಡ್–19 ಮಹಾಸೋಂಕು ದೇಶಾದ್ಯಂತ ಹರಡಿದೆ. ಕೇಂದ್ರ ಗೃಹಮಂತ್ರಾಲಯ ವಿಧಿಸಿರುವ ಪ್ರತಿಬಂಧಕ ಕ್ರಮಗಳು ಧಾರ್ಮಿಕ ಸಮಾರಂಭಗಳಿಗೆ ಅವಕಾಶ ನೀಡುವುದಿಲ್ಲ. ಅಯೋಧ್ಯೆಯಲ್ಲಿ ನಿಯೋಜಿಸಿದ ಪುರೋಹಿತರುಗಳು ಮತ್ತು ಪೋಲೀಸ್ ಸಿಬ್ಬಂದಿ ಕೊವಿಡ್ ಸೋಂಕಿತರೆಂದು ತಪಾಸಣೆಯಾಗಿರುವುದು ಮಾನವ ಜೀವಗಳಿಗೆ ಇರುವ ಅಪಾಯಗಳನ್ನು ಎತ್ತಿ ತೋರಿದೆ.

ಇಂತಹ ಸಂದರ್ಭದಲ್ಲಿ ಭಾರತದ ಜನತೆ ಮಹಾಸೋಂಕನ್ನು ತಡೆಯುವ ವಿಧಿ–ವಿಧಾನಗಳ ಮುನ್ನೆಚ್ಚರಿಕೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಜನಗಳ ಧಾರ್ಮಿಕ ಭಾವನೆಗಳನ್ನು ಪಕ್ಷಪಾತೀ ರಾಜಕೀಯ ಉದ್ದೇಶಗಳಿಗೆ ದುರುಪಯೋಗ ಪಡಿಸಿಕೊಳ್ಳಲು ಅನುಮತಿ ನೀಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ ಮಾಡಿಕೊಂಡಿದೆ.

## ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯದ ನಿರಾಕರಣೆಯಾಗಿದೆ



ಭಾರತದ ಪ್ರಧಾನ ಮಂತ್ರಿಗಳು ಅಯೋಧ್ಯೆಯಲ್ಲಿ 'ಭೂಮಿ ಪೂಜೆ' ನಡೆಸಿದ್ದಾರೆ. ರಾಷ್ಟ್ರೀಯ ಪ್ರಸಾರ ಸಂಸ್ಥೆ ದೂರದರ್ಶನ ಅದನ್ನು ಜಗತ್ತಿಗೆಲ್ಲ ಪ್ರಸಾರ ಮಾಡಿದೆ. ಇದು ಸಿಪಿಐ(ಎಂ) ಆಗಸ್ಟ್ 3ರಂದು ಎತ್ತಿದ ಪ್ರಮುಖ ಪ್ರಶ್ನೆಗಳನ್ನು ದೃಢಪಡಿಸಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಟ್ವೀಟ್ ಮಾಡಿದ್ದಾರೆ.

ಉತ್ತರ ಪ್ರದೇಶದ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳ ಹಾಜರಿಯಲ್ಲಿ ಪ್ರಧಾನ ಮಂತ್ರಿಗಳು ಈ ಪೂಜೆಯನ್ನು ನಡೆಸಿರುವುದು ಮಂದಿರದ ನಿರ್ಮಾಣ ಕೆಲಸವನ್ನು ಪ್ರಭುತ್ವವು ವಹಿಸಿಕೊಂಡಿದೆ ಎಂಬುದನ್ನು ತೋರಿಸುತ್ತದೆ. ಇದು ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯದ ನಿರಾಕರಣೆಯಾಗಿದೆ ಎಂದು ಯೆಚುರಿ ಹೇಳಿದ್ದಾರೆ.

ಈ 'ಭೂಮಿಪೂಜೆ' ಸಮಾರಂಭ ಜನಗಳ ಧಾರ್ಮಿಕ ಭಾವನೆಗಳ ನಗ್ನ ದುರುಪಯೋಗವಾಗಿದೆ, ಸ್ವಾರ್ಥಸಾಧನೆಗೆ, ರಾಜಕೀಯ ಉದ್ದೇಶಗಳಿಗಾಗಿ ಇದನ್ನು ಮಾಡಲಾಗಿದೆ. ಇದು ಭಾರತೀಯ ಸಂವಿಧಾನದ ಅಕ್ಷರಶಃ ಮತ್ತು ಅದರ ಆಶಯದ ಭಂಡ ಉಲ್ಲಂಘನೆಯೂ ಅಗಿದೆ.

ಈ ಸಮಾರಂಭದ ಪ್ರಸಾರದ ಪ್ರಕಾರ ಇದು ಕೇಂದ್ರ ಗೃಹಮಂತ್ರಾಲಯ ಧಾರ್ಮಿಕ ಸಮಾರಂಭಗಳನ್ನು ನಿಷೇಧಿಸಿ ವಿಧಿಸಿರುವ ಕೊವಿಡ್ ನಿರ್ಬಂಧಗಳ ಒಂದು ಸ್ಪಷ್ಟ ಉಲ್ಲಂಘನೆಯಾಗಿದೆ.

–ಭಾರತೀಯ ಸಂವಿಧಾನ ಮತ್ತು ನಮ್ಮ ಕಾನೂನು ಪ್ರತಿಯೊಬ್ಬ ನಾಗರಿಕರ ನಂಬಿಕೆಯ ಆಯ್ಕೆಯನ್ನು ರಕ್ಷಿಸುತ್ತವೆ.– ಸರಕಾರದ ನಂಬಿಕೆಯೆಂದರೆ ಎಲ್ಲ ನಾಗರಿಕರ ಆಯ್ಕೆಯನ್ನು ರಕ್ಷಿಸುವುದು. – ಪ್ರಭುತ್ವಕ್ಕೆ ಮತಧರ್ಮ ಎಂಬುದಿಲ್ಲ ಎಂದು ಯೆಚುರಿ ತನ್ನ ಟ್ವೀಟ್‌ನಲ್ಲಿ ನೆನಪಿಸಿದ್ದಾರೆ.

# ಜಮ್ಮು ಮತ್ತು ಕಾಶ್ಮೀರ ಜನತೆಗೆ ಎಡಪಕ್ಷಗಳ ಸೌಹಾರ್ದ

## "ಮೋದಿ ಸರಕಾರದ ವಿಶ್ವಾಸಘಾತಕ್ಕೆ ಒಂದು ವರ್ಷ"

ಆಗಸ್ಟ್ 5, 2020 ರಂದು ಕಲಮು 370ನ್ನು ರದ್ದು ಮಾಡಿ, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ, ಮತ್ತು ಜಮ್ಮು ಮತ್ತು ಕಾಶ್ಮೀರ ಜನತೆಯನ್ನು ಪಂಜರದೊಳಗೆ ಬಂಧಿಸಿಟ್ಟು ಒಂದು ವರ್ಷವಾಗುತ್ತದೆ.

ಕಳೆದ ವರ್ಷ ಮೋದಿ ಸರಕಾರ, ಈ ನಡೆ ಏನೆಲ್ಲ ಸಾಧಿಸುತ್ತದೆ, ಅದು ಹೇಗೆ ಭಾರತಕ್ಕೆ ಮತ್ತು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಪ್ರಯೋಜನಕಾರಿಯಾಗುತ್ತದೆ ಎಂದು ಹಲವಾರು ಟೊಳ್ಳು ಆಶ್ವಾಸನೆಗಳನ್ನು ಕೊಟ್ಟಿತ್ತು. ಈ ನಡುವೆ, ಕಾಶ್ಮೀರದಲ್ಲಿ ಮೋದಿ ಆಳ್ವಿಕೆಯ ದಬ್ಬಾಳಿಕೆ ಬೇಗನೇ ಇಡೀ ಭಾರತಕ್ಕೆ ಒಂದು ನೀಲನಕ್ಷೆಯಾಗುತ್ತದೆ ಎಂದು ಹಲವರು ಎಚ್ಚರಿಸಿದ್ದರು. ಈಗ ಒಂದು ವರ್ಷವಾಗುತ್ತಿರುವಾಗ ಸರಕಾರದ ಆಶ್ವಾಸನೆಗಳು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಬಗೆದಿರುವ ವಿಶ್ವಾಸಘಾತ ಎಂದು ಬಯಲಾಗಿದೆ. ಅಲ್ಲಿಯ ಜನತೆಯನ್ನು ಇನ್ನೂ ಪಂಜರದಲ್ಲೇ ಬಂಧಿಸಿಡಲಾಗಿದೆ, ಅವರ ಬಾಯಿ ಮುಚ್ಚಿಸಲಾಗಿದೆ.

ಭಾರತೀಯ ಸಂವಿಧಾನದ ಕಲಮು 370 ಮತ್ತು 35(ಎ) ರದ್ದತಿಗೆ ಸವಾಲುಗಳು ಇನ್ನೂ ಸುಪ್ರಿಂ ಕೋರ್ಟಿನ ಮುಂದೆ ಇತ್ಯರ್ಥವಾಗದೆ ಉಳಿದಿವೆ.

ಆಗಸ್ಟ್ 2019ರಿಂದ ಬಂಧನದಲ್ಲಿ ಇಟ್ಟಿರುವ ಎಲ್ಲರನ್ನೂ ಬಿಡುಗಡೆ ಮಾಡಬೇಕು, ಸಂಪೂರ್ಣ ಸಂಪರ್ಕವನ್ನು ಮರು ಸ್ಥಾಪಿಸಬೇಕು ಮತ್ತು ಜನಗಳ ಮುಕ್ತ ಓಡಾಟಕ್ಕೆ ಅವಕಾಶ ನೀಡಬೇಕು ಎಂದು ಐದು ಎಡಪಕ್ಷಗಳಾದ ಸಿ.ಪಿ.ಐ.(ಎಂ), ಸಿ.ಪಿ.ಐ., ಸಿ.ಪಿ.ಐ.(ಎಂಎಲ್)–ಲಿಬರೇಷನ್, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಮತ್ತು ಆ???.ಎ???.ಪಿ. ಮುಖಂಡರು ಒಂದು ಜಂಟಿ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.. ಇದು ಮಹಾಸೋಂಕನ್ನು ಪರಿಣಾಮಕಾರಿಯಾಗಿ ಎದುರಿಸಲಿಕ್ಕೆ ಮತ್ತು ಪ್ರಹಾರಗಳಿಗೆ ತುತ್ತಾಗಿರುವ ಜನಗಳಿಗೆ ಪರಿಹಾರ ಒದಗಿಸಲಿಕ್ಕೆ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಬಗ್ಗೆ ಸಂವಿಧಾನ ನೀಡಿರುವ ಖಾತ್ರಿಗಳನ್ನು ಎತ್ತಿ ಹಿಡಿಯಲಿಕ್ಕೆ ಅತ್ಯಗತ್ಯ ಎಂದು ಅವರ ಹೇಳಿದ್ದಾರೆ.



## ಸರಕಾರದ ಆಶ್ವಾಸನೆಗಳೆಲ್ಲವೂ ಮರೀಚಿಕೆಯಾಗಿವೆ, ದಾವೆಗಳೆಲ್ಲವೂ ಹುಸಿಯಾಗಿವೆ

**ಹೀಗೆಂದು ಜಮ್ಮು ಮತ್ತು ಕಾಶ್ಮೀರದ ಈಗ ಇಲ್ಲವಾಗಿರುವ ವಿಧಾನಸಭೆಯ ಸದಸ್ಯರೂ, ಸಿಪಿಐ(ಎಂ)ನ ಹಿರಿಯ ಮುಖಂಡರೂ ಆಗಿರುವ ಮೊಹಮ್ಮದ್ ಯುಸುಫ್ ತರಿಗಾಮಿ ಹೇಳಿದ್ದಾರೆ.**

ಇಲ್ಲಿ ಪರಿಸ್ಥಿತಿ ಉತ್ತಮಗೊಳ್ಳುತ್ತಿದ್ದರೆ, ಹಿಂಸಾಚಾರ ನಿಜಕ್ಕೂ ಇಳಿಯುತ್ತಿದ್ದರೆ, ಈಗಲೂ ಕರಾಳ ಕಾಯ್ದೆಗಳ, ಪಿ.ಎಸ್.ಎ. ಮತ್ತು ಯು.ಎ.ಪಿ.ಎ ಬಳಕೆ ಏಕೆ ಮುಂದುವರೆಯುತ್ತಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಪ್ರಧಾನಮಂತ್ರಿಗಳು ಮತ್ತು ಗೃಹಮಂತ್ರಿಗಳು ಲೋಕಸಭೆಯಲ್ಲಿ ತಮ್ಮ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತ ಅದು ದಶಕಗಳಿಂದ ನಡೆಯುತ್ತಿರುವ ಉಗ್ರಗಾಮಿತ್ವ, ಪ್ರತ್ಯೇಕತಾವಾದವನ್ನು ಕೊನೆಗೊಳಿಸುತ್ತದೆ, ಈ ಪ್ರದೇಶದಲ್ಲಿನ ಭ್ರಷ್ಟಾಚಾರವನ್ನು ಕೊನೆಗೊಳಿಸಿ ಅಭಿವೃದ್ಧಿ, ಉದ್ಯೋಗ ಮತ್ತು ಸಮೃದ್ಧಿಯನ್ನು ತರುತ್ತದೆ ಎಂದಿದ್ದರು.

ಈ ಪ್ರದೇಶದಲ್ಲಿ ಎಷ್ಟು ಉದ್ಯೋಗಾವಕಾಶಗಳು ನಿರ್ಮಾಣವಾಗಿವೆ, ಎಷ್ಟು ಹೂಡಿಕೆಗಳು ಬಂದಿವೆ?

ಉದ್ಯೋಗಾವಕಾಶ ನಿರ್ಮಾಣ ಒತ್ತಟ್ಟಿಗಿರಲಿ, ನಿಜ ಹೇಳಬೇಕೆಂದರೆ, ಲಾಕ್‌ಡೌನ್ ಮತ್ತು ಅಸ್ಥಿರ ಪರಿಸ್ಥಿತಿಗಳಿಂದಾಗಿ ಲಕ್ಷಾಂತರ ಮಂದಿ ಕೆಲಸ ಕಳಕೊಂಡಿದ್ದಾರೆ. ದಿನಗೂಲಿಗಳು, ಕ್ಯಾಶುವಲ್ ಕಾರ್ಮಿಕರು, ಸ್ಕೀಮ್ ಕೆಲಸಗಾರರು ಮತ್ತಿತರರು ಹಲವು ತಿಂಗಳುಗಳಿಂದ ಕೂಲಿ/ಸಂಬಳದಿಂದಲೂ ವಂಚಿತರಾಗಿದ್ದಾರೆ.

**ಪುಟ 14 ನೋಡಿ**

# ಹಿರಿಯ ಕಾರ್ಮಿಕ ಮುಖಂಡ ಶ್ಯಾಮಲ್ ಚಕ್ರವರ್ತಿ ನಿಧನ

ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯ ಕಾಂ. ಶ್ಯಾಮಲ್ ಚಕ್ರವರ್ತಿ ಆಗಸ್ಟ್ 6ರಂದು ನಿಧನರಾಗಿದ್ದಾರೆ. ಅವರಿಗೆ 77ವರ್ಷವಾಗಿತ್ತು. ಕೆಲವು ದಿನಗಳ ಹಿಂದೆ ಅವರನ್ನು ಆರೋಗ್ಯ ಸಮಸ್ಯೆಗಳಿಂದಾಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ನಂತರ ಕೊವಿಡ್–19 ಸೋಂಕು ತಗಲಿದ್ದು ದೃಢಪಟ್ಟಿತು.

ಸಿಪಿಐ(ಎಂ) ಪೊಲಿಟ್ ಬ್ಯುರೊ ಅವರ ನಿಧನಕ್ಕೆ ಆಳವಾದ ದುಃಖ ವ್ಯಕ್ತಪಡಿಸಿದೆ.

1960ರ ದಶಕದಲ್ಲಿ ಶ್ಯಾಮಲ್ ಚಕ್ರವರ್ತಿ ವಿದ್ಯಾರ್ಥಿ ಆಂದೋಲನವನ್ನು ಸೇರಿದರು. ಕೊಲ್ಕತಾದ ವಿದ್ಯಾಸಾಗರ ಕಾಲೇಜಿನ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದರು.

1960ರಲ್ಲಿ ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. 1981ರಲ್ಲಿ ಮೊದಲ ಬಾರಿಗೆ ಪಶ್ಚಿಮ ಬಂಗಾಲ ವಿಧಾನಸಭೆಗೆ ಚುನಾಯಿತರಾದರು. ನಂತರ ಮತ್ತೆ ಮೂರು ಬಾರಿ ಆಯ್ಕೆಗೊಂಡ ಅವರು 9 ವರ್ಷಗಳ ಕಾಲ ಪಶ್ಚಿಮ ಬಂಗಾಲದ ಸಾರಿಗೆ ಮಂತ್ರಿಯಾಗಿಯೂ ಸೇವೆ ಸಲ್ಲಿಸಿದರು. ಒಂದು ಅವಧಿಗೆ ಅವರು ರಾಜ್ಯಸಭಾ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

ಹಲವಾರು ಕಾರ್ಮಿಕ ಸಂಘಟನೆಗಳೊಡನೆ ಸಂಬಂಧ ಹೊಂದಿದ್ದ ಶ್ಯಾಮಲ್ ಚಕ್ರವರ್ತಿಯವರು ಸಿಐಟಿಯು ನಲ್ಲಿ ವಿವಿಧ ಹುದ್ದೆಗಳಲ್ಲಿ ಜವಾಬ್ದಾರಿ ನಿರ್ವಹಿಸಿದರು, ಪಶ್ಚಿಮ ಬಂಗಾಲ ಘಟಕದ ಅಧ್ಯಕ್ಷರೂ ಆಗಿದ್ದರು. ಕಾರ್ಮಿಕ ವರ್ಗದ ಪರವಾದ ಹೋರಾಟದಲ್ಲಿ ಅವರು ಒಂದು ವರ್ಷ ಜೈಲುವಾಸವನ್ನೂ ಅನುಭವಿಸಿದರು, ಆರು ತಿಂಗಳು ಭೂಗತರಾಗಿಯೂ ಇದ್ದರು.


ಅವರು 1978ರಲ್ಲಿ ಸಿಪಿಐ(ಎಂ)ನ ಪಶ್ಚಿಮ ಬಂಗಾಲ ರಾಜ್ಯ ಸಮಿತಿಗೆ ಆಯ್ಕೆಯಾದರು, 2002ರಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ಮಗಳು ಉಷಾಸಿಯವರಿಗೆ ಮತ್ತು ಪಶ್ಚಿಮ ಬಂಗಾಲದ ಪಕ್ಷದ ಎಲ್ಲ ಸದಸ್ಯರಿಗೂ ತನ್ನ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

### ಸಿಐಟಿಯು ಶ್ರದ್ಧಾಂಜಲಿ

ಶ್ಯಾಮಲ್ ಚಕ್ರವರ್ತಿಯವರು ಪಶ್ಚಿಮ ಬಂಗಾಲದಲ್ಲೂ ಮತ್ತು ರಾಷ್ಟ್ರೀಯ ಮಟ್ಟದಲ್ಲೂ ಕಾರ್ಮಿಕ ವರ್ಗವನ್ನು ಸಂಘಟಿಸುವಲ್ಲಿ ಮುಂಚೂಣಿ ಪಾತ್ರವನ್ನು ವಹಿಸಿದವರು ಎಂದು ಸಿಐಟಿಯು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.

ಅವರು ವಿದ್ಯುಚ್ಛಕ್ತಿ, ರಸ್ತೆ ಸಾರಿಗೆ, ಬಂದರು ಮುಂತಾದ ಆಯಕಟ್ಟಿನ ವಲಯಗಳ ಕಾರ್ಮಿಕ ಆಂದೋಲನಗಳಿಗೆ ನೇತೃತ್ವ ನೀಡುವಲ್ಲಿ ಸಕ್ರಿಯ ಪಾತ್ರ ವಹಿಸಿದರು. ಈ ವಲಯದ ಅಖಿಲ ಭಾರತ ಒಕ್ಕೂಟಗಳಲ್ಲಿ ಮುಖಂಡತ್ವದ ಪಾತ್ರ ವಹಿಸಿದ್ದರು. ಅವರು ಪಶ್ಚಿಮ ಬಂಗಾಳ ಸಿಐಟಿಯು ಘಟಕಕ್ಕೆ ಅಧ್ಯಕ್ಷರಾಗಿ ಸುಮಾರು ಎರಡು ದಶಕಗಳ ವರೆಗೆ ನೇತೃತ್ವ ನೀಡಿದ್ದರು.



1991ರಲ್ಲಿ ಶ್ಯಾಮಲ್ ಚಕ್ರವರ್ತಿ ಸಿಐಟಿಯುನ 7ನೇ ಸಮ್ಮೇಳನದಲ್ಲಿ ರಾಷ್ಟ್ರೀಯ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದರು. ಅಂದಿನಿಂದ ಸಿಐಟಿಯುನ 15ನೇ ಸಮ್ಮೇಳನದ ವರೆಗೆ ಅದರ ಉಪಾಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದರು. 2020ರಲ್ಲಿ ನಡೆದ '16ನೇ ಸಮ್ಮೇಳನದಲ್ಲಿ ಉಪಾಧ್ಯಕ್ಷ ಸ್ಥಾನದಿಂದ ನಿವೃತ್ತಿ ಕೋರಿದರೂ, ನಂತರವೂ ಕಾರ್ಮಿಕ ಆಂದೋಲನದಲ್ಲಿ ಸಕ್ರಿಯರಾಗಿದ್ದರು ಎಂದು ಅವರಿಗೆ ಹಾರ್ದಿಕ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ಹೇಳಿದೆ.

## ಆಗಸ್ಟ್ 28 ರಂದು ರಾಷ್ಟ್ರೀಯ ಪ್ರತಿಭಟನೆಗೆ ಮಹಿಳಾ ಸಂಘಟನೆಗಳ ಕರೆ

**"ಜೀವನ, ಜೀವನೋಪಾಯ ಮತ್ತು ಪ್ರಜಾಪ್ರಭುತ್ವ"** **ಪುಟ 14 ನೋಡಿ**

ಸಂಪಾದಕೀಯ

# ಆಗಸ್ಟ್ 5, ಆಗಸ್ಟ್ 15 ಕ್ಕೆ ಸಮಾನವೆ?

ಅಯೋಧ್ಯೆಯಲ್ಲಿ ಮಸೀದಿ ಇದ್ದ ಜಾಗದಲ್ಲಿ ಶ್ರೀರಾಮನಿಗೆ ಮಂದಿರ ಕಟ್ಟುವ ಅಂಗವಾಗಿ ಭೂಮಿ ಪೂಜೆ ನಡೆಸುವುದರೊಂದಿಗೆ ಅಯೋಧ್ಯೆ ರಾಜಕಾರಣ ಮುಕ್ತಾಯಗೊಂಡಂತೆ ಕಾಣುವುದಿಲ್ಲ. ಈ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ಎರಡು ಪರಸ್ಪರ ವಿರುದ್ಧವಾದ ಮಾತುಗಳನ್ನು ಆಡಿದ್ದಾರೆ. ಮೊದಲ ವಿಶ್ಲೇಷಣೆ ಸ್ವಾಗತಾರ್ಹವಾಗಿದೆ. ಮಂದಿರವನ್ನು ಪರಸ್ಪರ ಪ್ರೀತಿ ಮತ್ತು ಸಹೋದರತ್ವದ ನೆಲೆಯಲ್ಲಿ ಕಟ್ಟಲಾಗುತ್ತದೆ ಎಂದು ಮೋದಿಯವರು ಹೇಳಿದ್ದಾರೆ. ಅದು ವೈವಿಧ್ಯತೆಯಲ್ಲಿ ಏಕತೆಯ ಸಂಕೇತವಾಗಲಿದೆ ಎಂದಿದ್ದರು. ರಾಮ ಮತ್ತು ರಾಮಾಯಣದ ಅನೇಕ ಪರಂಪರೆಗಳಿರುವುದನ್ನು ಒಪ್ಪಿಕೊಂಡಿದ್ದರು. ರಾಮಾಯಣದ ವಿಭಿನ್ನ ನಿರೂಪಣೆಗಳನ್ನು ಅವರು ಪ್ರಸ್ತಾಪಿಸಿದ್ದರು. ಸಹೋದರತೆ ಮತ್ತು ಭಾತೃತ್ವದಿಂದ ಇಟ್ಟಿಗೆಗಳನ್ನು ಜೋಡಿಸಿ ಮಂದಿರವನ್ನು ಕಟ್ಟಲಾಗುವುದು ಎಂದು ಹೇಳಿದ್ದರು. ಈ ಭಾವನೆಗಳು ಮತ್ತು ಅಭಿಪ್ರಾಯಗಳನ್ನು ಕುರಿತು ಯಾರಾದರೂ ಮೆಚ್ಚುಗೆ ವ್ಯಕ್ತಪಡಿಸಬಹುದು. ಆದರೆ ಪ್ರಧಾನಿ ಮೋದಿಯವರು ಮೇಲಿನ ತಮ್ಮ ಮಾತುಗಳಿಗೆ ತದ್ವಿರುದ್ಧವಾದ ಮಾತುಗಳನ್ನು ಅದೇ ಅಯೋಧ್ಯೆಯ ವೇದಿಕೆಯಿಂದ ಹೇಳಲು ತಡಮಾಡಲಿಲ್ಲ. ಮಂದಿರ ಕಟ್ಟುವ ಅವರ ಇಡೀ ಯೋಜನೆ ರಾಜಕೀಯ ಪ್ರೇರಿತವಾದದ್ದು ಎಂದು ಅವರಿಂದ ಮುಚ್ಚಿಡಲಾಗಲಿಲ್ಲ. ಪ್ರಧಾನ ಮಂತ್ರಿಗಳು ರಾಮ ಮಂದಿರ ಆಂದೋಲನವನ್ನು ದೇಶದ ಸ್ವಾತಂತ್ರ್ಯ ಆಂದೋಲನಕ್ಕೆ ಹೋಲಿಸಿದರು. ಆಗಸ್ಟ್ 5 ರ ಭಾರತಕ್ಕೆ ಆಗಸ್ಟ್ 15 ರಷ್ಟೇ ಮುಖ್ಯವಾದದು ಎಂದು ಅವರು ಹೇಳಲು ಅವರು ಸಂಕೋಚ ಪಡಲಿಲ್ಲ. ಮೋದಿಯವರ ಈ ಹೇಳಿಕೆಯನ್ನು ಯಾರೊಬ್ಬ ದೇಶವಾಸಿಯೂ ಬೆಂಬಲಿಸಲಾರರು. ಸ್ವಾತಂತ್ರ ಆಂದೋಲನಕ್ಕೂ ರಾಮಮಂದಿರದ ಚಳುವಳಿಗೂ ಯಾವುದೇ ಹೋಲಿಕೆ ಸಾಧ್ಯವಿಲ್ಲ. ಸ್ವಾತಂತ್ರ್ಯ ಚಳುವಳಿ ಎಲ್ಲ ದೇಶಬಾಂದವರನ್ನು ಒಂದುಗೂಡಿಸಿತ್ತು. ಆದರೆ ರಾಮ ಮಂದಿರ ಚಳುವಳಿಯು ದೇಶವನ್ನು ಒಡಕಿನತ್ತ ಸಾಗುವಂತೆ ಮಾಡಿದೆ.

ಚಳುವಳಿಯ ಯಶಸ್ಸು ಮತ್ತು ಮಂದಿರ ನಿರ್ಮಾಣ ವಸ್ತು ಸ್ಥಿತಿಯನ್ನು ಬದಲಾಯಿಸುವುದಿಲ್ಲ. ಚರಿತ್ರೆಯನ್ನು ತಿರುಚುವುದು ಆರೆಸ್ಸೆಸಿನ ಹುಟ್ಟುಗುಣ. ಸ್ವಾತಂತ್ರ್ಯ ಚಳುವಳಿಯನ್ನು ಮಂದಿರ ಚಳುವಳಿಗೆ ಹೋಲಿಸುವುದು ದೇಶದ್ರೋಹಿ ನಡೆ. ಮಂದಿರವನ್ನು ರಾಷ್ಟ್ರೀಯ ಸಂಕೇತವೆಂದು ಸಹ ದೊಡ್ಡ ತಪ್ಪು. ರಾಷ್ಟ್ರೀಯತೆಯನ್ನು ಧಾರ್ಮಿಕ ವ್ಯಕ್ತಿಗಳಿಗೆ, ವಿಚಾರಗಳಿಗೆ ಜೋಡಿಸುವುದು ಸರಿಯಾದುದಲ್ಲ. ಸಂಘ ಪರಿವಾರದವರು ಎಂದೂ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸದೆ ಇರುವುದರಿಂದ ಅವರಿಗೆ ಮಂದಿರ ಚಳುವಳಿಯೊಳಗಿನ ದೇಶದ್ರೋಹ ಮನಗಾಣಲಾಗುತ್ತಿಲ್ಲ. ನಮ್ಮ ಸ್ವಾತಂತ್ರ್ಯ ಚಳುವಳಿಯ ಪಿತಾಮಹಾ ಗಾಂಧೀಜಿಯವರನ್ನು ಹತ್ಯೆ ಮಾಡಲು ಹಿಂಜರಿಯದ ಕಟುಕರು ಇವರು.

ಮಂದಿರ ನಿರ್ಮಾಣಕ್ಕಾಗಿ ಭೂಮಿ ಪೂಜೆ ನೆರವೇರಿಸಿದ್ದು 500 ವರ್ಷಗಳ ಹಿಂದುಗಳ ಕನಸನ್ನು ನನಸು ಮಾಡಿದೆ ಎಂದು ಹೇಳಲಾಗುತ್ತದೆ. ಹಿಂದುಗಳ ಕರಾಳ ಕನಸು ನನಸಾಗಿರಬಹುದು. ಆದರೆ ಈ ದೇಶವನ್ನು ಒಪ್ಪದಿರುವ ಅಸಂಖ್ಯಾತ ದೇಶಪ್ರೇಮಿಗಳು ಕಣ್ಣೀರಿಡಲು ಕಾರಣವಾದ ದುರಂತವಿದೆ. ದೊಡ್ಡ ಪ್ರಮಾಣದ ದೇಶವಾಸಿಗಳು ಮಸೀದಿಯನ್ನು ಕೆಡವಿ ಮಂದಿರವನ್ನು ಕಟ್ಟುವ ಆಂದೋಲನದಲ್ಲಿ ಭಾಗವಹಿಸಿರಲಿಲ್ಲ. ಅವರು ರಾಮನ ಭಕ್ತರೇ ಆಗಿರಬಹುದು. ರಾಮನ ಸುತ್ತ ಹೆಣೆಯಲಾದ ರಾಜಕಾರಣದ ಬಲೆಯನ್ನು ಕತ್ತರಿಸಿ ಹಾಕಬೇಕಾಗಿದೆ. ಮೋದಿ ಮುಖವಾಡವನ್ನು ಕಳಚಿಹಾಕಬೇಕಾಗಿದೆ.

ಅಲ್ಪ ಸಂಖ್ಯಾತರಾದ ಮುಸಲ್ಮಾನರು, ಕ್ರೈಸ್ತರು ಧೃತಿಗೆಡಬೇಕಾಗಿಲ್ಲ. ಧೈರ್ಯದಿಂದ ಬದುಕಿರಿ. ತಲೆಕೆಟ್ಟ ರಾಜ್ಯ ಬಿಜೆಪಿ ನಾಯಕ ಈಶ್ವರಪ್ಪನ ಗೊಡ್ಡು ಬೆದರಿಕೆಗೆ ಸೊಪ್ಪುಹಾಕದಿರಿ. ದಾರ್ಮಿಕ ಅಲ್ಪ ಸಂಖ್ಯಾತರೆ, ಒಂದಾಗಿ. ಜಾತ್ಯಾತೀತ ಸಂಘಟನೆಗಳೊಂದಿಗೆ ಕೈಜೋಡಿಸಿ ಮುಂದೆ ಬನ್ನಿ. ಮಸೀದಿಗಳನ್ನು ಧ್ವಂಸಮಾಡಿ ದೇವಸ್ಥಾನಗಳನ್ನು ಕಟ್ಟುವ ಮಾನವ ದ್ವೇಷಿಗಳನ್ನು ಹಿಮ್ಮೆಟ್ಟಿಸುವ, ಬನ್ನಿ. ಆಗಸ್ಟ್ 5 ಎಂದಿಗೂ ಆಗಸ್ಟ್ 15 ರ ಮಹತ್ವವನ್ನು ಮೀರಿಸಲಾರದು.

# ಜಿ.ಎಸ್.ಟಿ.ಯ ಕರ್ನಾಟಕದ ಭಾಗ ಹಾಗೂ ಕೇಂದ್ರ ಕೊಡಬೇಕಾದ ಇತರೆ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡುವಂತೆ– ಸಿಪಿಐಎಂ ಆಗ್ರಹ

ಮಾನ್ಯ ಶ್ರೀ ನರೇಂದ್ರ ಮೋದಿಯವರು,
ಪ್ರಧಾನ ಮಂತ್ರಿಗಳು,

ಇವರ ಮೂಲಕ,
ಮಾನ್ಯ ರಾಜ್ಯಪಾಲರು,
ರಾಜ ಭವನ,
ಕರ್ನಾಟಕ ಸರಕಾರ,

ರಾಜ್ಯವು ಕಳೆದ ವರ್ಷ ಭೀಕರವಾದ ಬರ ಹಾಗೂ ನೆರೆ ಹಾವಳಿಗೆ ತುತ್ತಾಯಿತು. ಅದೇ ರೀತಿ, ಇದೀಗ ಕೋವಿಡ್ – 19 ವೈರಾಣುವಿನ ತೀವ್ರ ಸೋಂಕಿಗೀಡಾಗಿದೆ. ಇವುಗಳಿಂದ ರಾಜ್ಯವು ಈ ಅವಧಿಯಲ್ಲಿ ಲಕ್ಷಾಂತರ ಕೋಟಿ ರೂಗಳ ಭಾರೀ ಹಾನಿಯನ್ನು ಅನುಭವಿಸಿತು. ಈಗಂತೂ ಕೋವಿಡ್ – 19 ವೈರಾಣು ಸೋಂಕು ತನ್ನ ಉಚ್ಛ್ರಾಯ ಸ್ಥಿತಿಯ ಕಡೆ ದಾಪುಗಾಲು ಇಡುತ್ತಿದೆ.

ಆದರೇ, ಕೇಂದ್ರ ಸರಕಾರ ಈ ಎಲ್ಲಾ ಸಂದರ್ಭದಲ್ಲೂ ರಾಜ್ಯಕ್ಕೆ ನೀಡಿದ ಪರಿಹಾರವೂ ಇಲ್ಲವೆನ್ನುವಷ್ಟು ಅಲ್ಪವಾಗಿದೆ.

ರಾಜ್ಯದ ಬೇಸಾಯ ಮತ್ತು ರೈತರು, ಕೃಷಿಕೂಲಿಕಾರರು, ಕಸುಬುದಾರರು, ಕಾರ್ಮಿಕರು, ದಲಿತರು ಮತ್ತು ಮಹಿಳೆಯರು ತೀವ್ರ ರೀತಿಯಲ್ಲಿ ಸಾಲ ಬಾಧಿತರಾಗಿದ್ದಾರೆ. ಉದ್ಯೋಗ ಹಾನಿಯಿಂದ ಪರಿತಪಿಸುತ್ತಿದ್ದಾರೆ. ಈ ಎಲ್ಲರಿಗೂ ಸಾಲ ಪರಿಹಾರ ನೀಡಲಿಲ್ಲ ಮತ್ತು ಸಾರ್ವಜನಿಕ ಸಾಲದ ಮೊತ್ತವನ್ನು ವ್ಯಾಪಕವಾಗಿ ವಿಸ್ತರಿಸಿ ನೆರವಾಗಲಿಲ್ಲ.

ರಾಜ್ಯದ ವಿಚಾರದಲ್ಲಿ ಕೇಂದ್ರ ಸರಕಾರವೂ ನಿರಂತರವಾಗಿ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿರುವುದು ಖಂಡನೀಯವಾಗಿದೆ.

ಪ್ರಧಾನ ಮಂತ್ರಿಗಳ ಹೆಸರಿನ ಖಾಸಗೀ ಟ್ರಸ್ಟ್ ಮೂಲಕ ಕೋವಿಡ್ – 19 ಪರಿಹಾರದ ನಿಧಿ ಸಾವಿರಾರು ಕೋಟಿ ರೂಗಳಷ್ಟು ಸಂಗ್ರಹಿಸಲಾಗಿದೆ. ಇದರಲ್ಲೂ ರಾಜ್ಯಕ್ಕೆ ಪಾಲು ನೀಡಿಲ್ಲ.

ಕೇಂದ್ರ ಸರಕಾರ ಜಿ.ಎಸ್.ಟಿ ಕಾಯ್ದೆಯನ್ವಯ ಕೊಡಬೇಕಾದ ಸರಕು ಮತ್ತು ಸೇವಾ ಸುಂಕದ ಕರ್ನಾಟಕದ ಭಾಗವನ್ನು ಮತ್ತು ಇತರೇ ಬಾಕಿಗಳನ್ನು ಈಗಲೂ ನೀಡದಿರುವುದು ಖೇದಕರವಾಗಿದೆ.

ರಾಜ್ಯದ ಬಹುತೇಕ ಸಂಸದರು ಬಿಜೆಪಿಯವರೇ ಆಗಿದ್ದರೂ, ತಮ್ಮದೇ ಪಕ್ಷದ ನೇತೃತ್ವದ ಎನ್ ಡಿ ಎ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ, ತಮ್ಮದೇ ಪಕ್ಷದ ನೇತೃತ್ವದ ರಾಜ್ಯ ಸರಕಾರ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದರೂ, ರಾಜ್ಯದ ಜನತೆಯನ್ನು ರಕ್ಷಿಸುವಲ್ಲಿ ಮತ್ತು ರಾಜ್ಯದ ಸಂಕಷ್ಟವನ್ನು ಕೇಂದ್ರದ ಗಮನಕ್ಕೆ ತಂದು, ಒತ್ತಾಯಿಸಿ ರಾಜ್ಯಕ್ಕೆ ನೆರವು ತರುವಲ್ಲಿ ಘೋರವಾಗಿ ವಿಫಲರಾಗಿದ್ದಾರೆ.

ರಾಜ್ಯ ಸರಕಾರವೂ ರಾಜ್ಯದ ಜನತೆಗೆ ಅಗತ್ಯವಾದ ಪರಿಹಾರ ಒದಗಿಸುವಲ್ಲಿಯೂ ಅದು ಘೋರವಾಗಿ ವಿಫಲವಾಗಿದೆ. ಅದೇ ರೀತಿ, ಅದು, ಕೇಂದ್ರ ಸರಕಾರದಿಂದ ಪಡೆಯ ಬೇಕಾದ ಅಗತ್ಯ ನೆರವು ಮತ್ತು ಬಾಕಿಗಳನ್ನು ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಪಡೆಯುವಲ್ಲಿ ಹೆದರಿಕೆಯ ಮನೋಭಾವವನ್ನು ತೋರುತ್ತಿದೆ.

ಒಂದೆಡೆ, ಕೇಂದ್ರ ಸರಕಾರ ರಾಜ್ಯದ ಈ ಸಂಕಷ್ಟವನ್ನು ಮನಗಂಡು ಜನರನ್ನು ರಕ್ಷಿಸಲು ಕೊಡಬೇಕಾದ ಅಗತ್ಯ ನೆರವನ್ನು ಕೊಡುತ್ತಿಲ್ಲ. ಇನ್ನೊಂದೆಡೆ ಸಂಸದರು ಮತ್ತು ರಾಜ್ಯ ಸರಕಾರ ಕೇಂದ್ರ ಸರಕಾರದ ಮೇಲೆ ಅಗತ್ಯ ಒತ್ತಡವನ್ನು ಹೇರಿ ಅದನ್ನು ಪಡೆಯುತ್ತಿಲ್ಲ.

ಆದ್ದರಿಂದ, ಸಿಪಿಐಎಂ ಈ ಪತ್ರವನ್ನು ಬರೆಯ ಬೇಕಾಗಿ ಬಂದಿದೆ.

ತಕ್ಷಣವೇ ರಾಜ್ಯಕ್ಕೆ ನೀಡಬೇಕಾದ ಬರ ಹಾಗೂ ನೆರೆ ಪರಿಹಾರದ ಹಾಗೂ ಇತರೆ ಬಾಕಿ ಮತ್ತು ಜಿ.ಎಸ್.ಟಿ ಪಾಲು ಹಣವನ್ನು ಬಿಡುಗಡೆ ಮಾಡಬೇಕು. ದುಡಿಯುವ ಜನತೆಯ ಸಾಲದ ಬಾಧೆಯನ್ನು ನಿವಾರಿಸಲು ಸಾಲ ಮನ್ನಾ ಮಾಡಬೇಕು ಮತ್ತು ಉದ್ಯೋಗ ಖಾತ್ರಿ ಯೋಜನೆಯ ಮೊತ್ತವನ್ನು ದ್ವಿಗುಣಗೊಳಿಸಲು ಕ್ರಮ ವಹಿಸುವಂತೆ, ಈ ಮೂಲಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸುತ್ತದೆ.

*ಯು. ಬಸವರಾಜ,*
*ಕಾರ್ಯದರ್ಶಿ (1–08–2020)*



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ – ದಕ್ಷಿಣ ಜಿಲ್ಲಾ ಸಮಿತಿಗಳಿಂದ ಇಂದು ಮನೆಕೆಲಸ ಮಾಡುವ ಮಹಿಳೆ ಕೋವಿಡ್ 19 ಹರಡುತ್ತಿರುವ ಹಿನ್ನಲೆಯಲ್ಲಿ ಮನೆಕೆಲಸಕ್ಕೆ ಸೇರಿಸುತ್ತಿಲ್ಲ. 4.5 ತಿಂಗಳಿಂದ ಆದಾಯವಿಲ್ಲದೆ ಸಂಕಷ್ಟದಲ್ಲಿ ಬದುಕುತ್ತಿದ್ದಾರೆ. ಹಾಗಾಗಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಬಿಬಿಎಂಪಿ ಯ ಮೇಯರ್/ ಉಪಮೇಯರ್ ವಿವೇಚನಾ ನಿಧಿಯಿಂದ ಆರ್ಥಿಕ ಸಹಾಯ ಮಾಡಲು ಕೋರಿ. ಬಿಬಿಎಂಪಿ ಮೇಯರ್ ಗೌತಮ್ ಹಾಗೂ ಬಿಬಿಎಂಪಿ ಆಯುಕ್ತರಾದ ಮಂಜುನಾಥ ಪ್ರಸಾದ್ ರವರಿಗೆ ಮನವಿ ಸಲ್ಲಿಸಲಾಯಿತು. ನಿಯೋಗದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ, ರಾಜೇಶ್ವರಿ, ಸೇಲ್ವಿ, ಅನಿತ, ರೇಣುಕಾ, ಗಾಯಿತ್ರಿ, ಶಮಿಮ್ ಭಾಗವಹಿಸಿದ್ದರು.



## ಕಾಂ. ಸೀತಾಲಕ್ಷ್ಮಿ ಇನ್ನಿಲ್ಲ



ಭಾರತದ ಕಾರ್ಮಿಕ ಚಳುವಳಿಯಲ್ಲಿ ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ಗುರ್ತಿಸಿಕೊಂಡಿದ್ದ ಕಾರ್ಮಿಕ ಮುಖಂಡರಾದ ಸೀತಾಲಕ್ಷ್ಮಿಯವರು ಇಂದು ಬೆಂಗಳೂರಿನ ಸಹೋದರನ ಮನೆಯಲ್ಲಿ ನಿಧನರಾಗಿದ್ದಾರೆ.

ಸೀತಾ ಲಕ್ಷ್ಮಿ ಒಬ್ಬ ಸಾಧಾರಣ ಮಹಿಳೆಯಾಗಿ ಕೌಟುಂಬಿಕ ದೌರ್ಜನ್ಯವನ್ನು ಸವಾಲನ್ನು ಸ್ವೀಕರಿಸಿ ತನ್ನ ಕಂದನನ್ನು ಮಡಿಲಲ್ಲಿಟ್ಟುಕೊಂಡು ಜನಚಳುವಳಿಯಲ್ಲಿ ಕೆಲಸ ಮಾಡಿದವರು. ದೌರ್ಜನ್ಯಗಳಿಗೆ ಅಂಜದೆ ಅಂಚೆ ಇಲಾಖೆಯಲ್ಲಿ ಪೋಸ್ಟ್ ವುಮೆನ್ ಆಗಿ ಕೆಲಸ ಮಾಡುತ್ತಾ ಅಲ್ಲಿನ ಶೋಷಣೆಯನ್ನು ಮೆಟ್ಟಲು ಅಂದಿನ P&T union ನ ಸಕ್ರಿಯ ಕಾರ್ಯಕರ್ತೆ ಯಾಗಿ ದುಡಿದರು, ಅವರ ಸಂಘಟನಾ ಬದ್ಧತೆಯನ್ನು ಅರಿತ ಅಲ್ಲಿಯ ನೌಕರರು ಅಲ್ಲಿಯ ನಾಯಕಿಯನ್ನಾಗಿ ಆಯ್ಕೆ ಮಾಡಲು ಕಾರಣವಾಯಿತು ಎಂದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಅವರ ಜೊತೆ ನಡೆಸಿದ ಕೆಲಸದ ಅನುಭವಗಳನ್ನು ಮೆಲಕು ಹಾಕಿದರು.

ಅಂದಿನ ದಿನಗಳಲ್ಲಿ ಅಂಚೆ ಇಲಾಖೆಯ ಮುಷ್ಕರ ಅಂದರೆ ಅದು ಒಂದು ವಾರದಿಂದ 15 ದಿನಗಳ ತನಕ ಸಾಗುತ್ತಿತ್ತು ಅಂತಹ ಹೋರಾಟಗಳನ್ನು ಯಶಸ್ವಿ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರ ಬಯಸಿದ್ದರೆ ಮುಂಬಡ್ತಿ ಸಿಗುತ್ತಿತ್ತು ಆದರೆ ಅದನ್ನು ಅವರು ಕಡೆಯ ತನಕ ಬಯಸಲಿಲ್ಲ ಇಂತಹ ಬದ್ಧತೆಯ ನಾಯಕಿಗೆ ಈ ಸಂಘಟನೆಯ ಅಖಿಲ ಭಾರತ ಕಾರ್ಯದರ್ಶಿ ಯಾಗಿ ಇಡೀ ದೇಶಕ್ಕೆ ನೇತ್ರತ್ವಕೊಡುವ ಅವಕಾಶ ದೊರೆಯಿತು ಎಂದು ಸೀತಾಲಕ್ಷ್ಮಿಯವರು ಕುರಿತು ಅವರ ಒಡನಾಡಿಗಳು ಕಂಬನಿ ಮಿಡಿದಿದ್ದಾರೆ. ●

## ಕಾರ್ಮಿಕ ಚಳುವಳಿಯ ಸಮರಧೀರ ನಾಯಕ ಎಂ. ರಾಜಣ್ಣ ಇನ್ನಿಲ್ಲ



ಕಾರ್ಮಿಕ ಚಳುವಳಿಯ ನಾಯಕ ಎಂ. ರಾಜಣ್ಣ ನಿಧನರಾಗಿದ್ದಾರೆ. ಅವರ ನಿಧನಕ್ಕೆ ಕಾರ್ಮಿಕ ನಾಯಕರು ಕಂಬನಿ ಮಿಡಿದಿದ್ದಾರೆ.

ಎಂ. ರಾಜಣ್ಣನವರು ಸಿಐಟಿಯು ನ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ, ಸಿಐಟಿಯು ರಾಜ್ಯ ಸಮಿತಿಯ ಮಾಜಿ ಸದಸ್ಯರಾಗಿ, ಬೆಂಗಳೂರು ಸೌತ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ (BSIWU) ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ರಾಜಣ್ಣ ನಿಧನಾಗಿದ್ದಾರೆ.

ಇವರ ನಿಧನಕ್ಕೆ ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಶ್ರದ್ಧಂಜಲಿ ಅರ್ಪಿಸಿದ್ದು, ರಾಜಣ್ಣನವರು ಕಾರ್ಮಿಕರ ಏಳಿಗೆಗಾಗಿ ಹಲವಾರು ಹೋರಾಟಗಳನ್ನು ರೂಪಿಸಿದ್ದವರು. ಕರ್ನಾಟಕ ರಾಜ್ಯ ಹಮಾಲಿ ಫೆಡರೇಷನ್ ರಾಜ್ಯ ಖಜಾಂಚಿಯಾಗಿ ಸಹಾ ಅವರು ಕಾರ್ಯನಿರ್ವಹಿಸಿದ್ದರು ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷ ಕೆ.ಎನ್ ಉಮೇಶ್ ತಿಳಿಸಿದ್ದಾರೆ.

ಮೈಸೂರು ವೈನ್ಸ್ ಕಾರ್ಖಾನೆ ಕಾರ್ಮಿಕರಾಗಿ ಅದರ ಸಂಘ ಸ್ಥಾಪಿಸುವಲ್ಲಿ ಮತ್ತು ಸಂಘಕ್ಕೆ ಮಾನ್ಯತೆ ಪಡೆಯುವಲ್ಲಿನ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ರಾಜಣ್ಣ, ಕಾರ್ಮಿಕ ಚಳುವಳಿಯ ಸಮರಧೀರ ಮುಂಚೂಣಿ ನಾಯಕರಾಗಿದ್ದರು. ಮೈಸೂರು ರಸ್ತೆಯ ಹಲವು ಕಾರ್ಮಿಕ ಸಂಘಗಳ ಸ್ಥಾಪನೆಯಲ್ಲಿ ಅವುಗಳ ಹೋರಾಟಗಳ ಭಾಗವಾಗಿ ಹಲವು ಭಾರಿ ಜೈಲು ವಾಸವನ್ನು ಅನುಭವಿಸಿದ್ದರು. ನಿವೃತ್ತಿಯ ವರೆಗೆ ಮೈಸೂರು ವೈನ್ ಕಾರ್ಮಿಕರ ನಾಯಕರಾಗಿದ್ದ ಅವರು ನಿವೃತ್ತಿಯ ನಂತರ ಚಳುವಳಿಯ ಪೂರ್ಣವಧಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಾ, BSIWU ಅಧ್ಯಕ್ಷರಾಗಿ ಮೈಸೂರು ರಸ್ತೆಯ, ಬಿಡದಿ, ಹಾರೋಹಳ್ಳಿ ಮತ್ತು ಜಿಗಣೆ ಪ್ರದೇಶದ ಹಲವು ಕಾರ್ಮಿಕ ಸಂಘಗಳಿಗೆ ನಾಯಕರಾಗಿ ಹೋರಾಟಕ್ಕೆ ಮಾರ್ಗದರ್ಶನ ನೀಡುತ್ತಿದ್ದರು ಎಂದು ಕೆ.ಎನ್. ಉಮೇಶ್ ತಿಳಿಸಿದ್ದಾರೆ.

ದೀರ್ಘ ಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಕೆಂಗೇರಿ ಬಳಿಯ ತಮ್ಮ ಸ್ವಗ್ರಾಮವಾದ ಕೋಲೂರಿನಲ್ಲಿ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಗಂಡು ಹಾಗು ಒಬ್ಬ ಮಗಳು ಹಾಗೂ ಅಪಾರ ಕಾರ್ಮಿಕರನ್ನು ಅವರು ಆಗಲಿದ್ದಾರೆ. ●

## ಅಂಗನವಾಡಿ, ಬಿಸಿಯೂಟ, ಆಶಾ ನೌಕರರು ಅಖಿಲ ಭಾರತ ಮುಷ್ಕರ

















ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಪ್ರತಿಭಟನೆ...ಬೆಂಗಳೂರಿನ ಕೆ.ಆರ್.ಪುರಂ

ದೇಶದಲ್ಲಿರುವ ಕೇಂದ್ರ ಕಾರ್ಮಿಕ ಸಂಘಟನೆಗಳು ಯೋಜನಾ ಕಾರ್ಮಿಕರ ಅನೇಕ ವಿಷಯಗಳನ್ನು ಕೈಗೆತ್ತಿಕೊಂಡು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರದ ಗಮನ ಸೆಳೆಯುತ್ತಲೇ ಬಂದಿವೆ. ಮಾತ್ರವಲ್ಲ, 45 ಮತ್ತು 46 ನೇ ಭಾರತ ಕಾರ್ಮಿಕ ಸಮ್ಮೇಳನದ ಶಿಫಾರಸ್ಸುಗಳ ಜಾರಿಗೊಳಿಸಲು ನಿರಂತರವಾಗಿ ಹೋರಾಟಗಳನ್ನು ನಡೆಸಿ ಆಗ್ರಹಿಸುತ್ತಲೇ ಬಂದಿವೆ. ಈ ಕರೋನಾ ಕೋವಿಡ್–19 ಸಾಂಕ್ರಾಮಿಕದ ಕಾಲದಲ್ಲಿ ಯೋಜನಾ ಕಾರ್ಮಿಕರು ಅದರಲ್ಲೂ ವಿಶೇಷವಾಗಿ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು, ರಾಷ್ಟ್ರೀಯ ಆರೋಗ್ಯ ಮಿಶನ್ (ಎನ್.ಎಚ್.ಎಂ) ಕಾರ್ಯಕರ್ತರು ಹಾಗೂ ಆರೋಗ್ಯ ಕ್ಷೇತ್ರದಲ್ಲಿರುವ ಇತರರು ಕರೋನಾ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆ. ನಮ್ಮ ದೇಶದಲ್ಲಿ ಇವರಿಲ್ಲದಿದ್ದರೆ ಈ ಕಾಯಿಲೆಯು ಸಮುದಾಯದಲ್ಲಿ ಬಹುಬೇಗ ಪಸರಿಸುತ್ತಿತ್ತು. ಇಷ್ಟೆಲ್ಲದರ ನಡುವೆಯೂ, ತಳಮಟ್ಟದ ಕೆಲಸಗಾರರಾದ ಇವರಿಗೆ ಸುರಕ್ಷೆಯನ್ನು ನೀಡುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿರುವುದು ಮತ್ತು ಕೋವಿಡ್ ಕೆಲಸಗಾರರಿಗೆ ಜೀವರಕ್ಷಕ ಸುರಕ್ಷತಾ ಸಾಧನಗಳ ಕೊರತೆಯಿಂದಾಗಿ ಕೆಲವರು ಸಾಯುತ್ತಿರುವುದು ಆಘಾತಕಾರಿ ಸಂಗತಿಯಾಗಿದೆ.

ಸುರಕ್ಷತಾ ಕ್ರಮಗಳನ್ನು ವಹಿಸಲು, ವಿಮೆ ಇತ್ಯಾದಿ ಸೌಲಭ್ಯ ಒದಗಿಸಲು, ಅಪಾಯಕಾರಿ ಕೆಲಸಕ್ಕೆ ಪರಿಹಾರ ಭತ್ಯೆ ಇತ್ಯಾದಿ ನೀಡಬೇಕೆಂದು ಕೇಂದ್ರ ಕಾರ್ಮಿಕರ ಸಂಘಟನೆಗಳು ಪದೇಪದೇ ಹೋರಾಟಗಳನ್ನು ನಡೆಸಿ, ಮನವಿ ನೀಡಿ ಕೇಂದ್ರ ಸರ್ಕಾರದ ಮುಂದೆ ಬೇಡಿಕೆ ಮಂಡಿಸುತ್ತಲೇ ಬಂದಿವೆ. ಆದರೆ, ಭಾರತ ಸರ್ಕಾರವು ಇವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಲೇ ಇದೆ.

ಆದ್ದರಿಂದ, ಕೇಂದ್ರ ಕಾರ್ಮಿಕ ಸಂಘಟನೆಗಳು– ವಿಶ್ವ ಆರೋಗ್ಯ ಸಂಘಟನೆಯು (ಡಬ್ಲ್ಯು.ಎಚ್.ಓ) ವಿಧಿಸಿದ ಮಾನದಂಡಗಳಂತೆ ದೈಹಿಕ ಅಂತರವನ್ನು ಕಾಪಾಡಿಕೊಂಡು– ಮೂರು ದಿನಗಳ ಹೋರಾಟದ ಕಾರ್ಯತಂತ್ರವನ್ನು ರೂಪಿಸಿವೆ. ಅಗಸ್ಟ್ 7. 2020 ರಂದು ಯೋಜನಾ ಕಾರ್ಮಿಕರ ಮುಷ್ಕರವನ್ನು ನಡೆಸಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟದ ಕ್ವಿಟ್ ಇಂಡಿಯಾ ಚಳುವಳಿಯ ನೆನಪಿನ ದಿನವಾದ ಅಗಸ್ಟ್ 9, ಅಗಸ್ಟ್ 10ರಂದು "ಭಾರತ ರಕ್ಷಿಸಿ" ಹೋರಾಟದಲ್ಲಿ ಯೋಜನಾ ಕಾರ್ಮಿಕರು ಕೆಳಗಿನ ಪ್ರಮುಖ ಬೇಡಿಕೆಗಳಿಗಾಗಿ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾರೆ ಎಂದು ತಮಗೆ ಸೂಚನಾ ಪತ್ರ ನೀಡುತ್ತಿದ್ದೇವೆ.

1. ಮೂಲಭೂತ ಸೇವೆಗಳಾದ ಆರೋಗ್ಯ (ಆಸ್ಪತ್ರೆಯನ್ನೂ ಒಳಗೊಂಡು) ಪೋಷಕಾಂಶಗಳು (ಐಸಿಡಿಎಸ್, ಮಧ್ಯಾಹ್ನದೂಟ ಯೋಜನೆಯನ್ನೂ ಒಳಗೊಂಡು) ಮತ್ತು ಶಿಕ್ಷಣವೇ ಮುಂತಾದ ಅಗತ್ಯ ಮೂಲಭೂತ ಸೇವೆಗಳ ಖಾಸಗಿಕರಣದ ಪ್ರಸ್ತಾಪಗಳನ್ನು ಹಿಂಪಡೆಯಿರಿ. ಸಾರ್ವಜನಿಕ ವಲಯದ ಉದ್ದಿಮೆಗಳ ಮತ್ತು ಸೇವೆಗಳ ಖಾಸಗಿಕರಣ ನಿಲ್ಲಿಸಿ.
2. ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಧ್ಯಾಹ್ನದೂಟ ಯೋಜನೆ, ರಾಷ್ಟ್ರೀಯ ಆರೋಗ್ಯ ಮಿಶನ್ (ಎನ್.ಎಚ್.ಎಂ) ಯೋಜನೆ ಮುಂತಾದ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಸಾಕಷ್ಟು ಬಜೆಟ್ ಅನುದಾನದ ಹಂಚಿಕೆಯನ್ನು ಮಾಡುವ ಜೊತೆಗೆ ಯೋಜನೆಗಳನ್ನು ಖಾಯಂ ಮಾಡಿ.
3. 45 ಮತ್ತು 46 ನೇ ಭಾರತ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನಗಳ ಶಿಫಾರಸ್ಸಿನಂತೆ ಯೋಜನಾ ಕಾರ್ಮಿಕರನ್ನು (ಅಧಿಕೃತವಾಗಿ) "ಕಾರ್ಮಿಕರು" ಎಂದು ಖಾಯಂ ಮಾಡಿ. ಪ್ರತಿ ತಿಂಗಳಿಗೆ 21000 ರೂ. ಕನಿಷ್ಟ ವೇತನ ಪಾವತಿಸಿ, ಮಾಸಿಕ ಪಿಂಚಣಿ 10,000 ರೂ. ನೀಡಿ. ಎಲ್ಲಾ ಯೋಜನಾ ಕಾರ್ಮಿಕರಿಗೂ ಇಎಸ್.ಐ ಮತ್ತು ಪಿಎಫ್ ನೀಡಿ.
4. ಆಹಾರದ ಹಕ್ಕು ಮತ್ತು ಶಿಕ್ಷಣದ ಹಕ್ಕಿನಂತೆ ಸಾರ್ವತ್ರಿಕ ಆರೋಗ್ಯದ ರಕ್ಷಣೆಗೋಸ್ಕರ ಶಾಸನವನ್ನು ಜಾರಿ ಮಾಡಿ.
5. ಕ್ರೂಢೀಕರಣದ ಹೆಸರಿನಲ್ಲಿ ಕಾರ್ಮಿಕ ಕಾನೂನುಗಳನ್ನು ಮಾಲಿಕರ ಪರವಾಗಿ ಬದಲಾಯಿಸುವ, ಕೋವಿಡ್ ಅವಧಿಯ ನೆಪವೊಡ್ಡಿ ಕೆಲಸದ ಅವಧಿಯನ್ನು ಹೆಚ್ಚಿಸುವ ಮತ್ತು ಕಾರ್ಮಿಕ ಕಾಯ್ದೆಗಳನ್ನೇ ಸ್ಥಗಿತಗೊಳಿಸುವ ಕ್ರಮವನ್ನು ಕೈಬಿಡಿ. ಯೋಜನಾ ಕೆಲಸಗಾರರನ್ನು ಕಾರ್ಮಿಕರೆಂಬ ಶ್ರೇಣಿಗೆ ಸೇರಿಸಿ. (ಕಾನೂನುಬದ್ಧವಾಗಿ ಕಾರ್ಮಿಕರೆಂದು ಮಾಡಿ)
6. ಆದಾಯ ತೆರಿಗೆ ಪಾವತಿಸಲಾಗದ ಎಲ್ಲಾ ಬಡ ಕುಟುಂಬಗಳಿಗೆ 6 ತಿಂಗಳ ಕಾಲ ಪ್ರತಿ ತಿಂಗಳಿಗೆ 7500 ರೂ. ನೀಡಿ. ಅವಶ್ಯಕತೆ ಇದ್ದವರಿಗೆಲ್ಲ ಉಚಿತವಾಗಿ ರೇಷನ್ ಮತ್ತು ಆಹಾರ ಧಾನ್ಯ ನೀಡಿರಿ. ಇವರ ಜೀವನ ಭದ್ರತೆಗೆ ನಿಶ್ಚಿತ ಕೆಲಸ ಮತ್ತು ಆದಾಯವನ್ನು ಖಾತ್ರಿಗೊಳಿಸಿ.
7. ಕೋವಿಡ್ 19 ರ ಅವಧಿಯ ಎಲ್ಲಾ ಕೆಲಸಗಾರರಿಗೆ ವಿಶೇಷವಾಗಿ ಆಶಾ, ಅಂಗನವಾಡಿ, ಮತ್ತು ಆರೋಗ್ಯ ಕ್ಷೇತ್ರದಲ್ಲಿರುವ ಇತರರಿಗೆ ಸುರಕ್ಷತಾ ಸಾಧನಗಳನ್ನು ನೀಡಿ. ಧಾರಕ ಪ್ರದೇಶ ವ್ಯಾಪ್ತಿ (ಕಂಟೈನ್ಮೆಂಟ್) ಮತ್ತು ಕೆಂಪು ವಲಯದಲ್ಲಿ ಕೆಲಸ ಮಾಡುವವರಿಗೆ ಪಿಪಿಇ ಕಿಟ್ ಗಳನ್ನು ನೀಡಿ. ಪುನಃ ಪುನಃ ಇವರೆಲ್ಲರ ಆರೋಗ್ಯದ ಉಚಿತ ತಪಾಸಣೆ ಮಾಡಬೇಕು ಮತ್ತು ಕೋವಿಡ್ ಕಾರ್ಮಿಕರು ಸ್ವ ಇಚ್ಛೆಯಿಂದ ಬಯಸಿದಾಗಲು ಉಚಿತ ತಪಾಸಣೆಗೆ ಒಳಪಡಿಸಬೇಕು. 60 ವರ್ಷದವರಿಗೆ ಹಾಗೂ ಆರೋಗ್ಯ ಸಮಸ್ಯೆ ಇದ್ದವರಿಗೆ ಕೊರೊನಾ ಕೆಲಸಕ್ಕೆ ಆದೇಶಿಸಬಾರದು.
8. ಕೋವಿಡ್ – 19 ಕೆಲಸದ ಮುಂಚೂಣಿ ಕೆಲಸಗಾರರಾಗಿ ತೊಡಗಿಸಿಕೊಂಡವರು ಯಾವುದೇ ಸ್ವರೂಪದಲ್ಲಿ ಸತ್ತರೂ ಅವರಿಗೆ 50 ಲಕ್ಷ ರೂ. ವಿಮಾ ಸೌಲಭ್ಯ ಸಮಾನವಾಗಿ ನೀಡುವುದನ್ನು ಖಾತ್ರಿಪಡಿಸಿ. ಅವಲಂಬಿತರಿಗೆ ಪಿಂಚಣಿ ಮತ್ತು ಖಾಯಂ ಉದೋಗ ಕಲ್ಪಿಸಿ. ಇಡೀ ಕುಟುಂಬಕ್ಕೆ ಕೋವಿಡ್ 19 ಉಚಿತ ತಪಾಸಣೆ ಮತ್ತು ಚಿಕಿತ್ಸೆ ಸೌಲಭ್ಯ ಒದಗಿಸಿ.
9. ರಾಜ್ಯದಲ್ಲಿ 5 ಜನ ಅಂಗನವಾಡಿ ನೌಕರರು, ಇಬ್ಬರು ಆಶಾ ಕಾರ್ಯಕರ್ತೆಯರು ಈಗಾಗಲೇ ಮರಣ ಹೊಂದಿದ್ದಾರೆ. ಮತ್ತು ಸುಮಾರು 35 ಜನರು ಸೊಂಕಿತರಾಗಿದ್ದಾರೆ ಮಾತ್ರವಲ್ಲದೆ ಕೆಲಸದ ಒತ್ತಡಗಳಿಂದ 23 ಜನ ನೌಕರರು ನಿಧನರಾಗಿದ್ದಾರೆ. ಇವರಿಗೆ ತಕ್ಷಣ ಸೂಕ್ತ ಪರಿಹಾರ ನೀಡಬೇಕು.
10. ಕೋವಿಡ್ – 19 ಕೆಲಸದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಗುತ್ತಿಗೆ ಕಾರ್ಮಿಕರಿಗೂ, ಆಶಾ, ಅಂಗನವಾಡಿ, ಎನ್.ಎಚ್.ಎಂ ನ ಎಲ್ಲಾ ಯೋಜನಾ ಕೆಲಸಗಾರರಿಗೂ "ಅಪಾಯಕಾರಿ ಕೆಲಸದ ಭತ್ಯೆ"ಯಾಗಿ ಪ್ರತಿ ತಿಂಗಳು 10,000 ರೂ. ನೀಡಿರಿ. ಈವರೆಗೆ ಬಾಕಿ ಇರುವ ಎಲ್ಲಾ ವೇತನ, ಭತ್ಯೆ ಇತ್ಯಾದಿ ಕೂಡಲೇ ಪಾವತಿಸಿ.
11. ಕೆಲಸದಲ್ಲಿದ್ದಾಗ ಸೋಂಕಿತರಾಗುವ ಎಲ್ಲ ಕಾರ್ಮಿಕರಿಗೂ ಕನಿಷ್ಟ 10 ಲಕ್ಷ ರೂ. ಪರಿಹಾರ ನಿಧಿಯನ್ನು ನೀಡಿ.
12. ಮಧ್ಯಾಹ್ನದೂಟ (ಅಕ್ಷರದಾಸೋಹ ಬಿಸಿಯೂಟ) ಕಾರ್ಮಿಕರಿಗೆ ಬೇಸಿಗೆ ರಜಾ ಅವಧಿಯನ್ನೂ ಒಳಗೊಂಡು ಶಾಲೆ ಮುಚ್ಚಿರುವ ಸಂದರ್ಭದಲ್ಲಿ ಮಾಸಿಕ 10,000 ರೂ. ಪಾವತಿಸಿ. ಅಕ್ಷರ ದಾಸೋಹದಲ್ಲಿ ಕೇಂದ್ರೀಕೃತ ಅಡುಗೆ ಪದ್ಧತಿ ಮತ್ತು ಗುತ್ತಿಗೆ ಪದ್ಧತಿ ಜಾರಿ ಮಾಡಬಾರದು.
13. ರಾಜ್ಯದಲ್ಲಿ ಬಿಸಿಯೂಟ ನೌಕರರಿಗೆ 2020 ಎಪ್ರೀಲ್‌ನಿಂದ ವೇತನ ಪಾವತಿಸಿ, ಕ್ವಾರೈಂಟೆನ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಬಿಸಿಯೂಟ ನೌಕರರಿಗೆ ವೇತನ ಪಾವತಿ ಕೂಡಲೇ ಮಾಡಬೇಕು.
14. ರಾಜ್ಯದಲ್ಲಿ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಮೂಲಭೂತ ಸಂರಕ್ಷಣಾ ಸೌಕರ್ಯಗಳ ಕೊರತೆ ಇರುವುದರಿಂದ ವೈದ್ಯಕೀಯ ತಪಾಸಣೆ ಮೂಂದುಡಬೇಕು.
15. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಕೇಂದ್ರದ ಬಜೆಟ್ ಹಂಚಿಕೆಯಲ್ಲಿ ಹಣಕಾಸು ಹೆಚ್ಚಿಸಿ. ಐಸಿಡಿಎಸ್ ಮತ್ತು ಮಧ್ಯಾಹ್ನದೂಟ (ಎಮ್.ಡಿ.ಎಂ.ಎಸ್) ಯೋಜನೆಯ ಫಲಾನುಭವಿಗಳಿಗೆ ಈ ತಕ್ಷಣ ಒಳ್ಳೆಯ ಗುಣಮಟ್ಟದ ಆಹಾರ ಧಾನ್ಯ ಇರುವ ಉಚಿತ ರೇಷನ್ ಪೂರೈಸಿ. ವಾಪಸ್ ಬಂದಿರುವ ಎಲ್ಲಾ ವಲಸೆ ಕಾರ್ಮಿಕರನ್ನೂ ಈ ಯೋಜನೆಯಲ್ಲಿ ಸೇರಿಸಿ.
16. ತೆರಿಗೆ ಪಾವತಿಸಲಾಗದ ಬಡ ಕುಟುಂಬಗಳಿಗೆ ಕೋವಿಡ್ 19 ರ ಪರೀಕ್ಷೆ ಮತ್ತು ಚಿಕಿತ್ಸೆ ಉಚಿತವಾಗಿ ನೀಡಿ. ಕ್ವಾರಂಟೈನ್ ಕೇಂದ್ರಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಸಾಕಷ್ಟು ಸೌಲಭ್ಯಗಳನ್ನು ಖಾತ್ರಿಪಡಿಸಿ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮತ್ತು ಆರೋಗ್ಯ ಮೂಲಸೌಕರ್ಯಗಳನ್ನು ಬಲಪಡಿಸಿ. ಒಟ್ಟು ದೇಶೀಯ ಉತ್ಪಾದನೆಯಲ್ಲಿ (ಜಿಡಿಪಿ ಯಲ್ಲಿ) 6% ನ್ನು ಆರೋಗ್ಯ ಕ್ಷೇತ್ರಕ್ಕೆ ಹಂಚಿಕೆ ಮಾಡಿ.
17. ಹಣಕಾಸು ಸಂಪನ್ಮೂಲಗಳ ಕ್ರೂಢೀಕರಣವಾಗಲು, ಭವ್ಯ ಪಾರ್ಲಿಮೆಂಟ್ ಭವನ ಪುನರ್ ನಿರ್ಮಾಣದಂಥ (ಸೆಂಟ್ರಲ್ ವಿಸ್ಟಾ ಪ್ರೊಜೆಕ್ಟ್) ಯೋಜನೆಗಳನ್ನು ಕೈಬಿಡಿ. ಅತಿ ಶ್ರೀಮಂತರಿಗೆ ತೆರಿಗೆ ವಿಧಿಸಿ. ಯಾವೆಲ್ಲ ಅತಿ ಶ್ರೀಮಂತರು ಉದ್ದೇಶಪೂರ್ವಕವಾಗಿ ಬಾಕಿ ಇಟ್ಟುಕೊಂಡಿದ್ದಾರೋ ಆ ಎಲ್ಲಾ ಸಾಲಗಳನ್ನೂ ಕಡ್ಡಾಯವಾಗಿ ವಸೂಲಿ ಮಾಡಿ. ಸಂಪನ್ಮೂಲಗಳನ್ನು ಸಂಗ್ರಹಿಸಿ.

ಎಂಬಿ. ಪುಷ್ಪ ಹಾಸನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಂಗನವಾಡಿ ನೌಕರರ ಸಂಘ ಜಯಂತಿ ತಾಲ್ಲೂಕು ಕಾರ್ಯದರ್ಶಿ ಮೀನಾಕ್ಷಿ ಜಿಲ್ಲಾ ಉಪಾಧ್ಯಕ್ಷರು ಮುಂತಾದವರಿದ್ದರು. ■

# ಅಂಗನವಾಡಿ, ಬಿಸಿಯೂಟ, ಆಶಾ ನೌಕರರು ಅಖಿಲ ಭಾರತ ಮುಷ್ಕರ

## ಅಗಸ್ಟ್ 7, 2020 ರಂದು ಜಂಟಿ ಸಂಘಟನೆಗಳ ನೇತೃತ್ವದಲ್ಲಿ




# ಜಂಟಿ ಕಾರ್ಯದರ್ಶಿ ಜೊತೆ ಅಂಗನವಾಡಿ ನೌಕರರ ಮಾತುಕತೆ



ಒಂದು ವಾರಗಳ ಕಾಲ ಕರ್ನಾಟಕ ರಾಜ್ಯ ಅಂಗನವಾಡಿ (ಸಿಐಟಿಯು) ನೌಕರರ ಸಂಘಟನೆಯ ನೇತೃತ್ವದಲ್ಲಿ ನಡೆದ ಅಂಗನವಾಡಿ ಮುಷ್ಕರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿಕಾರ್ಯದರ್ಶಿಗಳು ಸಭೆ ನಡೆಸುವ ಮೂಲಕ ತಾತ್ಕಲಿಕ ಅಂತ್ಯ ಕಂಡಿದೆ.

ನಿವೃತ್ತಿ ಆದವರಿಗೆ ಹಣ ಬಿಡುಗಡೆ ಹಾಗೂ ಉಳಿದ ಎಲ್ಲರಿಗೂ ಎಲ್‌ಐಸಿ ಆಧಾರಿತ ಖಾಯಂ ಪಿಂಚಣಿ ಜಾರಿಮಾಡುವುದು.ಸೇವಾಜೇಷ್ಟತೆ ಆಧಾರದಲ್ಲಿ ಗೌರವಧನ. ಕೋವಿಡ್ 19 ವಾರಿಯರ್ಸ್ ಆಗಿ ದುಡಿಯುತ್ತಿರುವ ವರಿಗೆ ಸಂರಕ್ಷಣಾ ಸಾಧನಗಳನ್ನು ನೀಡಬೇಕು, ಕೆಲಸ ಮಾಡುವಾಗ ಅಥವಾ ಸೋಂಕು ತಗಲಿ ಮರಣ ಹೊಂದಿದವರಿಗೆ ಪರಿಹಾರವು 50 ಲಕ್ಷ ಕ್ಕೆ ಏರಿಕೆಯಾಗಬೇಕು ಎಂದು ಆಗ್ರಹಿಸಿದರು.

ಗೌರವಧನ ತಿಂಗಳಿಗೆ ಸರಿಯಾಗಿ ಬಿಡುಗಡೆ ಮಾಡಬೇಕು, ಮೊಟ್ಟೆ ಹಣ ಮುಂಗಡವಾಗಿ ನೀಡುವುದು. ಮೇಲ್ವಿಚಾರಕಿ ಹುದ್ದೆಯ ನೋಟಿಫಿಕೇಷನ್ ನಲ್ಲಿ, ಟಫಿ ಆದವರಿಗೆ ಎಂದು ತಿದ್ದುಪಡಿ ತರುವ ಬಗ್ಗೆ, ಎಲ್ಲಾ ಅಂಗನವಾಡಿ ಕಾರ್ಯಕರ್ತರಿಗೆ ಕೋವಿಡ್ ತಪಾಸಣೆ ಮಾಡಿಸುವುದು ಮತ್ತೆ ಹಲವಾರು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಾಯಿತು.

ರಾಜ್ಯ ನಿಯೋಗದಲ್ಲಿ ಅದ್ಯಕ್ಷರಾದ ಎಸ್, ವರಲಕ್ಷ್ಮಿ. ಪ್ರದಾನ ಕಾರ್ಯದರ್ಶಿ ಸುನಂದಾ. ಖಜಾಂಚಿ ಕಮಲಾ. ಕಾರ್ಯದರ್ಶಿ ಲಕ್ಮಿದೇವಮ್ಮ ಸಭೆಯಲ್ಲಿ ಹಾಜರಿದ್ದರು. ■

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

**ಪ್ರಭುತ್ವ, ಅಧಿಕಾರ ಹಾಗೂ ಸಂಸ್ಕೃತಿಯ ನಡುವಿನ ಸಂಘರ್ಷಮಯ ಸಂಬಂಧಗಳು ಎಂದಿಗೂ ಇದ್ದೇ ಇವೆ. ತತ್ವಜ್ಞಾನಿ ಫೂಕೋನ ಮಾತಿನಲ್ಲಿ ಹೇಳುವುದಾದರೆ ಅಧಿಕಾರದ (power) ವ್ಯಾಪ್ತಿಯ ಹೊರಗೆ ಯಾವುದೂ ಇಲ್ಲ. ಸಂಸ್ಕೃತಿಯು ಈ ಅಧಿಕಾರದಲ್ಲಿ ಪಾಲುಗೊಳ್ಳುತ್ತದೆ; ಶಾಮೀಲಾಗುತ್ತದೆ; ವಿರೋಧ ಪ್ರತಿರೋಧ ಹೂಡುತ್ತದೆ. ಆದರೆ ಇದೆಲ್ಲವೂ ಅಧಿಕಾರದ ನೆರಳಿನಲ್ಲಿಯೆ. ಹಾಗಿರುವಾಗ ಕನ್ನಡದ ಅನೇಕ ಬರಹಗಾರರು ಈಗಲೂ ಸಾಹಿತ್ಯ-ಸಂಸ್ಸೃತಿಗಳು ಪ್ರಭುತ್ವ ಅಥವಾ ಸರಕಾರದ ವ್ಯಾಪ್ತಿಯ ಆಚೆಗಿರುವ ಅಬಾಧಿತವಾದ ವಿದ್ಯಮಾನಗಳು ಎನ್ನುವ ನಂಬಿಕೆ ಹೊಂದಿದ್ದಾರೆ.**


**ಈ ವಿಷಯಗಳು ಚರ್ಚೆಗೆ ಬಂದ ಕೂಡಲೆ 'ಸಾಹಿತ್ಯ ಸಂಸ್ಸೃತಿಗಳಲ್ಲಿ ರಾಜಕೀಯವಿರಬಾರದು. ಯಾವುದೇ "ಇಸಮ್" ಇರಬಾರದು. ಎಡ-ಬಲಗಳು ಇರಬಾರದು' ಎನ್ನುವ ಪ್ರತಿಕ್ರಿಯೆಗಳು ಶುರುವಾಗುತ್ತವೆ. ಸಾಮಾನ್ಯವಾಗಿ ರಾಜಕೀಯ ಇರಬಾರದು ಎಂದರೆ ಎಡಪಂಥೀಯ ರಾಜಕೀಯ ಇರಬಾರದು ಎಂದೇ ಅರ್ಥ. ಇದು ತುಂಬಾ ಅಪ್ರಬುದ್ಧವಾದುದು. ಹಿರಿಯ ಅರ್ಥದಲ್ಲಿ ಸಂಸ್ಕೃತಿಯು ರಾಜಕೀಯದ ಭಾಗವೇ ಆಗಿರುತ್ತದೆ. ಒಳ್ಳೆಯ ಕಲೆ ಒಳ್ಳೆಯ ರಾಜಕೀಯವನ್ನು ಸಮರ್ಥಿಸುತ್ತದೆ. ಅಂದರೆ, ಪಕ್ಷ ರಾಜಕೀಯವನ್ನಲ್ಲ, ಅಧಿಕಾರದ ಅಸಮಾನತೆಯನ್ನು ಪ್ರಶ್ನಿಸುವ, ಅದರ ದೌರ್ಜನ್ಯವನ್ನು ಬಯಲಿಗೆಳೆವ ರಾಜಕೀಯವನ್ನು ಅದು ಮಾಡುತ್ತದೆ.**

# ಸಂಸ್ಕೃತಿ ಮತ್ತು ಪ್ರಭುತ್ವ

ಪ್ರಭುತ್ವ(state)ದ ಶಕ್ತಿಯ ಆಚೆಗೆ, ಅಂದರೆ ಅದರ ಅಧಿಕಾರದ ವ್ಯಾಪ್ತಿಯ ಹೊರಗೆ ಇರುವುದು ಯಾವುದು ಅನ್ನುವುದರ ಬಗ್ಗೆ ಅನೇಕ ಚರ್ಚೆಗಳು ನಡೆದಿವೆ. ಈ ಚರ್ಚೆಯ ಬೇರುಗಳನ್ನು ಹುಡುಕುತ್ತಾ ಹೋದರೆ ನಾವು ಪ್ರಾಚೀನ ಕಾಲದ ಪರಂಪರೆಗಳವರೆಗೆ ತಲುಪುತ್ತೇವೆ. ಉದಾಹರಣೆಗೆ ಗ್ರೀಕ್ ತತ್ವಜ್ಞಾನಿ ಪ್ಲೇಟೋ ತನ್ನ Republic ಹಾಗೂ ಇತರ ಕೃತಿಗಳಲ್ಲಿ ಈ ವಿಷಯದ ಕುರಿತು ವಿಸ್ತಾರವಾಗಿ ಚರ್ಚೆ ಮಾಡಿದ್ದ. ಸ್ವತಃ ಕವಿಯ ಪ್ರತಿಭೆಯುಳ್ಳ ಅವನಿಗೆ ಆದರ್ಶ ಗಣರಾಜ್ಯದ ಅಧಿಕಾರವೇ ಮುಖ್ಯವಾಗಿತ್ತು. ಕಾವ್ಯ ಅಥವಾ ನಾಟಕಗಳಲ್ಲ. ಕಾವ್ಯ ಹಾಗೂ ನಾಟಕಗಳು ಸತ್ಯವನ್ನು ಹೇಳುವುದಿಲ್ಲ; ಅಲ್ಲದೆ ಮನುಷ್ಯರ ತಾರ್ಕಿಕವಾದ ನಡವಳಿಕೆಗೆ ಅಪಾಯಕಾರಿಯಾದ ಭಾವನೆಗಳನ್ನು ಉದ್ರೇಕಿಸುತ್ತವೆ – ಇವೇ ಮುಂತಾದ ಗಾಢವಾದ ಅನುಮಾನಗಳು ಅವನಿಗಿದ್ದವು. ಮಹಾಜ್ಞಾನಿಯಾಗಿದ್ದರೂ ಕಾವ್ಯದ ಸೋಂಕೇ ಇರದ ಅವನ ಶಿಷ್ಯನಾದ ಅರಿಸ್ಟಾಟಲ್ ನಾಟಕ, ಅದರಲ್ಲೂ ಗ್ರೀಕ್ ಸಂಸ್ಕೃತಿಯ ಮುಖ್ಯ ಭಾಗವಾಗಿದ್ದ ದುರಂತ ನಾಟಕಗಳು, ನಮ್ಮ ಆಳವಾದ ಭಾವನೆಗಳ ಶುದ್ಧೀಕರಣವನ್ನು ಮಾಡುತ್ತವೆಯೆಂದು ಕಲೆಯನ್ನು ಸಮರ್ಥಿಸಿದೆ. ಅದೇ ಹೊತ್ತಿಗೆ ಆರಿಸ್ಟೋಫೇನಸ್‌ನಂಥ ನಾಟಕಕಾರರು ಕವಿಗಳನ್ನು, ನಾಟಕಕಾರರನ್ನು ಇನ್ನಿಲ್ಲದಂತೆ ಲೇವಡಿ ಮಾಡಿದ್ದರು. ಇದರ ಒಟ್ಟು ಅರ್ಥವೆಂದರೆ ಕಲೆ ಮತ್ತು ಸಂಸ್ಕೃತಿಗಳು ಹಾಗೂ ರಾಜಕೀಯದ ಮಧ್ಯದ ಸಂಬಂಧಗಳನ್ನು ಆ ಕಾಲದಲ್ಲಿ ಆಳವಾಗಿ ಚರ್ಚಿಸಲಾಯಿತು.

ಇದು ನಂತರದ ಎಲ್ಲಾ ಕಾಲಘಟ್ಟಗಳಲ್ಲೂ ನಡೆದಿರುವ ಚರ್ಚೆ ಮಾತ್ರವಲ್ಲ. ಪ್ರಭುತ್ವವು ಕಾಲಕಾಲಕ್ಕೆ ಸಂಸ್ಕೃತಿಗೆ ಸೇರಿದ ವಿದ್ಯಮಾನಗಳ ಮೇಲೆ ಹತೋಟಿ ಸಾಧಿಸಲು ನಿರಂತರ ಪ್ರಯತ್ನ ಮಾಡುತ್ತಲೇ ಬಂದಿದೆ. 16 ಮತ್ತು 17ನೇ ಶತಮಾನದ ಇಂಗ್ಲೆಂಡ್‌ನಲ್ಲಿ ನಾಟಕಗಳ ಬಗ್ಗೆ ತೀವ್ರ ಟೀಕೆಗಳು ಬಂದವು. ಒಂದು ಘಟ್ಟದಲ್ಲಿ ನಾಟಕ ಗೃಹಗಳನ್ನು ಬಂದು ಮಾಡಲಾಯಿತು ಕೂಡ. ಆ ನಾಟಕಗಳಲ್ಲಿ ಅಶ್ಲೀಲತೆಯಿರುತ್ತದೆ ಎಂದು ಕಾರಣ ಕೊಡಲಾಯಿತಾದರೂ ನಿಜವಾದ ಕಾರಣವೆಂದರೆ ನಾಟಕ ರಂಗವು ಸಾಂಸ್ಕೃತಿಕ ರಾಜಕೀಯದ ಅಭಿವ್ಯಕ್ತಿಯಾಗಿತ್ತು. ಇದರಿಂದಾಗಿ ಪ್ರಭುತ್ವವು ಅದರ ಬಗ್ಗೆ ಸಂಶಯ ಹೊಂದಿತ್ತಲ್ಲದೆ ಅದರ ಮೇಲೆ ನಿಯಂತ್ರಣ ತರಲು ಪ್ರಯತ್ನಿಸಿತು. ಇದು ಕಾವ್ಯದ ಬಗ್ಗೆಯೂ ನಿಜವಾಗಿತ್ತು. 17ನೇ ಶತಮಾನದ ಹಾಗೂ 18ನೇ ಶತಮಾನದ ಇಂಗ್ಲೀಷ್ ಕಾವ್ಯ ನೇರವಾಗಿ ರಾಜಕೀಯ ವಿಷಯಗಳ ಬಗ್ಗೆ ಇತ್ತು.

ಭಾರತದ ಸಂದರ್ಭದಲ್ಲಿ ನೋಡುವುದಾದರೆ ವಸಾಹತುಶಾಹಿ ಬಂಗಾಲದ ಆಧುನಿಕ ಜನಪ್ರಿಯ ನಾಟಕಗಳು ನೇರವಾಗಿ ರಾಜಕೀಯದ ಕನ್ನಡಿಗಳೇ ಆಗಿದ್ದವು. ನೀಲಿ ಬೆಳೆಗಾರರ ಬಗೆಗಿನ 'ನೀಲದರ್ಪಣ'ವು ನೀಲಿ ಬೆಳೆಯುವ ಎಸ್ಟೇಟ್ ಮಾಲೀಕರಾದ ಬ್ರಿಟಿಷ್ ಪುರುಷರ ದೌರ್ಜನ್ಯ, ಲೈಂಗಿಕ ಅತ್ಯಾಚಾರ, ಬ್ರಿಟಿಷ್ ನ್ಯಾಯಾಧೀಶರ ಪಕ್ಷಪಾತ ಇವೆಲ್ಲವನ್ನು ನೇರವಾಗಿ ಪ್ರಶ್ನಿಸಿತ್ತು. ಇಂಥ ನೂರಾರು ನಾಟಕಗಳು ಜನಪ್ರಸಿದ್ಧವಾಗಿದ್ದವು. ಆದ್ದರಿಂದಲೇ ಬ್ರಿಟಿಷ್ ಆಡಳಿತಶಾಹಿಯು ನಾಟಕಗಳ ಮೇಲೆ ನಿರ್ಬಂಧ ಹೇರಲು ಡಿ.ಪಿ.ಎ (D.P.A) ಕಾನೂನನ್ನು ಜಾರಿಗೆ ತಂದಿತು. ಇದು ಈಗಲೂ ಇದೆಯೆಂದು ಕೇಳಿದ್ದೇನೆ. ಇದರ ಪರಿಣಾಮ ಕರ್ನಾಟಕದ ಮೇಲೆಯೂ ಆಯಿತು. 'ಸಂಗ್ಯಾ–ಬಾಳ್ಯಾ' ದ ಪ್ರದರ್ಶನಕ್ಕೆ ವಿಶೇಷ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು. ವಿಜಯಪುರದ ಕಂದ್ಗಲ್ ಹನಮಂತರಾವ್ ಅವರು ಅವರ ನಾಟಕಗಳಿಂದಾಗಿ ಪೋಲೀಸ್ ಠಾಣೆಗಳಿಗೆ




ಅಲೆಯಬೇಕಾಯಿತು. 'ನರಬಲಿ' ಪದ್ಯ ಬರೆದಿದ್ದಕ್ಕಾಗಿ ಕವಿ ದ.ರಾ.ಬೇಂದ್ರೆಯವರು ಜೈಲಿಗೆ ಹೋಗಿ ಆನಂತರ ನಜರ್‌ಬಂದ್‌ನಲ್ಲಿ ಇರಬೇಕಾಯಿತು.

ಈ ವಿವರಗಳಿಂದ ಗೊತ್ತಾಗುವಂತೆ ಪ್ರಭುತ್ವ, ಅಧಿಕಾರ ಹಾಗೂ ಸಂಸ್ಕೃತಿಯ ನಡುವಿನ ಸಂಘರ್ಷಮಯ ಸಂಬಂಧಗಳು ಎಂದಿಗೂ ಇದ್ದೇ ಇವೆ. ತತ್ವಜ್ಞಾನಿ ಫೂಕೋನ ಮಾತಿನಲ್ಲಿ ಹೇಳುವುದಾದರೆ ಅಧಿಕಾರದ (power) ವ್ಯಾಪ್ತಿಯ ಹೊರಗೆ ಯಾವುದೂ ಇಲ್ಲ. ಸಂಸ್ಕೃತಿಯು ಈ ಅಧಿಕಾರದಲ್ಲಿ ಪಾಲುಗೊಳ್ಳುತ್ತದೆ; ಶಾಮೀಲಾಗುತ್ತದೆ; ವಿರೋಧ ಪ್ರತಿರೋಧ ಹೂಡುತ್ತದೆ. ಆದರೆ ಇದೆಲ್ಲವೂ ಅಧಿಕಾರದ ನೆರಳಿನಲ್ಲಿಯೆ. ಹಾಗಿರುವಾಗ ಕನ್ನಡದ ಅನೇಕ ಬರಹಗಾರರು ಈಗಲೂ ಸಾಹಿತ್ಯ–ಸಂಸ್ಕೃತಿಗಳು ಪ್ರಭುತ್ವ ಅಥವಾ ಸರಕಾರದ ವ್ಯಾಪ್ತಿಯ ಆಚೆಗಿರುವ ಅಬಾಧಿತವಾದ ವಿದ್ಯಮಾನಗಳು ಎನ್ನುವ ನಂಬಿಕೆ ಹೊಂದಿದ್ದಾರೆ? ಈ ಕುರಿತು ಕೆ.ವಿ.ಅಕ್ಷರ ಅವರು ಶಿವಮೊಗ್ಗದಲ್ಲಿ, ಸಾಗರದಲ್ಲಿ ಮಾಡಿದ ಭಾಷಣಗಳು ಮತ್ತು ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ಬರೆದ ಲೇಖನವನ್ನು ಗಮನಿಸಬೇಕಾಗಿದೆ.

ಅಕ್ಷರ ಅವರು ಸಾಹಿತ್ಯ, ನಾಟಕ ಹಾಗೂ ಕಲೆಗಳಲ್ಲಿ ಸರಕಾರದ ಪ್ರವೇಶವನ್ನು ಕುರಿತು ಅನೇಕ ಮಾಹಿತಿ ನೀಡಿದ್ದಾರೆ. ಕರ್ನಾಟಕ ಸರಕಾರವು ಕನ್ನಡ ಸಂಸ್ಕೃತಿ ಇಲಾಖೆಗೆ ನೀಡುವ ಅನುದಾನ ಕಡಿಮೆ ಏನಲ್ಲ. ಆದರೆ ಅದರಲ್ಲಿ ಬಹುಪಾಲು ಅನೇಕ ಜಯಂತಿಗಳ ಕಡ್ಡಾಯ ಆಚರಣೆಗಳಿಗೆ ವ್ಯಯವಾಗುತ್ತದೆ. ಇದರಲ್ಲಿ ಭ್ರಷ್ಟಾಚಾರವು ಅಗಾಧವಾಗಿದೆ. ಆದರೆ ಒಟ್ಟಾರೆ ಎಂಥ ಸ್ಥಿತಿಯೆಂದರೆ ಸಾಂಸ್ಕೃತಿಕ ವಲಯವು ಸರಕಾರವನ್ನೇ ತನ್ನ ಚಟುವಟಿಕೆಗಳಿಗಾಗಿ ಅವಲಂಬಿಸುವಂತಾಗಿದೆ. ಹೀಗಾಗಿಯೇ ಬರಹಗಾರರೂ, ಕಲೆಗಾರರೂ ಕೂಡ ಈ ಸ್ಥಿತಿಯನ್ನು ಒಪ್ಪಿಕೊಂಡು ಬಿಟ್ಟಿದ್ದಾರೆ. ಇದರ ಪರಿಣಾಮವಾಗಿ ಅಕಾಡೆಮಿಗಳ ಸದಸ್ಯತ್ವ ಇತ್ಯಾದಿಗಳು ಸರಕಾರದ ಆದೇಶದಂತೆ ನಡೆಯುತ್ತಿವೆ.

ಈ ವಿಷಯಗಳು ಚರ್ಚೆಗೆ ಬಂದ ಕೂಡಲೆ 'ಸಾಹಿತ್ಯ ಸಂಸ್ಕೃತಿಗಳಲ್ಲಿ ರಾಜಕೀಯವಿರಬಾರದು. ಯಾವುದೇ "ಇಸಮ್" ಇರಬಾರದು. ಎಡ–ಬಲಗಳು ಇರಬಾರದು' ಎನ್ನುವ ಪ್ರತಿಕ್ರಿಯೆಗಳು ಶುರುವಾಗುತ್ತವೆ. ಸಾಮಾನ್ಯವಾಗಿ ರಾಜಕೀಯ ಇರಬಾರದು ಎಂದರೆ ಎಡಪಂಥೀಯ ರಾಜಕೀಯ ಇರಬಾರದು ಎಂದೇ ಅರ್ಥ. ಇದು ತುಂಬಾ ಅಪ್ರಬುದ್ಧವಾದುದು. ಹಿರಿಯ ಅರ್ಥದಲ್ಲಿ ಸಂಸ್ಕೃತಿಯು ರಾಜಕೀಯದ ಭಾಗವೇ ಆಗಿರುತ್ತದೆ. ಒಳ್ಳೆಯ ಕಲೆ ಒಳ್ಳೆಯ ರಾಜಕೀಯವನ್ನು ಸಮರ್ಥಿಸುತ್ತದೆ. ಅಂದರೆ, ಪಕ್ಷ ರಾಜಕೀಯವನ್ನಲ್ಲ, ಅಧಿಕಾರದ ಅಸಮಾನತೆಯನ್ನು ಪ್ರಶ್ನಿಸುವ, ಅದರ ದೌರ್ಜನ್ಯವನ್ನು ಬಯಲಿಗೆಳೆವ ರಾಜಕೀಯವನ್ನು ಅದು ಮಾಡುತ್ತದೆ. ನಮ್ಮ ಸಂದರ್ಭದ ಸಮಸ್ಯೆಯೆಂದರೆ ಸರಕಾರವು ಧನಸಹಾಯ ಮಾಡುತ್ತದೆಯಾದ್ದರಿಂದ ಅದಕ್ಕೆ ಸಂಸ್ಕೃತಿಯ ಮೇಲೆ ಸಾರ್ವಭೌಮ ಅದಿಕಾರವಿದೆಯೆನ್ನುವ ಸುಳ್ಳು ನಂಬಿಕೆ. ನಮ್ಮ ಸರಕಾರಗಳ ಬಹುಪಾಲು ಸದಸ್ಯರು ಅಶಿಕ್ಷಿತರೂ, ಕುಸಂಸ್ಕೃತಿಯ ಆರಾಧಕರೂ ಆಗಿರುವುದರಿಂದ ಈ ಸಮಸ್ಯೆ ಉಲ್ಬಣಿಸಿದೆ. ಇನ್ನೊಂದು ಕಡೆಗೆ ಬರಹಗಾರರು ವಿಧೇಯ ಗುಲಾಮರಂತೆ ವರ್ತಿಸುತ್ತಿದ್ದಾರೆ, ಇದು ಅವನತಿಯ ಲಕ್ಷಣವಾಗಿದೆ. ಪರಿಹಾರವೆಂದರೆ ಸಾಹಿತ್ಯ ಕಲೆಗಳು ಅರಾಜಕೀಯವಾಗಿರಬೇಕೆಂದು ವಾದಿಸುವುದಲ್ಲ. ಬದಲಾಗಿ ಪ್ರಭುತ್ವದ ವಿಮರ್ಶೆ ಹಾಗೂ ವಿಶ್ಲೇಷಣೆಯ ತಮ್ಮ ಕೆಲಸವನ್ನು ಮಾಡುವ ಸ್ವಾಯತ್ತತೆಯನ್ನು ಬಲವಾಗಿ ಸಮರ್ಥಿಸಬೇಕಿದೆ. ಪ್ರಭುತ್ವದ ಅಧಿಕಾರದ ನೆರಳಿನಲ್ಲಿಯೂ ತಮ್ಮ ವಿಮರ್ಶಾತ್ಮಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾಗಿದೆ. ●





**ಮೋದಿ ಅಯೋಧ್ಯೆಯಲ್ಲಿ ತನ್ನ ಭಾಷಣದಲ್ಲಿ ರಾಮನ ಪ್ರತಿಮೆಯನ್ನು ರಾಷ್ಟ್ರೀಯ ಗೌರವ ಮತ್ತು ರಾಷ್ಟ್ರೀಯ ಐಕ್ಯತೆಯೊಂದಿಗೆ ಬೆರೆಸಿದರು, ರಾಮಮಂದಿರವನ್ನು ರಾಷ್ಟ್ರೀಯ ಭಾವನೆಯ ಒಂದು ಸಂಕೇತ ಎಂದು ಕರೆದರು. ಮಂದಿರ ಚಳುವಳ್ ವಿಭಜನಕಾರಿ ಮತ್ತು ಹಿಂಸಾತ್ಮಕ ದಾರಿಯಲ್ಲಿ ಸಾಗಿ ಬಂದ ನಂತರ ಸೋದರತ್ವ ಮತ್ತು ಐಕ್ಯತೆಯ ಮಾತು ಬೂಟಾಟಿಕೆಯಷ್ಟೇ. ಅಯೋಧ್ಯೆಯಲ್ಲಿ ಮೋದಿ ಮೆರೆಸಿರುವುದು ಪ್ರಭುತ್ವ, ರಾಜಕೀಯ ಮತ್ತು ಧರ್ಮವನ್ನು ಬೆರೆಸಿದ್ದನ್ನು. ಜನಗಳನ್ನು ಧಾರ್ಮಿಕ ಮತ್ತು ಜನಾಂಗೀಯ ಗುರುತಿನ ಮೇಲೆ ಅಣಿನೆರೆಸಲು ಪ್ರಯತ್ನಿಸುವ ಸಂಕುಚಿತ ಜನಾಂಗೀಯ-ಮತೀಯ ರಾಷ್ಟ್ರವಾದ ಹಲವು ಬಲಪಂಥೀಯ ಸರ್ವಾಧಿಕಾರಶಾಹೀ ಆಳ್ವಿಕೆಗಳ ಹೆಗ್ಗುರುತು ಆಗಿಬಿಟ್ಟಿದೆ.**

ಪ್ರಕಾಶ ಕಾರಟ್

# ಅಯೋಧ್ಯೆಯಲ್ಲಿ ಪ್ರಭುತ್ವ, ರಾಜಕೀಯ ಮತ್ತು ಧರ್ಮದ ಬೆರಕೆ

ಅಯೋಧ್ಯೆಯಲ್ಲಿ ರಾಮ ಮಂದಿರಕ್ಕೆ ಭೂಮಿಪೂಜೆಯ ಸಮಾರಂಭವನ್ನು, ರಾಮ ಜನ್ಮಭೂಮಿ ಟ್ರಸ್ಟ್ ಏರ್ಪಡಿಸಿದ್ದರೂ, ಅದು ಪ್ರಧಾನ ಮಂತ್ರಿಗಳು ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಮತ್ತು ರಾಜ್ಯಪಾಲರ ಹಾಜರಿಯಲ್ಲಿ ಮಂದಿರದ ಅಡಿಗಲ್ಲು ಹಾಕಿದ ಒಂದು ಅಧಿಕೃತ ಸರಕಾರೀ ಸಮಾರಂಭವಾಯಿತು.

ಹೀಗೆ, ಆಗಸ್ಟ್ 5, ಹಿಂದುತ್ವದ ರಾಜಕೀಯ ಪರಿಯೋಜನೆಯಲ್ಲಿ ಒಂದು ಮಹತ್ವದ ಘಟ್ಟವಾಗಿ ಸ್ಥಾಪಿತಗೊಂಡಿದೆ; ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಒಂದು ರಾಮ ಮಂದಿರ ಕಟ್ಟುವುದು ಒಂದು ಹಿಂದೂ ಬಹುಸಂಖ್ಯಾತವಾದಿ ಪ್ರಭುತ್ವವನ್ನು ರೂಪಿಸಲು ಜನಗಳನ್ನು ಅಣಿನೆರೆಸುವ ಕಾರ್ಯವ್ಯೂಹದ ಕೇಂದ್ರ ಅಂಶವಾಗಿತ್ತು. ಬಿಜೆಪಿ-ಆರೆಸ್ಸೆಸ್ ಕೂಟಕ್ಕೆ, ರಾಮ ಮಂದಿರ ಪರಿಯೋಜನೆ ಚರಿತ್ರೆಯ ಭೂತಕಾಲದಲ್ಲಿ ಹಿಂದೂಗಳ ಮೇಲೆ ಎಸಗಲಾಯಿತು ಎನ್ನಲಾದ ತಪ್ಪುಗಳನ್ನು ಸರಿಪಡಿಸುವ "ರಾಷ್ಟ್ರೀಯ ಗೌರವ"ದ ಒಂದು ವಿಷಯವಾಗಿದೆ. ರಾಮ ಒಂದು ದೈವ ಮಾತ್ರವೇ ಅಲ್ಲ, ಒಂದು ರಾಷ್ಟ್ರೀಯ ಸಂಕೇತ.

ಎಲ್.ಕೆ. ಅಡ್ವಾಣಿಯವರ ಅಧ್ಯಕ್ಷತೆಯಲ್ಲಿ ಬಿಜೆಪಿ 1989ರಲ್ಲಿ ಮಸೀದಿ ಇದ್ದ ಜಾಗದಲ್ಲಿ ಒಂದು ರಾಮ ಮಂದಿರ ಕಟ್ಟುವ ತನ್ನ ಪಾಲಂಪುರ ಠರಾವನ್ನು ಅಂಗೀಕರಿಸಿತು. ಹಿಂದುತ್ವದ ಕೋಮುವಾದಿ ಅಣಿನೆರಿಕೆಯ ರಾಜಕೀಯ ಯಾತ್ರೆ ಅಡ್ವಾಣಿಯವರ 'ರಥಯಾತ್ರೆ'ಯೊಂದಿಗೆ ಆರಂಭವಾಯಿತು. ಆ ಯಾತ್ರೆ ಸಾಗಿದ ದಾರಿಯಲ್ಲಿ ಕೋಮುವಾದಿ ಹಿಂಸಾಚಾರ ಸಾವಿರಾರು ಜನಗಳನ್ನು ಕೊಂದಿತು, ಬಾಬ್ರಿ ಮಸೀದಿ ಧ್ವಂಸ ಮತ್ತಷ್ಟು ಭೀಕರ ಹಿಂಸಾಚಾರವನ್ನು ಬಡಿದೆಬ್ಬಿಸಿತು. ಅದನ್ನನುಸರಿಸಿ ಮಂದಿರ ನಿರ್ಮಾಣಕ್ಕೆ ಕಾನೂನಿನ ಮಂಜೂರಾತಿ ಪಡೆಯುವತ್ತ ವಿವಿಧ ಕಸರತ್ತುಗಳನ್ನು ನಡೆದವು.

ಸರ್ವೋಚ್ಚ ನ್ಯಾಯಾಲಯ ವಿಚಾರಣೆಯನ್ನು ತ್ವರಿತಗೊಳಿಸಿ, ದೈನಂದಿನ ವಿಚಾರಣೆಗಳನ್ನು ನಡೆಸಿದ್ದು ಮತ್ತು ಸರಕಾರಕ್ಕೆ ಬೇಕಾಗಿದ್ದ ತೀರ್ಪನ್ನು ನೀಡಿದ್ದು ಬಿಜೆಪಿ ಮೇ 2019ರಲ್ಲಿ ಒಂದು ಇನ್ನಷ್ಟು ದೊಡ್ಡ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿದ ನಂತರ. ಮಸೀದಿಯ ಧ್ವಂಸವನ್ನು ಒಂದು 'ಪಕ್ಕಾ ಕಾನೂನು ಉಲ್ಲಂಘನೆ' ಎಂದು ಹೇಳಿದ ಮೇಲೆ, ನ್ಯಾಯಾಲಯ ಮುಂದುವರೆದು ಸಮಸ್ತ 2.77 ಎಕರೆಯನ್ನು ಹಿಂದೂ ಫಿರ್ಯಾದಿಗಳಿಗೆ ಮಂದಿರ ಕಟ್ಟಲು ವಹಿಸಿ ಕೊಟ್ಟಿತು.

ಮಂದಿರ ನಿರ್ಮಾಣವನ್ನು ಶ್ರೀರಾಮದೇವರಲ್ಲಿ ಪರಮೋಚ್ಚ ಆಸ್ಥೆ ಹೊಂದಿರುವ ಬಹುಸಂಖ್ಯೆಯ ಹಿಂದೂಗಳು ಸ್ವಾಗತಿಸುತ್ತಾರೆ. 'ಗಣತಂತ್ರ' (ಅಂದರೆ ಜನರ ಸರಕಾರ, ರಾಜಪ್ರಭುತ್ವವಲ್ಲ) ಎಂಬ ಪದವನ್ನು ಜಾತ್ಯತೀತ ಎಂದೇ ಅರ್ಥೈಸಬೇಕಾಗಿಲ್ಲ. ಉದಾಹರಣೆಗೆ, ಇರಾನ್ ಇಸ್ಲಾಮಿಕ್ ಗಣತಂತ್ರ ತನ್ನ ಕಾನೂನುಬದ್ಧತೆಯನ್ನು ಇಸ್ಲಾಮೀ ತತ್ವಸಿದ್ಧಾಂತದಿಂದ ಪಡೆದಿದೆ. ಇಸ್ರೇಲ್ ಪ್ರಭುತ್ವ ಒಂದು ಯೆಹೂದಿ ಪ್ರಭುತ್ವ ಆಗಬಯಸುತ್ತದೆ, ಅದಕ್ಕಾಗಿ ತನ್ನ ಅರಬ್ ಜನಗಳನ್ನು ಎರಡನೇ ದರ್ಜೆಯ ಪೌರರ ಮಟ್ಟಕ್ಕೆ ಇಳಿಸಬಯಸುತ್ತದೆ. ಇಲ್ಲಿ, ಭಾರತವನ್ನು ಒಂದು ಹಿಂದೂ ಬಹುಸಂಖ್ಯಾತವಾದಿ ಗಣತಂತ್ರವಾಗಿ ಪರಿವರ್ತಿಸುವ ರಾಜಕೀಯ ಪರಿಯೋಜನೆ ರಾಮಮಂದಿರ ನಿರ್ಮಾಣದೊಂದಿಗೆ ಒಂದು ಮಹತ್ವಪೂರ್ಣ ವಿಜಯವನ್ನು ಗಳಿಸಿದೆ. ಮಸೀದಿಯನ್ನು ಧ್ವಂಸ ಮಾಡುವ ಒಂದು ವಿಧ್ವಂಸಕ ಕೃತ್ಯದ ಮೂಲಕ ಕಾನೂನು ಮತ್ತು ಸಂವಿಧಾನವನ್ನು ಭಂಡತನದಿಂದ ಉಲ್ಲಂಘಿಸಿದವರಿಗೆ ಯಾವುದೇ ಶಿಕ್ಷೆ ಆಗಿಲ್ಲ.

ಮೋದಿ ಅಯೋಧ್ಯೆಯಲ್ಲಿ ತನ್ನ ಭಾಷಣದಲ್ಲಿ ರಾಮನ ಪ್ರತಿಮೆಯನ್ನು ರಾಷ್ಟ್ರೀಯ ಗೌರವ ಮತ್ತು ರಾಷ್ಟ್ರೀಯ ಐಕ್ಯತೆಯೊಂದಿಗೆ ಬೆರೆಸಿದರು. ಅವರು ರಾಮಮಂದಿರವನ್ನು ರಾಷ್ಟ್ರೀಯ ಭಾವನೆಯ ಒಂದು ಸಂಕೇತ ಎಂದು ಕರೆದರು. ಮಂದಿರ ಚಳುವಳಿ ವಿಭಜನಕಾರಿ ಮತ್ತು ಹಿಂಸಾತ್ಮಕ ದಾರಿಯಲ್ಲಿ ಸಾಗಿ ಬಂದ ನಂತರ ಸೋದರತ್ವ ಮತ್ತು ಐಕ್ಯತೆಯ ಮಾತು ಬೂಟಾಟಿಕೆಯಷ್ಟೇ.

ಅಯೋಧ್ಯೆಯಲ್ಲಿ ಮೋದಿ ಮೆರೆಸಿರುವುದು ಪ್ರಭುತ್ವ, ರಾಜಕೀಯ ಮತ್ತು ಧರ್ಮದ ಬೆರಕೆಯನ್ನು. ಭಾರತದ ಮೊದಲ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ಗುಜರಾತಿನಲ್ಲಿ ಸೋಮನಾಥ ಮಂದಿರದ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ತಳೆದ ನಿಲುವಿಗೂ ಇದಕ್ಕೂ ಎಷ್ಟೊಂದು ವ್ಯತ್ಯಾಸ. ಅವರು ಆ ಉದ್ದೇಶಕ್ಕೆ ಸರಕಾರದ ನಿಧಿಯನ್ನು ನಿರಾಕರಿಸಿದರು, ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಮಂದಿರ ಉದ್ಘಾಟಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಅವರ ನೀತಿ ಸ್ಪಷ್ಟ ಮತ್ತು ಸರಳವಾಗಿತ್ತು: ಒಂದು ಜಾತ್ಯತೀತ ಪ್ರಭುತ್ವ ಒಂದು ಧಾರ್ಮಿಕ ಪೂಜಾಸ್ಥಳ ನಿರ್ಮಾಣಕ್ಕೆ ಕೃಪಾಪೋಷಣೆ ನೀಡುವುದಾಗಲೀ, ನಿಧಿ ಒದಗಿಸುವುದಾಗಲೀ ಸಾಧ್ಯವಿಲ್ಲ.

ಜನಗಳನ್ನು ಧಾರ್ಮಿಕ ಮತ್ತು ಜನಾಂಗೀಯ ಗುರುತಿನ ಮೇಲೆ ಅಣಿನೆರೆಸಲು ಪ್ರಯತ್ನಿಸುವ ಜನಾಂಗೀಯ-ಧಾರ್ಮಿಕ ರಾಷ್ಟ್ರವಾದ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಸ್ವತಂತ್ರ ಭಾರತೀಯ ಪ್ರಭುತ್ವದ ಸ್ಥಾಪನೆಯಲ್ಲಿ ಹಾಸುಹೊಕ್ಕಾಗಿದ್ದ ಎಲ್ಲರನ್ನೂ ಒಳಗೊಳ್ಳುವ ವಸಾಹತುಶಾಹಿ-ವಿರೋಧಿ ರಾಷ್ಟ್ರವಾದಕ್ಕೆ ತದ್ವಿರುದ್ಧವಾಗಿದೆ. ಸೇಡಿನ ರಾಜಕೀಯ ಮತ್ತು ಅಲ್ಪಸಂಖ್ಯಾತರ ಮೇಲೆ ಗುರಿಯಿಡುವ ಈ ಸಂಕುಚಿತ ರಾಷ್ಟ್ರವಾದ ಹಲವು ಬಲಪಂಥೀಯ ಸರ್ವಾಧಿಕಾರಶಾಹೀ ಆಳ್ವಿಕೆಗಳ ಹೆಗ್ಗುರುತು ಆಗಿಬಿಟ್ಟಿದೆ.

ಮಂದಿರ ನಿರ್ಮಾಣಕ್ಕೆ ಮೋದಿ ಅಡಿಗಲ್ಲು ಹಾಕುವ ಎರಡು ವಾರಗಳ ಮೊದಲಷ್ಟೇ, ಜುಲೈ 24 ರಂದು ಟರ್ಕಿಯ ಅಧ್ಯಕ್ಷ ರೆಸೆಪ್ ಎರ್ಡೋಗನ್, ಇಸ್ತಾಂಬುಲ್‌ನ ಜಗತ್ಪ್ರಸಿದ್ಧ ಹಗಿಯ ಸೋಫಿಯದಲ್ಲಿ ಶುಕ್ರವಾರದ ಪ್ರಾರ್ಥನೆಯ ನೇತೃತ್ವ ವಹಿಸಿದರು. ಈ ಚಾರಿತ್ರಿಕ ಸ್ಮಾರಕವನ್ನು ಕ್ರಿ.ಶ. ಆರನೇ ಶತಮಾನದಲ್ಲಿ ಬೈಜಾಂಟೈನ್ ದೊರೆ ಜಸ್ಟಿನಿಯನ್ ಕಾನ್ಸ್ಟಾಂಟಿನೋಪಲ್(ನಂತರ ಇಸ್ತಾಂಬುಲ್)ನಲ್ಲಿ ಒಂದು ಚರ್ಚ್ ಆಗಿ ಕಟ್ಟಿಸಿದ. 900 ವರ್ಷಗಳ ಕಾಲ ಚರ್ಚ್ ಅಗಿದ್ದ ಇದು ಕ್ರಿ.ಶ. 1453 ರಲ್ಲಿ ಒಟ್ಟೊಮಾನ್‌ಗಳು ಕಾನ್ಸ್ಟಾಂಟಿನೋಪಲನ್ನು ವಶಪಡಿಸಿಕೊಂಡಾಗ ಮಸೀದಿಯಾಗಿ ಪರಿವರ್ತಿಸಿದರು. ಕೆಮಾಲ್ ಅತಾತುರ್ಕ್ ಕಳೆಗುಂದಿದ್ದ ಒಟ್ಟೊಮಾಮ್ ಆಳ್ವಿಕೆಯನ್ನು ಕಿತ್ತೆಸೆದು ಒಂದು ಜಾತ್ಯತೀತ ಗಣತಂತ್ರವನ್ನು ಸ್ಥಾಪಿಸುವ ಕ್ರಾಂತಿಕಾರಿ ಹೆಜ್ಜೆಯಿಟ್ಟ ಮೇಲೆ, 1934ರಲ್ಲಿ, ಒಂದು ಸಂಪುಟ ನಿರ್ಣಯದ ಮೂಲಕ, ಈ 1500 ವರ್ಷದ ಧಾರ್ಮಿಕ ಸ್ಮಾರಕ ಒಂದು ಸಂಗ್ರಹಾಲಯವಾಗಿ ಪರಿವರ್ತನೆಗೊಂಡಿತು. ಕಳೆದ ತಿಂಗಳ ವರೆಗೂ ಈ ವಾಸ್ತುಶಿಲ್ಪದ ಅಚ್ಚರಿ ಒಂದು ಸಂಗ್ರಹಾಲಯವಾಗಿಯೇ ಉಳಿದಿತ್ತು.

ಈಗ ಟರ್ಕಿಯಲ್ಲಿ ಆಡಳಿತ ನಡೆಸುತ್ತಿರುವ ಇಸ್ಲಾಮ್‌ವಾದೀ ಎಕೆಪಿ ಪಕ್ಷ ಹಗಿಯ ಸೋಫಿಯ ಸಂಗ್ರಹಾಲಯವನ್ನು ಮತ್ತೆ ಒಂದು ಮಸೀದಿಯಾಗಿ ಮಾಡಬೇಕೆಂದು ಬೇಡಿಕೆಯಿಟ್ಟಿತ್ತು. ಟರ್ಕಿಯ ಅತ್ಯುನ್ನತ ಆಡಳಿತ ನ್ಯಾಯಾಲಯವಾದ ಪ್ರಭುತ್ವ ಮಂಡಳಿ( ಕೌನ್ಸಿಲ್ ಆಫ್ ಸ್ಟೇಟ್), ವಿನೀತವಾಗಿ 1934ರ ಸಂಪುಟ ನಿರ್ಧಾರ ಕಾನೂನುಬಾಹಿರ ಎಂದು ಒಮ್ಮತದ ತೀರ್ಪು ನೀಡಿತು. ಅಧ್ಯಕ್ಷ ಎರ್ಡೋಗನ್ ಒಂದು ಡಿಕ್ರಿ ಹೊರಡಿಸಿದ ದಿನವೇ ಅದನ್ನು ಮತ್ತೆ ಮಸೀದಿಯಾಗಿ ಮಾಡಲಾಯಿತು. ಮೋದಿಯಂತೆ, ಎರ್ಡೋಗನ್‌ಗೆ ಇದು ರಾಷ್ಟ್ರೀಯ ಗೌರವವನ್ನು ರಕ್ಷಿಸುವ ಒಂದು ಹೆಜ್ಜೆ.

ಇಸ್ರೇಲಿನಲ್ಲಿ, ಮೋದಿಯವರ ಆತ್ಮ-ಸಂಗಾತಿ, ನೆತನ್ಯಾಹು ಒಂದು ಜನಾಂಗ-ರಾಷ್ಟ್ರವಾದಿ ಸರಕಾರದ ಮುಖ್ಯಸ್ಥರಾಗಿದ್ದು, ಅಲ್ಲಿ ಟೆಂಪಲ್ ಮೌಂಟ್‌ನ ಅಡಿಯಲ್ಲಿ ಕ್ರಿಸ್ತ ಹುಟ್ಟುವ ನೂರಾರು ವರ್ಷಗಳ ಹಿಂದೆ ಕಟ್ಟಿದ್ದೆನ್ನಲಾದ ಯೆಹೂದ್ಯರ ಮೊದಲ ಮಂದಿರದ ಅವಶೇಷಗಳಿಗಾಗಿ ದಶಕಗಳಿಂದ ಉತ್ಖನನ ನಡೆಯುತ್ತಿದೆ. ಈ ಬೆಟ್ಟದ ಮೇಲೆ ಮಕ್ಕಾ ಮತ್ತು ಮದೀನಾದ ನಂತರ ಮುಸ್ಲಿಮರಿಗೆ ಪರಮ ಪವಿತ್ರವಾದ ಅಲ್ ಅಕ್ಸ ಮಸೀದಿಯಿದೆ. ಯೆಹೂದಿ ಉಗ್ರಗಾಮಿಗಳು ಬಹಳ ಕಾಲದಿಂದ ಈ ಮಸೀದಿಯನ್ನು ಧ್ವಂಸ ಮಾಡಿ ಅಲ್ಲಿ ಒಂದು ಯೆಹೂದಿ ಮಂದಿರವನ್ನು ಕಟ್ಟಬೇಕೆಂದು ಆಗ್ರಹಿಸುತ್ತಿದ್ದಾರೆ. ಯೆಹೂದ್ಯರು, ಕ್ರೈಸ್ತರು ಮತ್ತು ಮುಸ್ಲಿಮರಿಗೆ ಪವಿತ್ರ ಸ್ಥಳವಾದ ಈ ಬೆಟ್ಟ ಪ್ಯಾಲೆಸ್ತೀನಿಯರು ಮತ್ತು ಅರಬರ ವಿರುದ್ಧ ಯೆಹೂದಿ ಉಗ್ರಗಾಮಿ ಶಕ್ತಿಗಳನ್ನು ಅಣಿನೆರೆಸುವ ಒಂದು ಶಾಶ್ವತ ಮೂಲವಾಗಿದೆ.

ಅಯೋಧ್ಯೆಯಲ್ಲಿ ತಾವು ಬಯಸಿದಂತೆ ರಾಮ ಮಂದಿರ ನಿರ್ಮಾಣದ ಉದ್ದೇಶ ಈಡೇರಿದ ಮೇಲೆ ಹಿಂದುತ್ವ ಕೋಮುವಾದಿ ಉಬ್ಬರ ಇಳಿಯುತ್ತದೆ ಎಂದು ಕೆಲವರು ಭಾವಿಸಿದ್ದಾರೆ. ಆದರೆ ಅವರು ತಪ್ಪು ಮಾಡುತ್ತಿದ್ದಾರೆ. ಹಿಂದುತ್ವ ಆಳ್ವಿಕೆದಾರರ ರಾಜಕೀಯ ಪರಿಯೋಜನೆಗೆ ನಿರಂತರವಾಗಿ ಕೋಮುವಾದಿ ಧ್ರುವೀಕರಣವನ್ನು ಸೃಷ್ಟಿಸಬಲ್ಲ ಪ್ರಶ್ನೆಗಳಿಗೆ ಇಂಧನಗಳು ಬೇಕಾಗುತ್ತವೆ. ಇವು ಅಧಿಕಾರದ ಮೇಲೆ ಅವರ ಹಿಡಿತವನ್ನು ಕ್ರೋಢೀಕರಿಸಲು ನೆರವಾಗುತ್ತವೆ. ಉದಾಹರಣೆಗೆ, 1992ರ ಪೂಜಾಸ್ಥಳಗಳ ಕಾಯ್ದೆ 15 ಆಗಸ್ಟ್ 1947ರಂದು ಇದ್ದಂತೆ ಧಾರ್ಮಿಕ ಸ್ಥಳಗಳ ಸ್ಥಾನಮಾನವನ್ನು ಬದಲಿಸಬಾರದು ಎಂದು ವಿಧಿಸುತ್ತದೆ. ಅಯೋಧ್ಯಾ ವಿವಾದ ಸ್ವಾತಂತ್ರ್ಯದ ಮೊದಲಿಂದಲೇ ಇದ್ದುದರಿಂದ ಅದು ಈ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎನ್ನಲಾಯಿತು.

ಆರೆಸ್ಸೆಸ್-ವಿಹೆಚ್‌ಪಿಯ ಮೂಲ ಪ್ರಚಾರ ಅಯೋಧ್ಯೆಯಲ್ಲಿ ಮಾತ್ರವಲ್ಲ, ಕಾಶಿ ಮತ್ತು ಮಥುರಾದಲ್ಲೂ ಮಸೀದಿಗಳಿರುವ ಸ್ಥಳವನ್ನು ತಮ್ಮ ವಶಕ್ಕೆ ಪಡೆದುಕೊಳ್ಳಬೇಕು ಎಂದಿತ್ತು. ಹಿಂದುತ್ವ ಶಕ್ತಿಗಳು ಇವನ್ನು ವಿವಾದಗಳೆಂದು ಬಡಿದೆಬ್ಬಿಸಲು ನಿರ್ಧರಿಸಿದರೆ ಈ ಕಾಯ್ದೆ ಅವರಿಗೇನೂ ಅಡಚಣೆಯಾಗಲಾರದು.

ಅಂತಿಮವಾಗಿ, ಅಯೋಧ್ಯೆಯಲ್ಲಿ ಭೂಮಿಪೂಜೆಗೆ ಆರಿಸಿದ ದಿನಾಂಕ ಆಗಸ್ಟ್ 5 ಎಂದು ನೆನಪಿರಬೇಕು. ಒಂದು ವರ್ಷದ ಹಿಂದೆ ಇದೇ ದಿನದಂದು ಜಮ್ಮು ಮತ್ತು ಕಾಶ್ಮೀರ ತನ್ನ ವಿಶೇಷ ಸ್ಥಾನಮಾನವನ್ನು ಕಳೆದು ಕೊಂಡಿತು, ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ತುಂಡರಿಸಲಾಯಿತು. ಈ ಹೊಸ ಆಳುವ ಮಂದಿ ಭಾರತೀಯ ಒಕ್ಕೂಟದಲ್ಲಿ ಒಂದು ಮುಸ್ಲಿಂ-ಬಹುಸಂಖ್ಯಾತ ರಾಜ್ಯವನ್ನು ಸಹಿಸಿಕೊಳ್ಳಲಾರರು.

ಈಗ ರಾಮಮಂದಿರದ ನಿರ್ಮಾಣವನ್ನು ಆಚರಿಸುತ್ತಿರುವವರ ಸಮೂಹಗಾನದಲ್ಲಿ ದನಿಗೂಡಿಸುತ್ತಿರುವ ಮತ್ತು ಶ್ರೀರಾಮನಲ್ಲಿ ತಮ್ಮ ಆಸ್ಥೆಯನ್ನು ಸಾರ್ವಜನಿಕವಾಗಿ ಸಾರುತ್ತಿರುವ ಕಾಂಗ್ರೆಸ್ ಮುಖಂಡರಿಗೆ ಮತ್ತು ಕೆಲವು ಜಾತ್ಯತೀತ ರಾಜಕಾರಣಿಗಳಿಗೆ ಈ ಸಮಾರಂಭವನ್ನು ಆಗಸ್ಟ್ 5ರಂದು ನಡೆಸುತ್ತಿರುವುದರ ಹಿಂದಿರುವ ಸಾಂಕೇತಿಕತೆ ಒಂದು ಎಚ್ಚರಿಕೆಯಾಗಿದೆ. ಅವರು ಈ ಸಂದರ್ಭಸಾಧಕ ನಿಲುವನ್ನು ಅಂಗೀಕರಿಸಿದರೆ, ಅದು ಒಂದು ಹಿಂದೂರಾಷ್ಟ್ರವನ್ನು ಸ್ಥಾಪಿಸ ಬಯಸುವವರಿಗೆ ಅನುಕೂಲ ಕಲ್ಪಿಸಿ ಕೊಡುತ್ತದಷ್ಟೇ.




ವ್ಯಂಗ್ಯಚಿತ್ರ: ಪಿ. ಮಹಮ್ಮದ್, ಫೇಸ್‌ಬುಕ್




ಜೈಶ್ರೀರಾಮ್!- ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸಿಫಿ,ಕಾಂ

# ‘ಆತ್ಮನಿರ್ಭರ ಭಾರತ’ವೋ ‘ರಿಲೈಯನ್ಸ್ ಇಂಡಿಯಾ’ವೋ



**ಸ್ವಾವಲಂಬಿಯಾಗಿ ತನ್ನ ಸಂಸ್ಥೆಯಲ್ಲೇ ‘ದೇಶಿಯವಾದ 5ಜಿ ತಂತ್ರಜ್ಞಾನ’ವನ್ನು ಬೆಳೆಸಿರುವುದಾಗಿ ಹೇಳಿಕೊಳ್ಳುತ್ತಿರುವುದು ರಿಲೈಯನ್ಸ್ ಬತ್ತಳಿಕೆಯ ಹೊಸ ಬಾಣವಿದ್ದಂತಿದೆ. ಆದರೆ ರಿಲೈಯನ್ಸ್ ಬಳಿ ಯಾವುದೇ ನೆರವಿಲ್ಲದೆ ಶೂನ್ಯದಿಂದ ಆರಂಭಿಸಿ 5ಜಿ ತಂತ್ರಜ್ಞಾನ ನಿರ್ಮಿಸುವ ಸಾಮರ್ಥ್ಯ ಒತ್ತಟ್ಟಿಗಿರಲಿ, ಡಿಜಿಟಲ್ ಜಾಲ ವ್ಯವಸ್ಥೆಯ ತಂತ್ರಜ್ಞಾನದ ಬೆಳವಣಿಗೆಗೆ ಬೇಕಾದ ಸಾಮರ್ಥ್ಯದ ಯಾವ ಕುರುಹು ಸಹ ಇಲ್ಲ. ರಿಲೈಯನ್ಸ ತನ್ನ ಈಗಿನ ಮೊಬೈಲ್ ನೆಟ್‌ವರ್ಕ್ ಸಾಮರ್ಥ್ಯವನ್ನು ಬಳಸಿ 5ಜಿ ನೆಟ್‌ವರ್ಕ್ ನಲ್ಲಿ ಏಕೈಕ ಶಕ್ತಿಯಾಗಲು ಬಳಸುತ್ತಿದೆ. ಅದು ಭಾರತದಲ್ಲಿ 5ಜಿ ಏಕಸ್ವಾಮ್ಯತೆ ಪಡೆದು ರಿಲೈಯನ್ಸ್ ಅಮೇರಿಕಾ, ದ. ಕೊರಿಯಾ ಮತ್ತು ಉಳಿದ 5ಜಿ ಮಾರಾಟಗಾರರ ಒಕ್ಕೂಟ ರಚಿಸಿ, ಹ್ವಾವೆ ಮತ್ತು ಉಳಿದ ಚೈನಾ ಕಂಪನಿಗಳೊಡನೆ ಜಾಗತಿಕ ಮಟ್ಟದಲ್ಲಿ ಸ್ಪರ್ಧೆಗೆ ಇಳಿಯಬಯಸುತ್ತದೆ. ಕಾಂಗ್ರೆಸ್‌ನಿಂದ ಬಿಜೆಪಿವರೆಗಿನ ಎಲ್ಲ ಸರ್ಕಾರಗಳು ಸತತವಾಗಿ ರಿಲೈಯನ್ಸ್ ನ ಏಕಸ್ವಾಮ್ಯತೆಯ ಬಲಪ್ರದರ್ಶನಕ್ಕೆ ಸಹಾಯ ಮಾಡಿವೆ. ನಾವೀಗ ರಿಲೈಯನ್ಸ್ ನ ಭಾರತೀಯ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವಿಕೆಯ ಆಟದ ಕೊನೆಯ ಹಂತದಲ್ಲಿದ್ದೇವೆ. ಮೋದಿಯವರ ಆತ್ಮ ನಿರ್ಭರ ಭಾರತ ನಿಜವಾಗಿ ಸ್ವಾವಲಂಬಿಯಾಗುತ್ತಿಲ್ಲ. ಬದಲಿಗೆ “ರಿಲೆಯನ್ಸ್ ಅವಲಂಬಿ” ಆಗಲಿದೆ.**

**ಪ್ರಬೀರ್ ಪುರಕಾಯಸ್ಥ**




ಕಳೆದ ನಾಲ್ಕು ವರ್ಷಗಳಲ್ಲಿ ರಿಲೈಯನ್ಸ್ ಜಿಯೋ ತನ್ನ ತೈಲ ಮತ್ತು ಇಂಧನ ಮೂಲದ ಆದಾಯವನ್ನು ದೂರಸಂಪರ್ಕ ಕ್ಷೇತ್ರದಲ್ಲಿ ಪ್ರಾಧಾನ್ಯ ಪಡೆಯಲು ವಿನಿಯೋಗಿಸಿದೆ. ತನ್ನ ಹಣದ ಬಲ ಬಳಸಿ ಆರಂಭದ ಅತ್ಯಂತ ಕಡಿಮೆ ದರದ ಪೈಪೋಟಿಯಿಂದ ಇತರ ಕಂಪನಿಗಳನ್ನು ಸೋತು ಶರಣಾಗುವಂತೆ ಮಾಡಿ, ಆ ಕಂಪನಿಗಳ ರಕ್ತ ಬಸಿದಿದೆ. ಆ ಮೂಲಕ ಮಾರುಕಟ್ಟೆಯಲ್ಲಿ ಅಜೇಯ ನಾಯಕತ್ವವನ್ನು ಸಾಧಿಸಿದೆ. ಜಿಯೋ ತನ್ನ ದೂರಸಂಪರ್ಕ ಜಾಲದಲ್ಲಿ ಚೀನಿ ಉಪಕರಣಗಳನ್ನು ಬಳಸಿಲ್ಲವೆಂದು ಸಾರುತ್ತಾ, ತನ್ನದೆಲ್ಲವೂ ಕಂಪನಿಯೇ ತಯಾರಿಸಿದ ‘ದೇಶಿಯ 5ಜಿ ತಂತ್ರಜ್ಞಾನ’ವೆಂದು ಕೊಚ್ಚಿಕೊಳ್ಳುತ್ತಾ, ಅಮೇರಿಕಾ ಮತ್ತು ಚೀನಾ ನಡುವಿನ 5ಜಿ ಸಮರದಲ್ಲಿ ಪ್ರಮುಖ ಸ್ಥಾನಕ್ಕೆ ಲಗ್ಗೆಯಿಟ್ಟಿದೆ.

ತೈಲ ವ್ಯವಹಾರದ ಮೂಲಕ ಅದರ ಖಜಾನೆ ತುಂಬಿ ತುಳುಕುತ್ತಿದ್ದರೂ, ಅದರ ಸಾಲದ ಮೊತ್ತವೂ ಗಣನೀಯ ಪ್ರಮಾಣದಲ್ಲಿತ್ತು. ಈ ಸಾಲವನ್ನು ತೀರಿಸಲು ತನ್ ಜಿಯೋ ದೂರ ಸಂಪರ್ಕ ವ್ಯವಸ್ಥೆಯ ತಳಹದಿಯ ಮೇಲೆ ‘ಜಿಯೋ ಡಿಜಿಟಲ್’ ಎಂಬ ಹೊಸ ಸೇವೆಗಳ ವೇದಿಕೆಯನ್ನು ಸ್ಥಾಪಿಸಿತು. ಸ್ಥಾಪನೆಯಾದ ಕೆಲವೇ ತಿಂಗಳುಗಳಲ್ಲಿ ತನ್ನ ಪಾಲಿನ ಶೇಕಡಾ ಮೂವತ್ತರಷ್ಟು ಒಡೆತನದ ಪಾಲನ್ನು ಮಾರುವುದರ ಮುಖಾಂತರ 2200 ಕೋಟಿ ಡಾಲರ್‌ಗಳನ್ನು ಗಳಿಸಿ ತನ್ನ ಸಾಲದ ಬಹುಪಾಲನ್ನು ತೀರಿಸಿಕೊಂಡಿತು. ಇದರಲ್ಲಿ ಫೇಸ್ ಬುಕ್ (570 ಕೋಟಿ ಡಾಲರ್) ಗೂಗಲ್ (450 ಕೋಟಿ ಡಾಲರ್) ಮೈಕ್ರೋಸಾಫ್ಟ್ (200 ಕೋಟಿ ಡಾಲರ್) ಮತ್ತು ಉಳಿದ 1000 ಕೋಟಿ ಡಾಲರ್‌ಗಳನ್ನು ಅಬುಧಾಬಿ ಮತ್ತು ಸೌದಿ ಅರೇಬಿಯಾ ಸಾರ್ವಭೌಮ ನಿಧಿ ಮತ್ತು ಸಾಹಸಿ ಬಂಡವಾಳಿಗರಿಂದ (ವೆಂಚರ್ ಕ್ಯಾಪಿಟಲ್) ಪಡೆದಿರುತ್ತದೆ. ಆದರೂ ತನ್ನ ಸಾಲ ತೀರಿಲ್ಲವೆಂದು ಹೇಳಿಕೊಳ್ಳುತ್ತದೆ. ಈ ಲೇಖನದ ಉದ್ದೇಶ ರಿಲೈಯನ್ಸ್ ಸಾಮ್ರಾಜ್ಯ ತನ್ನ ಹಣಕಾಸನ್ನು ಹೇಗೆ ಪಡೆಯುತ್ತದೆ ಮತ್ತು ನಿಭಾಯಿಸುತ್ತದೆ ಎಂದು ಹೇಳುವುದಲ್ಲ. ರಿಲೈಯನ್ಸ್ ಕಂಪನಿಯಲ್ಲಿ ಹೂಡಿರುವ ಕಂಪನಿಗಳ ಯಾವುವು ಮತ್ತು ಭಾರತೀಯರಿಗೆ ರಿಲೈಯನ್ಸ್ ಜಿಯೋ ನೀಡಬಹುದಾದ ಯೋಜನೆಗಳಾದರೂ ಏನು ಎಂದು ಈ ಲೇಖನ ವಿಶ್ಲೇಷಿಸುತ್ತದೆ.

ನಾವು ರಿಲೈಯನ್ಸ್ ಜಿಯೋದ ಮಾರುಕಟ್ಟೆ ವಶಪಡಿಸಿಕೊಳ್ಳುವ ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಅದರಲ್ಲಿ ಬಂಡವಾಳ ಹೂಡುತ್ತಿರುವ ತಂತ್ರಜ್ಞಾನ ಪಾಲುದಾರರನ್ನು ಪರಿಶೀಲಿಸಬೇಕಾಗುತ್ತದೆ. ದೂರಸಂಪರ್ಕ ವ್ಯವಹಾರದಲ್ಲಿ ರಿಲೈಯನ್ಸ್ ಜಿಯೋ ಪ್ರಧಾನ ಪಾತ್ರ ವಹಿಸುತ್ತಿದೆ ಮತ್ತು ಭಾರತದಲ್ಲಿನ ಗ್ರಾಹಕರನ್ನು ತಲುಪಲು ಅಥವಾ ಭಾರತದಲ್ಲಿ ವ್ಯವಹರಿಸಲು ಜಿಯೋ ಜತೆಯಲ್ಲಿ ಹೋಗುವುದು ಅಗತ್ಯವೆಂದು ಈ ಹೂಡಿಕೆದಾರರಿಗೆ ಖಾತ್ರಿಯಾಗಿದೆ. ಸೇವೆಗಳಲ್ಲಿ ಸರಕುಗಳ ಮಾರಾಟ, ವಿಡಿಯೋ ಪ್ರಸರಣ ಸೇವೆ, ವಿಡಿಯೋ ಕಾನ್‌ಫರನ್ಸ್, ಪೇಮೆಂಟ್ ಗೇಟ್ ವೇ, ಮತ್ತು ಕಂಪನಿಗಳಿಗೆ ಡಿಜಿಟಲ್ ಮೂಲ ಸೌಕರ್ಯ ಒದಗಿಸುವುದು ಸೇರಿರುತ್ತದೆ. ಕೋವಿಡ್–19 ರ ಕಾರಣ ಅಂತರ್ಜಾಲದ ಸೇವೆ ಎಲ್ಲರಿಗೂ ಅನಿವಾರ್ಯವಾಗಿದ್ದು ಮಹಾಸೋಂಕಿನ ನಂತರದ ದಿನಗಳಲ್ಲೂ ಅದು ಮುಂದುವರೆಯುತ್ತದೆ. ನಮ್ಮೆಲ್ಲರನ್ನು ಸಂಪರ್ಕಿಸಬಹುದಾದ ಜಾಲದ ನಿಯಂತ್ರಣ ಜಿಯೋ ಹತ್ತಿರ ಇರುವುದರಿಂದ ಜಾಗತಿಕ ಟೆಕ್ ಕಂಪನಿಗಳು ಜಿಯೋ ಮುಖಾಂತರ ಅದರಲ್ಲಿ ಪಾಲು ಪಡೆಯಲು ಸಾಲಾಗಿ ನಿಂತಿವೆ.

ಸರಳವಾಗಿ ಹೇಳುವುದಾದರೆ ಎಲ್ಲ ವ್ಯವಹಾರಗಳನ್ನು ಮತ್ತು ಜನಗಳನ್ನು ಸಂಪರ್ಕಿಸಬಹುದಾದ ಪ್ರಾಥಮಿಕ ಸಂಪರ್ಕ ಜಾಲದ (ಪ್ರೈಮರಿ ಕಮ್ಯುನಿಕೇಶನ್ ನೆಟ್‌ವರ್ಕ್) ಮಾಲಿಕತ್ವವನ್ನು ಜಿಯೋ ಹೊಂದಿದೆ. ತೈಲ ವ್ಯಾಪಾರದಲ್ಲಿದ್ದ ಏಕಸ್ವಾಮ್ಯತೆ ಬಳಸಿಕೊಂಡು ದೂರಸಂಪರ್ಕ ವ್ಯವಹಾರದಲ್ಲಿ ಮೊದಲ ಸ್ಥಾನವನ್ನು ನಾಲ್ಕೇ ವರ್ಷಗಳಲ್ಲಿ ಪಡೆದಿರುತ್ತದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಸಂಪರ್ಕ ಜಾಲಗಳನ್ನು ಬಳಸುವ ಸೇವೆಗಳನ್ನು ಒದಗಿಸುವ ಹೊಸ ಏಕಸ್ವಾಮ್ಯಗಳನ್ನು ಸ್ಥಾಪಿಸಲು ಹೊರಟಿದೆ. ಜಿಯೋ ಈಗಾಗಲೇ 5ಜಿ ಸಂಪರ್ಕ ಜಾಲವನ್ನು ಬೇರೆ ರಾಷ್ಟ್ರಗಳಿಗೂ ವಿಸ್ತರಿಸುವ, 5ಜಿ ತಂತ್ರಜ್ಞಾನ–ವ್ಯಾಪಾರಗಳ ಸಮರದಲ್ಲಿ ಅಮೇರಿಕಾ ಜತೆ ಭಾಗವಹಿಸುವ ಕಡೆ ಕಣ್ಣಿಟ್ಟಿದೆ.

ಕಾಂಗ್ರೆಸ್‌ನಿಂದ ಬಿಜೆಪಿವರೆಗಿನ ಎಲ್ಲ ಸರ್ಕಾರಗಳು ಸತತವಾಗಿ ರಿಲೈಯನ್ಸ್ ನ ಏಕಸ್ವಾಮ್ಯತೆಯ ಬಲಪ್ರದರ್ಶನಕ್ಕೆ ಸಹಾಯ ಮಾಡಿವೆ. ನಾವೀಗ ರಿಲೈಯನ್ಸ್ ನ ಭಾರತೀಯ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವಿಕೆಯ ಆಟದ ಕೊನೆಯ ಹಂತದಲ್ಲಿದ್ದೇವೆ. ಜಿಯೋ ಪೇಮೆಂಟ್ ಬ್ಯಾಂಕ್ ಗೆ ಭಾರತೀಯ ಸ್ಟೇಟ್ ಬ್ಯಾಂಕ್ ಜತೆಗೆ 70:30 ಅನುಪಾತದ ಸಹಭಾಗಿತ್ವ ಹೊಂದಲು ಅವಕಾಶ ಮಾಡಿಕೊಡುವ ಮೂಲಕ, ಮೋದಿ ಸರ್ಕಾರ ಭಾರತದ ಅತಿ ದೊಡ್ಡ ಬ್ಯಾಂಕ್ ಗೆ ಹಿಂಬಾಗಿಲಿನ ಮುಖಾಂತರ ಪ್ರವೇಶ ಕೊಟ್ಟಿದೆ. ಆದ್ದರಿಂದ ರಿಲೈಯನ್ಸ್‌ಗೆ ಭಾರತದ ಅತಿ ದೊಡ್ಡ ಬ್ಯಾಂಕಿನ ಭಾರೀ ಸಂಪನ್ಮೂಲವು ಲಭ್ಯವಿರುತ್ತದೆ. ಮೋದಿಯವರ ಆತ್ಮ ನಿರ್ಭರ ಭಾರತ ನಿಜವಾಗಿ ಸ್ವಾವಲಂಬಿಯಾಗುತ್ತಿಲ್ಲ. ಬದಲಿಗೆ “ರಿಲೆಯನ್ಸ್ ಅವಲಂಬಿ” ಆಗಲಿದೆ.

ಡಿಜಿಟಲ್ ಏಕಸ್ವಾಮ್ಯ ಕಂಪನಿಗಳಲ್ಲಿ ಪ್ರತಿಯೊಂದು, ಪರಸ್ಪರ ಸ್ಪರ್ಧೆ ಮಾಡುತ್ತಲೇ ಪರಸ್ಪರ ಸಹಾಯ ಮಾಡುತ್ತಿರಬೇಕಾಗುತ್ತದೆ. ವೈಯುಕ್ತಿಕ ಸೇವೆಗಳಾದ ಸರ್ಚ್ ಇಂಜಿನ್ ಮತ್ತು ಜಿ ಮೇಲ್ ಒದಗಿಸುವ ಗೂಗಲ್, ಕ್ಲೌಡ್ ಸೇವೆಗಳನ್ನು ಒದಗಿಸುವ ಪ್ರಮುಖ ಪಾತ್ರವಹಿಸಲಿದೆ. ಇದರ ಮುಖಾಂತರ ಡಿಜಿಟಲ್ ಜಾಹೀರಾತು ಆದಾಯದ ಒಂದು ದೊಡ್ಡ ಭಾಗವನ್ನು ಸಂಪಾದಿಸುತ್ತದೆ. ಫೇಸ್‌ಬುಕ್ ಜಾಹೀರಾತು ಆದಾಯಕ್ಕಾಗಿ ಗೂಗಲ್ ಜತೆ ಸ್ಪರ್ಧಿಸುತ್ತದೆ. ಆದರೆ ಫೇಸ್ ಬುಕ್ ಆದಾಯ ಮತ್ತು ಇನ್‌ಸ್ಟಾಗ್ರಾಮ್ ಮುಖಾಂತರ ಸೋಷಿಯಲ್ ಮಿಡೀಯಾನಲ್ಲಿನ ಜಾಹೀರಾತು ಆದಾಯದ ದೊಡ್ಡ ಪಾಲನ್ನು ಪಡೆಯುತ್ತದೆ. ವಾಟ್ಸ್‌ಪ್ ಮುಖಾಂತರ ಹೊಸ ವ್ಯವಹಾರಗಳಲ್ಲಿ ತೊಡಗಲು ಅವಕಾಶವಿದ್ದರೂ ಅದಿನ್ನೂ ದೊಡ್ಡ ಮಟ್ಟದಲ್ಲಿ ಬೆಳೆದಿಲ್ಲ. ಮೈಕ್ರೊಸಾಫ್ಟ್ ಪಿಸಿ ತಂತ್ರಾಂಶದಲ್ಲಿ ಹೆಚ್ಚಿನ ಪಾಲು ಪಡೆದಿದ್ದರೂ ಮತ್ತು ದೊಡ್ಡ ದೊಡ್ಡ ವ್ಯಾಪಾರಗಳಿಗಾಗಿ ಕ್ಲೌಡ್ ಸೇವೆಗಳ ದೊಡ್ಡ ಪ್ಲಾಟ್‌ಫಾರಂ ರಚಿಸಿಕೊಂಡಿದ್ದರೂ ಅದು ಆ ಕ್ಷೇತ್ರದಲ್ಲಿ ಅಗ್ರಸ್ಥಾನದಲ್ಲಿ ಇರುವ ಅಮೇಜಾನ್ ಜತೆಯಲ್ಲಿ ಸ್ಪರ್ಧಿಸಬೇಕಿದೆ. ಗೂಗಲ್ ಸಹ ಕ್ಲೌಡ್ ಸೇವೆಗಳನ್ನು ಒದಗಿಸುತ್ತಿದ್ದರೂ ಅದು ಅಮೇಜಾನ್ ಮತ್ತು ಮೈಕ್ರೋಸಾಫ್ಟ್‌ಗಿಂತ ಈ ಕ್ಷೇತ್ರದಲ್ಲಿ ಹಿಂದಿದೆ.

ಈ ಎಲ್ಲಾ ಕಂಪನಿಗಳಿಗೂ ಭಾರತದ ಗ್ರಾಹಕರನ್ನು ಮತ್ತು ವ್ಯಾಪಾರಗಳನ್ನು ತಲುಪಲು ದೂರ ಸಂಪರ್ಕದ ಮೂಲ ಸೌರ್ಕಯ್ರ ಅನಿವಾರ್ಯ. ಪ್ರತಿಯೊಂದು ಕಂಪನಿ ಸಹ ಹಣಕಾಸು ಮತ್ತು ಹಣ ಪಾವತಿ ವ್ಯವಸ್ಥೆಯಂತಹ ಹೊಸ ಹೊಸ ಕ್ಷೇತ್ರಗಳನ್ನು ಪ್ರವೇಶಿಸಲು ಹವಣಿಸುತ್ತಿವೆ. ಇದಕ್ಕೆ ದೂರಸಂಪರ್ಕದ ಜಾಲದ ವ್ಯವಸ್ಥೆಯ ಜತೆಯಲ್ಲೇ, ಗ್ರಾಹಕರ ರಕ್ಷಣೆಗಾಗಿ ಮತ್ತು ದೇಶದ ಸಾರ್ವಭೌಮತ್ವವನ್ನು ಕಾಪಾಡುವ ಸಲುವಾಗಿರುವ ಸರಕಾರಿ ನಿಯಂತ್ರಣ ಪ್ರಾಧಿಕಾರಗಳ ಜತೆ ವ್ಯವಹರಿಸುವುದು ಮತ್ತು ಅವನ್ನು ನಿಭಾಯಿಸುವ ಮಾರ್ಗವೂ ಬೇಕಾಗಿರುತ್ತದೆ. ಇಲ್ಲಿ ರಿಲೈಯನ್ಸ್ ಮುಖಾಂತರ ಡಬ್ಬಲ್ ಪ್ರಯೋಜನ ಸಿಗುತ್ತದೆ. ಅದು ದೂರಸಂಪರ್ಕ ಜಾಲದ ವ್ಯವಸ್ಥೆ ಮತ್ತು ದೇಶದ ನಿಯಂತ್ರಣ ಪ್ರಾಧಿಕಾರಗಳನ್ನು ಬೇಕಾದ ಹಾಗೆ ಪಳಗಿಸುವ ಸಾಮರ್ಥ್ಯ ಎರಡನ್ನೂ ಹೊಂದಿದೆ. ಹಾಗಾಗಿ ಗೂಗಲ್ ತನ್ನ ಗೂಗಲ್ ಪೇ ಮತ್ತು ಫೇಸ್‌ಬುಕ್ ತನ್ನ ಡಿಜಿಟಲ್ ಮನಿ ಗಳೊಂದಿಗೆ, ಭಾರತದ ಮಾರುಕಟ್ಟೆಯನ್ನು ರಿಲೈಯನ್ಸ್‌ನ ಜಿಯೋ ಪೇಮೆಂಟ್ ಬ್ಯಾಂಕಿನ ಮುಖಾಂತರ ಹಿಂಬಾಗಿಲಿನಿಂದ ಪ್ರವೇಶಿಸಬಹುದು.

ಇನ್ನು ಚಿಲ್ಲರೆ ವ್ಯಾಪಾರದಲ್ಲಿ (ರಿಲೈಯನ್ಸ್ ರಿಟೇಲ್)ಈ ತಂತ್ರಜ್ಞಾನದ ಪಾಲುದಾರರು ಸ್ಪರ್ಧಿಗಳಲ್ಲ. ಆದರೆ ಅಮೇಜಾನ್ ಮತ್ತು ಫ್ಲಿಪ್‌ಕಾರ್ಟ್ ಗಳು ಸ್ಪರ್ಧಿಗಳಾಗಿರುತ್ತಾರೆ. ಈಗಾಗಲೇ ಇ–ಕಾಮರ್ಸ್ ಮಾರುಕಟ್ಟೆ ಹಲವಾರು ಸ್ಪರ್ಧಿಗಳಿಂದ ತುಂಬಿದೆ. ಇಲ್ಲಿ ರಿಲೈಯನ್ಸ್ ನ ರಣನೀತಿ ಬಹಳ ಸರಳ. ಭಾರೀ ಪ್ರಮಾಣದ ವ್ಯವಹಾರ ಬೆಳೆಸುವುದು, ದರ ಪೈಪೋಟಿಯಿಂದ ಕ್ಷಣಿಕವಾಗಿ ನಷ್ಟವಾದರೂ ಅಗ್ಗದ ದರಗಳಿಂದ ಸ್ಪರ್ಧಿಗಳನ್ನು ಬೀಳಿಸುವುದು. ಹೀಗೆ ಸ್ಪರ್ಧಿಗಳು ಸೋತಾಗ ಬೆಲೆಗಳನ್ನು ಏರಿಸುವುದು. ದೂರಸಂಪರ್ಕ ಕ್ಷೇತ್ರದಲ್ಲಿ ಇದನ್ನು ಪ್ರಾಯೋಗಿಕವಾಗಿ ಮಾಡಿದ ಅನುಭವ ಅದಕ್ಕಿದೆ. ಇದು ಧೀರೂಬಾಯಿ ಅಂಬಾನಿಯವರ ಕಾಲದಿಂದಲೂ ಅನುಸರಿಸಿದ ನೀತಿ.




ಇದಕ್ಕೆ ಬೇಕಿರುವುದು ದೊಡ್ಡ ಜೇಬು, ಹೇಳಿದಂತೆ ಕೇಳುವ ಸರ್ಕಾರ ಹಾಗೂ ಬಗ್ಗಿಸಬಹುದಾದ ನಿಯಂತ್ರಣ ಪ್ರಾಧಿಕಾರ ವ್ಯವಸ್ಥೆ. ಈ ವಿಷಯದಲ್ಲಿ ರಿಲೈಯನ್ಸ್ ಸತತವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಗಳಿಂದ ಪೂರ್ಣ ಆಶೀರ್ವಾದದ ಮೂಕ ಇವನ್ನು ಪಡೆದಿದೆ.

ಸ್ವಾವಲಂಬಿಯಾಗಿ ತನ್ನ ಸಂಸ್ಥೆಯಲ್ಲೇ ‘ದೇಶಿಯವಾದ 5ಜಿ ತಂತ್ರಜ್ಞಾನ’ವನ್ನು ಬೆಳೆಸಿರುವುದಾಗಿ ಹೇಳಿಕೊಳ್ಳುತ್ತಿರುವುದು ರಿಲೈಯನ್ಸ್ ಬತ್ತಳಿಕೆಯ ಹೊಸ ಬಾಣವಿದ್ದಂತಿದೆ. ಆದರೆ ರಿಲೈಯನ್ಸ್ ಬಳಿ ಯಾವುದೇ ನೆರವಿಲ್ಲದೆ ಶೂನ್ಯದಿಂದ ಆರಂಭಿಸಿ 5ಜಿ ತಂತ್ರಜ್ಞಾನ ನಿರ್ಮಿಸುವ ಸಾಮರ್ಥ್ಯ ಒತ್ತಟ್ಟಿಗಿರಲಿ, ಡಿಜಿಟಲ್ ಜಾಲ ವ್ಯವಸ್ಥೆಯ ತಂತ್ರಜ್ಞಾನದ ಬೆಳವಣಿಗೆಗೆ ಬೇಕಾದ ಸಾಮರ್ಥ್ಯದ ಯಾವ ಕುರುಹು ಸಹ ಇಲ್ಲ. ಅದು ತೈಲ ಕ್ಷೇತ್ರದಲ್ಲೂ ಯಾವುದನ್ನೂ ನಿರ್ಮಿಸದೇ ತಂತ್ರಜ್ಞಾನವನ್ನು ಉತ್ಪನ್ನಗಳ ರೂಪದಲ್ಲಿ ಕೊಂಡುಕೊಂಡಿದೆ ಅಷ್ಟೇ. ಅದರ ಸಮಗ್ರ 4ಜಿ ವ್ಯವಸ್ಥೆ ನಿರ್ಮಿಸಿದ್ದು ದ.ಕೊರಿಯಾ ಮೂಲದ ಸ್ಯಾಮ್‌ಸಂಗ್ ಆಗಿದ್ದು, ಅದು 5ಜಿ ನಿರ್ಮಿಸುವ ಚೀನಾದ ಹ್ವಾವೆ ಕಂಪನಿಗೆ ಪ್ರತಿಸ್ಪರ್ಧಿಯಾಗಿದೆ. ಜಿಯೋ ಕಂಪನಿಯಲ್ಲಿ ಹೂಡಿಕೆ ಮಾಡಿರುವ ಕ್ವಾಲ್‌ಕಾಮ್ ವೈರ್‌ಲೆಸ್ ಚಿಪ್‌ಗಳನ್ನು ನಿರ್ಮಿಸುವ ಹ್ವಾವೆ ಕಂಪನಿಯ ಪ್ರಮುಖ ಸ್ಪರ್ಧಿಯಾಗಿದೆ. ಅದರ ಹೂಡಿಕೆ ಜಿಯೋನಲ್ಲಿ ಬರಿಯ 9.7 ಕೋಟಿ ಡಾಲರುಗಳಾದರೂ, ಜಿಯೋದ ‘ದೇಶಿಯ 5ಜಿ ತಂತ್ರಜ್ಞಾನ’ದಲ್ಲಿ ಸ್ಯಾಮ್‌ಸಂಗ್ ಜತೆ ಅದು ಬಹುಶಃ ಪಾಲುದಾರನಾಗಿದೆ.

ಹ್ವಾವೆ, ಕ್ವಾಲ್‌ಕಾಮ್, ಸ್ಯಾಮ್‌ಸಂಗ್ 5ಜಿ ಮಾರುಕಟ್ಟೆಯಲ್ಲಿ ಪ್ರಮುಖ ಪೇಟೆಂಟುಗಳನ್ನು ಹೊಂದಿದ್ದು ಪ್ರಧಾನ ಸ್ಥಾನ ಗಳಿಸಿವೆ. ರಿಲೈಯನ್ಸ್ ಬಳಿ 5ಜಿ ತಂತ್ರಜಾನಕ್ಕೆ ಸಂಬಂಧಿತ ಪೇಟೆಂಟಿನಂತಹ ಯಾವುದೇ ಬೌದ್ಧಿಕ ಆಸ್ತಿ ಇಲ್ಲ. ಇಂತಹ ಬೌದ್ಧಿಕ ಆಸ್ತಿ ಇರುವ ಕಂಪನಿಗಳ ಅಥವಾ ತಂತ್ರಜಾನದ ಖರೀದಿ ಮಾಡದೆ ರಿಲೈಯನ್ಸ್ ಬಳಿ ಯಾವುದೇ 5ಜಿ ತಂತ್ರಜಾನದ ಸಾಮರ್ಥವೂ ಇಲ್ಲ. ನಿರ್ದಿಷ್ಟ ಮಾರುಕಟ್ಟೆಯ ದೊಡ್ಡ ಪಾಲು ಪಡೆದು, ಅದರ ಗಾತ್ರದ ಬಲದಿಂದ ಕಡಿಮೆ ಬೆಲೆಗೆ ಮಾರಾಟ ಸಾಧಿಸಿ, ಯಾವುದೇ ಸ್ಪರ್ಧಿ ಸರಿಗಟ್ಟಲಾಗದಂತೆ ದೊಡ್ಡ ಶಕ್ತಿಯಾಗುವ ಸಾಮರ್ಥ್ಯ ಮಾತ್ರ ರಿಲೈಯನ್ಸ್ ಬಳಿ ಇದೆ. ಆದರೆ ತಂತ್ರಜ್ಞಾನದ ವ್ಯವಹಾರ ಬಹಳ ಬೇರೆ ರೀತಿಯದು. ಅದು ಹೊಸ ತಂತ್ರಜ್ಞಾನವನ್ನು ಬೆಳವಣಿಗೆ ಮಾಡುತ್ತಲೇ ಈಗ ಇರದ ಹೊಸ ಅವಶ್ಯಕತೆಗಳನ್ನು ಸೃಷ್ಟಿಮಾಡುತ್ತದೆ. ತಂತ್ರಜ್ಞಾನದ ಬಲದಿಂದಲೇ ಅವಶ್ಯಕತೆಗಳನ್ನು ಸೃಷ್ಟಿಸುತ್ತದೆ. ಪಿಸಿಗಳು, ಮೊಬೈಲ್, ಸರ್ಚ್ ಇಂಜಿನ್ ಇವೆಲ್ಲ ಇದರ ಉದಾಹರಣೆಗಳು. ಇಲ್ಲಿ ಮಾರುಕಟ್ಟೆ ತಂತ್ರಜ್ಞಾನವನ್ನು ಅನುಸರಿಸುತ್ತದೆ. ಮತ್ತು ಅವುಗಳನ್ನು ಶೂನ್ಯದಿಂದ ಬೆಳವಣಿಗೆ ಮಾಡಿರುತ್ತಾರೆ.

ರಿಲೈಯನ್ಸ ತನ್ನ ಈಗಿನ ಮೊಬೈಲ್ ನೆಟ್‌ವರ್ಕ್ ಸಾಮರ್ಥ್ಯವನ್ನು ಬಳಸಿ 5ಜಿ ನೆಟ್‌ವರ್ಕ್ ನಲ್ಲಿ ಏಕೈಕ ಶಕ್ತಿಯಾಗಲು ಬಳಸುತ್ತಿದೆ. ಈಗಾಗಲೇ ಅದು ಬಿಎಸ್‌ಎನ್‌ಎಲ್ ಅನ್ನು ಸುಟ್ಟು ಎಸೆದಾಗಿದೆ ಮತ್ತು ವೊಡಪೋನ್–ಐಡಿಯಾ ಅದರ ಹಾದಿಯಲ್ಲೇ ಇದೆ. ಭಾರತಿ ಟೆಲಿಕಾಂ (ಏರ್‌ಟೆಲ್)ಹಿಂದೆ ತಪ್ಪಿಸಿಕೊಂಡಿದ್ದ ಲೈಸೆನ್ಸ್ ಫೀ ಮತ್ತು ಸಾಲದ ಭಾರವನ್ನು ಈಗ ಪಾವತಿ ಮಾಡಲೇಬೇಕಾಗಿದ್ದು, 5 ಜಿ ಲೈಸೆನ್ಸ್ ಪಡೆಯುವ ಸ್ಪರ್ಧೆಯಲ್ಲಿ ಭಾಗವಹಿಸುವುದು ಅದಕ್ಕೆ ಕಷ್ಟವಾಗಬಹುದು. 5ಜಿ ಮಾರುಕಟ್ಟೆಯ ಗಾತ್ರದಲ್ಲಿ ವಿಶ್ವದಲ್ಲಿ ಭಾರತ ಚೈನಾದ ನಂತರ ಎರಡನೇಯ ಸ್ಥಾನದಲ್ಲಿದೆ. ಭಾರತದಲ್ಲಿ 5ಜಿ ಏಕಸ್ವಾಮ್ಯತೆ ಪಡೆದು ರಿಲೈಯನ್ಸ್ ಅಮೇರಿಕಾ, ದ. ಕೊರಿಯಾ ಮತ್ತು ಉಳಿದ

**ಪುಟ 10 ನೋಡಿ**

# ಅಂದು 'ಕ್ವಿಟ್ ಇಂಡಿಯ' ಇಂದು 'ಸೇವ್ ಇಂಡಿಯ'





ಎಪ್ಪತ್ತೆಂಟು ವರ್ಷಗಳ ಹಿಂದೆ ಆಗಸ್ಟ್ 9, 1942 ರಂದು ಭಾರತದ ಜನರೆಲ್ಲ ಒಂದಾಗಿ ಬ್ರಿಟಿಶ್ ವಸಾಹತುಶಾಹಿ ಗಳಿಗೆ 'ಭಾರತ ಬಿಟ್ಟು ತೊಲಗಿ' ಎಂದು ಎಚ್ಚರಿಕೆ ನೀಡಿದ್ದರು. ಈಗ ಕೊವಿಡ್ ಪಿಡುಗಿನ ಮರೆಯಲ್ಲಿ ಮತ್ತೆ ಭಾರತದ ಸ್ವಾತಂತ್ರ್ಯವನ್ನು ದೇಶಿ-ವಿದೇಶಿ ಶೋಷಕರಿಗೆ ವಹಿಸಿ ಕೊಡುವ ಮೋದಿ ಸರಕಾರದ ಹುನ್ನಾರಗಳಿಗೆ ದೇಶದ ಶ್ರಮಜೀವಿಗಳು-ಕಾರ್ಮಿಕರು, ರೈತರು, ಕೃಷಿಕೂಲಿಕಾರರು ಸವಾಲು ಹಾಕಿದ್ದಾರೆ. ಆಗಸ್ಟ್ 9 ನ್ನು 'ಭಾರತ ರಕ್ಷಿಸಿ; ದಿನವಾಗಿ ಆಚರಿಸುತ್ತಿದ್ದಾರೆ. ಆಗಸ್ಟ್ 9, 2020 ಭಾನುವಾರವಾದ್ದರಿಂದ ಮರುದಿನ ಆಗಸ್ಟ್ 10 ರಂದು ಇದನ್ನು ಆಚರಿಸುತ್ತಿದ್ದಾರೆ. ಕಳೆದ ಎರಡು ತಿಂಗಳಿಂದ ವಿವಿಧ ದುಡಿಯುವ ಜನವಿಭಾಗಗಳು ಹಲವಾರು ನಿರ್ಬಂಧಗಳ ನಡುವೆ ನಡೆಸಿಕೊಂಡು ಬಂದಿರುವ ಪ್ರತಿರೋಧ ತೀವ್ರ ಸ್ವರೂಪ ಪಡೆಯುತ್ತಿರುವು'ದನ್ನು ಇದು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ರೈತ-ಕೃಷಿಕೂಲಿಕಾರ ಸಂಘಟನೆಗಳ ಮನವಿಯನ್ನು ಈ ಪುಟಗಳಲ್ಲಿ ಪ್ರಕಟಿಸುತ್ತಿದ್ದೇವೆ.

## "ಭಾರತ ರಕ್ಷಿಸಿ" ಎಂಬ ಘೋಷಣೆಯೊಂದಿಗೆ ಪ್ರತಿಭಟನಾ ಹೋರಾಟ–JCTU

ಕೋವಿಡ್-19 ರ ಪಿಡುಗು ನಮ್ಮ ದೇಶದ ಕಾರ್ಮಿಕ ವರ್ಗದ ಜನರ ಬದುಕಿನಲ್ಲಿ ಹಿಂದೆಂದೂ ಇಲ್ಲದಂತಹ ಬಿರುಗಾಳಿಯನ್ನೆಬ್ಬಿಸಿ ದುಸ್ತರವಾಗಿಸಿದೆ. ಹಠಾತ್ತನೆ ಜಗತ್ತಿನಲ್ಲಿಯೇ ಅತ್ಯಂತ ಕಠಿಣ ಲಾಕ್‌ಡೌನ್ ಅನ್ನು ಹೇರಿದ್ದು ಸಹ ದುಡಿಯುವ ಜನತೆಯನ್ನು ತೀವ್ರ ಆರ್ಥಿಕ ಒತ್ತಡಕ್ಕೆ ನೂಕಿದ್ದು; ಇದಕ್ಕೆ ದೊಡ್ಡ ಪ್ರಮಾಣದ ಉದ್ಯೋಗ ನಷ್ಟವೇ ಸಾಕ್ಷಿಯಾಗಿದೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE)ಯ ವರದಿಯ ಪ್ರಕಾರ ನಗರ ಪ್ರದೇಶದ ನಿರುದ್ಯೋಗದ ಪ್ರಮಾಣ ಶೇ.30ಕ್ಕೆ ಏರಿದೆ. ವಲಸೆ ಕಾರ್ಮಿಕರು ಮಾನವೀಯ ನಗರಗಳಿಂದ ಬೇಸಿಗೆಯ ಬಿರುಬಿಸಿಲಿನಲ್ಲಿ ಬರಿಗಾಲಿನಲ್ಲಿ ನೂರಾರು ಮೈಲಿ ನಡೆಯುತ್ತಾ ತಮ್ಮ ಹುಟ್ಟೂರಿಗೆ ನಡೆಯುತ್ತಾ ಸಾಗುವ ದೃಶ್ಯ ಇದೊಂದು ತಪ್ಪಿಸಬಹುದಾಗಿದ್ದ ಮಾನವ ನಿರ್ಮಿತ ದುರಂತವೆಂದು ನಮ್ಮೆಲ್ಲರ ಸಾಮೂಹಿಕ ಅಂತರ್‌ಪ್ರಜ್ಞೆಗೆ ನಿರಂತರ ಕಳಂಕವಾಗಿ ಕಾಡುವುದು ಖಂಡಿತ.

ಬೃಹತ್ ಕಾರ್ಪೊರೇಟ್ ಉದ್ಯಮಪತಿಗಳ ಪರ ವಕ್ತಾರನಾಗಿರುವ ಕೇಂದ್ರ ಸರ್ಕಾರವು ಬಿ.ಜೆ.ಪಿ. ಆಳ್ವಿಕೆಯ ರಾಜ್ಯಸರ್ಕಾರಗಳ ಮೂಲಕ, ಪ್ರಜಾಪ್ರಭುತ್ವ ವಿರೋಧಿ ರೀತಿಯಲ್ಲಿ ಶಾಸನ ಸಭೆಗಳನ್ನು ಉಪೇಕ್ಷಿಸಿ ಸುಗ್ರೀವಾಜ್ಞೆಗಳ ಮೂಲಕ ಕಾರ್ಮಿಕ ವಿರೋಧಿ, ಕಾರ್ಮಿಕ ಕಾನೂನುಗಳ ಬದಲಾವಣೆ, ರೈತ ವಿರೋಧಿ ಭೂಸಂಬಂಧಿ ಕಾನೂನುಗಳ ಬದಲಾವಣೆಯನ್ನು ತರಲು ಹಟತೊಟ್ಟಿದೆ.

ಕರ್ನಾಟಕ ಸರ್ಕಾರವು ಇತ್ತೀಚೆಗೆ ಶೇ.80ಕ್ಕೂ ಅಧಿಕ ಉದ್ದಿಮೆಗಳ ಮಾಲೀಕರಿಗೆ ಕೆಲಸಗಾರರನ್ನು ಮನಸೋ ಇಚ್ಛೆ ಬಳಸಿ ಬಿಸಾಡುವ ಸ್ವಾತಂತ್ರ್ಯವನ್ನು ನೀಡುವಂತಹ ತಿದ್ದುಪಡಿಯನ್ನು ಕೈಗಾರಿಕಾ ವಿವಾದ ಕಾಯಿದೆಯಲ್ಲಿ ತಂದಿದೆ.

ಕಾರ್ಖಾನೆಗಳ ಕಾಯಿದೆಯಲ್ಲಿ ತಂದಿರುವ ತಿದ್ದುಪಡಿಗಳು ರಾಜ್ಯದ ಶೇ.50 ಭಾಗ ಸಂಘಟಿತ ವಲಯದ ಕಾರ್ಮಿಕರಿಗೆ ಮೂಲಭೂತ ಹಕ್ಕುಗಳಾದ ಕೆಲಸದ ಅವಧಿ, ಓವರ್‌ಟೈಮ್ ಭತ್ಯೆ, ಸುರಕ್ಷತೆ, ಮತ್ತು ಗಳಿಕೆರಜೆಯಂತಹ ಸೌಲಭ್ಯಗಳಿಂದ ನಿರಾಕರಿಸಿ ಹೊರದೂಡಿದೆ.

ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) ಕಾಯಿದೆಗೆ ತಂದಿರುವ ತಿದ್ದುಪಡಿಗಳು ನಿರ್ಲಜ್ಜ ಗುತ್ತಿಗೆದಾರರಿಗೆ ಕಾನೂನಿನ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳಲು ಅನಿರ್ಬಂಧಿತ ಅವಕಾಶದ ಸ್ವಾತಂತ್ರ್ಯವನ್ನು ಕೊಟ್ಟಿದೆ. ರೂ. 417/- ವ್ಯತ್ಯಸ್ಥ ತುಟ್ಟಿಭತ್ಯೆ ಪಾವತಿಯನ್ನು ಒಂದು

ಪುಟ 10 ನೋಡಿ

### ಅಂದು ಕ್ವಿಟ್ ಇಂಡಿಯಾ ಇಂದು ಸೇವ್ ಇಂಡಿಯಾ

- ಕೋವಿಡ್-19 ಸಮರ್ಥ ನಿಯಂತ್ರಣಕ್ಕಾಗಿ
- ಕಾರ್ಮಿಕ ವಿರೋಧಿ-ರೈತ ವಿರೋಧಿ
  - ಕಾರ್ಮಿಕ ಕಾನೂನುಗಳು
  - ಭೂಸುಧಾರಣಾ ಕಾಯ್ದೆ
  - ಎಪಿಎಂಸಿ ಕಾಯ್ದೆ
  - ವಿದ್ಯುತ್ ಕಾಯ್ದೆ
  - ಬಿಡಿಎ ಕಾಯ್ದೆ
  - ಅಗತ್ಯ ವಸ್ತುಗಳ ಕಾಯ್ದೆ
  - ಭೂ ಕಂದಾಯ ಕಾಯ್ದೆ
  - ಪರಿಸರ ಪರಿಣಾಮ ಅಂದಾಜು ಕಾಯ್ದೆ

  ತಿದ್ದುಪಡಿ ಸುಗ್ರೀವಾಜ್ಞೆಗಳ ವಾಪಸ್ಸಿಗಾಗಿ
- ಎಲ್ಲಾ ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಪ್ರತಿ ಕುಟುಂಬಕ್ಕೂ ಮುಂದಿನ 6 ತಿಂಗಳು ರೂ.7500 ನೇರ ನಗದು ವರ್ಗಾವಣೆಗಾಗಿ
- ಪ್ರತಿಯೊಬ್ಬರಿಗೂ ಮುಂದಿನ ಆರು ತಿಂಗಳು ತಲಾ 10 ಕೆ.ಜಿ. ಉಚಿತ ಆಹಾರ ಧಾನ್ಯ ವಿತರಣೆಗಾಗಿ
- ರೂ.600/- ಕೂಲಿಯೊಂದಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 200 ದಿನಗಳ ಕೆಲಸಗಳಿಗಾಗಿ ಮತ್ತು ನಗರ ಪ್ರದೇಶಗಳಿಗೂ ವಿಸ್ತರಣೆಗಾಗಿ
- ಕೋವಿಡ್ ಖರೀದಿ ಭ್ರಷ್ಟಾಚಾರ ಹಗರಣದ ಸ್ವತಂತ್ರ ನ್ಯಾಯಾಂಗ ತನಿಖೆಗಾಗಿ

ರಾಷ್ಟ್ರವ್ಯಾಪಿ
**ಜೈಲ್ ಭರೋ**
10, ಆಗಸ್ಟ್ 2020

ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (JCTU)
ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ (AIKSCC)
ಮತ್ತು
ವಿದ್ಯಾರ್ಥಿ ಯುವಜನ ಹಾಗೂ ಮಹಿಳಾ ಸಂಘಟನೆಗಳು
ಕರ್ನಾಟಕ



## "ಕಾರ್ಪೊರೇಟ್‌ಗಳೇ ಬೇಸಾಯ ಬಿಟ್ಟು ತೊಲಗಿ"

### ರೈತ ಸಂಘರ್ಷ ಸಮನ್ವಯ ಸಮಿತಿ, ಕರ್ನಾಟಕ

"ಬೆಳಗಾಗಿ ನಾನೆದ್ದು ಯಾರ್ಯಾರಾ ನೆನಯಲಿ; ಎಳ್ಳು ಜೀರಿಗೆ ಬೆಳೆಯೋಳಾ; ಎಳ್ಳು ಜೀರಿಗೆ ಬೆಳೆಯೋಳಾ ಭೂಮ್ತಾಯಿ ಎದ್ದೊಂದು ಗಳಿಗೆ ನೆನೆದಾನಾ" ಎಂಬ ಜನಜನಿತ ಜಾನಪದ ಸಾಹಿತ್ಯಕ್ಕೆ ಮನ ಸೋಲದವರೇ ಇಲ್ಲ. ಇಡೀ ಮಾನವ ಕುಲ ಕೋಟಿಯನ್ನು ಸಹಸ್ರಾರು ವರ್ಷಗಳಿಂದ ಪೋಷಿಸಿದ ಭೂಮಿಗೆ ನಮ್ಮ ಜನಪದರ ತಲಾತಲಾಂತರದ ನಲ್ಮೆಯ ಸಂಕೇತವಿದು.

ಜಾಗತೀಕರಣ ಧೋರಣೆಗಳ ಕಾಲಘಟ್ಟದಲ್ಲಿ ರೈತರ ಪಾಡು ಬೆಳಗಾಗಿ ನಾನೆದ್ದು ಯಾವ್ಯಾವ ಕಾರ್ಪೊರೇಟ್ ಕಂಪನಿಯ ನೆನೆಯಲಿ, ಕೂಲಿಗಾಗಿ ಯಾವ್ಯಾವ ಕಂಪನಿಯ ಕದವ ಬಡಿಯಲಿ ಎಂದು ಬದಲಾಗುತ್ತಿದೆ. ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮತ್ತು ಅನೇಕ ರಾಜ್ಯ ಸರ್ಕಾರಗಳು ತರುತ್ತಿರುವ ಕಾನೂನುಗಳು ಮತ್ತು ಸುಗ್ರೀವಾಜ್ಞೆಗಳು ರೈತಾಪಿ ಬೇಸಾಯವನ್ನು ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸುವ ಕ್ರಮಗಳಾಗಿವೆ.

03-06-2020 ರಂದು ಕೇಂದ್ರ ಸರ್ಕಾರ ಹೊರಡಿಸಿದ ಎಲ್ಲಾ ಮೂರು ಸುಗ್ರಿವಾಜ್ಞೆಗಳಾದ 1)ಕೃಷಿ ಉತ್ಪನ್ನ ವಾಣಿಜ್ಯ ಮತ್ತು ಮಾರಾಟ (ಉತ್ತೇಜನ ಹಾಗೂ ಬೆಂಬಲ) ಸುಗ್ರಿವಾಜ್ಞೆ -2020 2)ಬೆಲೆ ಭರವಸೆ (ಸಶಕ್ತೀಕರಣ ಹಾಗೂ ಸುರಕ್ಷೆ)ಮತ್ತು ಕೃಷಿ ಸೇವೆಗಳ ಕುರಿತ ಒಪ್ಪಂದ ಸುಗ್ರಿವಾಜ್ಞೆ -2020 3) ಅಗತ್ಯ ವಸ್ತುಗಳ ಕಾಯ್ದೆ (ತಿದ್ದುಪಡಿ) -2020 ಎಂಬ ರೈತ ವಿರೋಧಿಯಾದ ಈ ಕಾನೂನುಗಳು ಬೆಳೆಗಳ ದರಗಳನ್ನು ಇಳಿಸುತ್ತವೆ. ಕೃಷಿ ವೆಚ್ಚಗಳನ್ನು ದುಬಾರಿಗೊಳಿಸಿ ಬೀಜ ಸಂರಕ್ಷಣೆಯನ್ನು ನಾಶಪಡಿಸುತ್ತವೆ. ಆಹಾರ ಭದ್ರತೆ ಹಾಗೂ ಸರ್ಕಾರದ ಮಧ್ಯಪ್ರವೇಶದ ಸಾಧ್ಯತೆಯನ್ನು ಕೊನೆಗಾಣಿಸುತ್ತದೆ. ಇವು ಒಟ್ಟಾರೆಯಾಗಿ ಕಾರ್ಪೊರೇಟ್ ವಲಯವನ್ನು ಉತ್ತೇಜಿಸಲಿದ್ದು, ಆಹಾರ ಪೂರೈಕೆ, ದಾಸ್ತಾನು ಹಾಗೂ ಕಾಳಸಂತೆ ಮಾರುಕಟ್ಟೆಯನ್ನು ಕಾರ್ಪೊರೇಟ್ ಸಂಸ್ಥೆಗಳ ನಿಯಂತ್ರಣಕ್ಕೆ ಒಳಪಡಿಸಲಿವೆ.

ಕರ್ನಾಟಕ ರಾಜ್ಯ ಸರ್ಕಾರವು ಭೂ ಸುಧಾರಣಾ ಕಾಯ್ದೆ-1961ಕ್ಕೆ ತಂದಿರುವ ತಿದ್ದುಪಡಿಗಳು ಕೃಷಿಯೇತರ ಉದ್ದೇಶಗಳಿಗಾಗಿ ಅಂದರೆ ಬಂಡವಾಳದಾರರ ಕೈಗಾರಿಕೆಗಳಿಗೆ, ಮಾನ್ಯತೆಯ ಶಿಕ್ಷಣ ಸಂಸ್ಥೆಗಳಿಗೆ, ದೇವಾಲಯಗಳಿಗೆ ಮತ್ತು ಹೂ-ಹಣ್ಣು ಬೇಸಾಯಕ್ಕಾಗಿ ಒಟ್ಟು 55 ಯೂನಿಟ್ ಗಳ ಜಮೀನುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಇದ್ದ ಇದುವರೆಗಿನ ಮಿತಿಯನ್ನು 110 ಯೂನಿಟ್ ಗಳಿಗೆ (ಎರಡು ಪಟ್ಟು) ವಿಸ್ತರಿಸಿ ಒಟ್ಟು 594 ಎಕರೆ ಜಮೀನು ಹೊಂದಲು ಅವಕಾಶ ಮಾಡಿಕೊಟ್ಟಿದೆ. ಇಂತಹ ಜಮೀನುಗಳ ಭೂ ಪರಿವರ್ತನೆಯನ್ನು ವಿಳಂಬವಿಲ್ಲದೇ ಮಾಡಿಕೊಡಬೇಕು. ಒಂದು ವೇಳೆ ಜಿಲ್ಲಾಧಿಕಾರಿಗಳು ಒಂದು ತಿಂಗಳೊಳಗೆ ಭೂ ಪರಿವರ್ತನೆ ಮಾಡಿಕೊಡದಿದ್ದರೆ, ಮಾಡಿಕೊಟ್ಟಂತೆಯೇ ಎಂದೇ ಭಾವಿಸಿ ಜಮೀನು ಬಳಕೆ ಮಾಡಬಹುದೆಂದು ಈ ತಿದ್ದುಪಡಿಯು ಆದೇಶಿಸಿದೆ. ಇಂತಹ ಜಮೀನುಗಳ ಬಳಕೆ ಮಾಡದೇ ಹಾಗೇ ಇಟ್ಟುಕೊಂಡರೂ ಈ ತಿದ್ದುಪಡಿ ರಕ್ಷಣೆ ಒದಗಿಸಿದೆ. ಹಾಗೆಯೇ ಸಂಸ್ಥೆಗಳು, ಕಾರ್ಖಾನೆಗಳು ಇಂತವುಗಳಿಗೆ ಗುತ್ತಿಗೆ ನೀಡಿದ ಭೂಮಿಯನ್ನು ಆ ಸಂಸ್ಥೆಗಳಿಗೆ ನೋಂದಣಿ ದರದಲ್ಲೇ ಖಾಯಂ ಆಗಿ ವರ್ಗಾಯಿಸಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದು ಸಾರ್ವಜನಿಕ ಸಂಪತ್ತನ್ನು ಚಿಲ್ಲರೆ ಕಾಸಿಗೆ ಖಾಸಗಿಯವರಿಗೆ ವರ್ಗಾಯಿಸುವ ಹುನ್ನಾರವಾಗಿದೆ. ಬಡ ರೈತರ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ನೆಪಹೇಳಿ ನಿರಾಕರಿಸುತ್ತಿರುವ ಸರ್ಕಾರ ಕಂಪನಗಳಿಗೆ ಭೂಮಿ ನೀಡುವ ದಲ್ಲಾಳಿಯ ಕಾರ್ಯ ಮಾಡುತ್ತಿದೆ.

ಕೂಲಿಕಾರರೂ ಸೇರಿದಂತೆ ಇಡೀ ರೈತಾಪಿ ಸಮುದಾಯವನ್ನು ಸಾಲದ ಸುಳಿಯಿಂದ ಪಾರುಮಾಡಬೇಕೆಂದು ರೈತ ಸಂಘಟನೆಗಳು

ಪುಟ 12 ನೋಡಿ

# "ಭಾರತ ರಕ್ಷಿಸಿ" ಎಂಬ ಘೋಷಣೆಯೊಂದಿಗೆ ಪ್ರತಿಭಟನಾ ಹೋರಾಟ–JCTU



ಪುಟ 9 ರಿಂದ

ವರ್ಷ ಮುಂದೂಡುವ ಮೂಲಕ ರಾಜ್ಯ ಸರ್ಕಾರ ತಿಂಗಳಿಗೆ ಕೇವಲ ರೂ. 11,000/– ಅಲ್ಪ ವರಮಾನದ ಅತ್ಯಂತ ದುರ್ಬಲ ವರ್ಗದ ದುಡಿಯುವ ಜನರ ಹೊಟ್ಟೆಯ ಮೇಲೆ ಗದಾಪ್ರಹಾರವನ್ನೇ ಮಾಡಿದೆ.

ಮಾದರಿ ಸ್ಥಾಯಿ ಆದೇಶವನ್ನು ತಿದ್ದುಪಡಿ ಮಾಡಿ ನಿಗದಿತ ಕಾಲಾವಧಿ ಕೆಲಸ ((fixed term employment)ವನ್ನು ಜಾರಿಗೊಳಿಸಿರುವ ರಾಜ್ಯಸರ್ಕಾರದ ತೀರ್ಮಾನ ಶಾಶ್ವತ ಕೆಲಸದ ಪರಿಕಲ್ಪನೆಯನ್ನೇ ನಾಶಮಾಡಲು ಮುಂದಾಗಿದೆ.

ರಾಜ್ಯದಲ್ಲಿ ಅಸಂಘಟಿತ ಕೆಲಸಗಾರರ ಸಂಖ್ಯೆಯನ್ನು ಹೆಚ್ಚಿಸುವ ಅತ್ಯಂತ ಪ್ರತಿಗಾಮಿ ಕಾನೂನು ತಿದ್ದುಪಡಿಗಳನ್ನು ಜಾರಿಗೊಳಿಸಲು ರಾಜ್ಯಸರ್ಕಾರವು ಕೋವಿಡ್–19 ಪಿಡುಗಿನ ಸಂದರ್ಭವನ್ನು ಗರಿಷ್ಠ ಪ್ರಮಾಣದಲ್ಲಿ ದುರುಪಯೋಗಪಡಿಸಿಕೊಂಡಿದೆ. ರಾಜ್ಯಸರ್ಕಾರವು ಅಸಂಘಟಿತ ವಲಯದ ಕಾರ್ಮಿಕರ ವರಮಾನ ಹಾಗೂ ಬೃಹತ್ ಪ್ರಮಾಣದ ಉದ್ಯೋಗನಾಶದ ಬಗ್ಗೆ ಉಪೇಕ್ಷೆ ನೀತಿಯನ್ನು ಮುಂದುವರೆಸಿರುವುದನ್ನು ನೋಡಿದರೆ ವಲಸೆ ಕಾರ್ಮಿಕರ ಕುರಿತಂತೆ ಲಾಕ್‌ಡೌನ್ ಅವಧಿಯಲ್ಲಿ ಕಂಡಂತಹ ಬೃಹತ್ ಮಾನವೀಯ ಬಿಕ್ಕಟ್ಟಿನ ಹೊರತಾಗಿಯೂ, ಇನ್ನೂ ಪಾಠ ಕಲಿತಿಲ್ಲವೆಂಬುದು ವೇದ್ಯವಾಗುತ್ತದೆ. ಕಾರ್ಮಿಕರ ಕಲ್ಯಾಣ ಮಂಡಳಿಗೆ ಹಣಕಾಸು ನೆರವು ನೀಡುವ ಬಗ್ಗೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಗೆ ನೀಡಿದ್ದ ಭರವಸೆಯ ಈಡೇರಿಸುವ ದಿಶೆಯಲ್ಲಿ ಸರ್ಕಾರ ಏನೂ ಮಾಡುತ್ತಿಲ್ಲ. ಜಂಟಿ ಸಮಿತಿಯ ಸಹಭಾಗಿ ಸಂಘಟನೆಗಳಾದ ನಮಗೆ ಸರ್ಕಾರದ ಇಡಿ ನೀತಿ ಹಾಗೂ ನಡವಳಿಕೆಯು ಸಂಪೂರ್ಣ ಅಮಾನವೀಯ ಮತ್ತು ಕಳಂಕಿತವಾಗಿದೆ ಎಂಬ ಭಾವನೆ ಉಂಟಾಗಿದೆ. ಕೊಳಕು ಹಣಬಲದ ರಾಜಕಾರಣದಲ್ಲಿ ಮುಳುಗಿರುವ ಸರ್ಕಾರ ಸಮಾಜದ ಅವಶ್ಯಕತೆ ಹಾಗೂ ಕೈಗಾರಿಕೆಗಳ ಅವಶ್ಯಕತೆ ಎರಡೂ ಒಂದೆ ಎಂದು ಭಾವಿಸಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ.

ಸಂಘಟಿತ ವಲಯದಲ್ಲಿ ಬೃಹತ್ ಪ್ರಮಾಣದ ಉದ್ಯೋಗನಾಶ ಹಾಗೂ ಅಸಂಘಟಿತ ವಲಯದಲ್ಲಿ ಜೀವನ ನಾಶಗಳೆರಡನ್ನೂ ಸರ್ಕಾರ ಗಮನಿಸದೆ ಕುರುಡಾಗಿದ್ದು, ಕೋವಿಡ್–19ರ ಬಿಕ್ಕಟ್ಟಿನ ನೆಪದಲ್ಲಿ, ತ್ಯಾಗಬಲಿದಾನಗಳ ಮೂಲಕ ಗಳಿಸಿದ ದುಡಿಯುವ ಜನರ ಹಕ್ಕು ಮತ್ತು ಬೆವರು ಬಸಿದು ಸಂಪಾದಿಸಿದವರ ವರಮಾನವನ್ನು ಕಸಿದು ಅದು ಕಾರ್ಪೊರೇಟ್ ಉದ್ಯಮಪತಿಗಳ ಬೊಕ್ಕಸ ತುಂಬಿಸುವ ಕಾರ್ಯದಲ್ಲಿ ನಿರತವಾಗಿದೆ. ರಾಜ್ಯಸರ್ಕಾರವು ನೆಲಮಟ್ಟದಲ್ಲಿ ಜನರ ಬದುಕಿನ ಜೊತೆ ಸಂಪರ್ಕವನ್ನ ಸಂಪೂರ್ಣ ಕಳೆದುಕೊಂಡಿದೆ. ಕರ್ನಾಟಕದಲ್ಲಿ ಕಾರ್ಮಿಕರು ಎರಡನೆ ದರ್ಜೆಯ ನಾಗರೀಕರೇ? ಅವರಿಗೆ ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ನೆರವಿಗೆ ಅರ್ಹರಲ್ಲವೇ? ಇಂತಹ ಪ್ರಶ್ನೆಗಳಿಗೆ ಪರಿಹಾರ ಹುಡುಕುವ ಬದಲು ರಾಜ್ಯಸರ್ಕಾರವು ಉದ್ಯಮಪತಿಗಳಿಗೆ ನೆರವು ನೀಡುವ ಜವಾಬ್ದಾರಿಯನ್ನು ದುಡಿಯುವ ವರ್ಗದ ಹೆಗಲಮೇಲೆ ಹೊರಿಸಿದೆ.

ಕೋವಿಡ್–19 ಪಿಡುಗಿನ ಕಾರಣ ಉಂಟಾಗಿರುವ ಬಿಕ್ಕಟಿನ ಪರಿಸ್ಥಿತಿಯ ನೆಪದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜದ ಎಲ್ಲಾ ವರ್ಗಗಳ ಮೇಲೆ ಸರ್ವತೋಮುಖ ದಾಳಿ ನಡೆಸಲು ಉಪಯೋಗಿಸಿಕೊಳುತ್ತಿವೆ. ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಾರೀಕರಣ, ಖಾಸಗೀಕರಣ ಮತ್ತು ಕೋಮುವಾದೀಕರಣವನ್ನು ಜಾರಿಗೊಳಿಸುವ ದುರುದ್ದೇಶದ ಹೊಸ ಶಿಕ್ಷಣನೀತಿಯನ್ನು ಕೇಂದ್ರ ಸರ್ಕಾರ ಘೋಷಿಸಿದೆ. ದೇಶದ ಯುವಕರು ನಿರುದ್ಯೋಗಪೀಡಿತರಾಗಿದ್ದು ಉದ್ಯೋಗಾವಕಾಶಗಳಿಗಾಗಿ ಪರಿತಪಿಸುತ್ತಿದ್ದಾರೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಬಜೆಟ್ ಅನುದಾನವನ್ನು ಹೆಚ್ಚಿಸುವಂತೆ ಹಾಗೂ ವರ್ಷಕ್ಕೆ 200 ದಿನಗಳ ಉದ್ಯೋಗ ನೀಡುವ ಮೂಲಕ ಗ್ರಾಮೀಣ ಪ್ರದೇಶದ ಆರ್ಥಿಕತೆಗೆ ಒತ್ತುನೀಡುವಂತೆ ಕಾರ್ಮಿಕ ಸಂಘಟನೆಗಳು ನಿರಂತರವಾಗಿ ಒತ್ತಾಯಿಸುತ್ತಲೇ ಇವೆ.

ಪ್ರಧಾನಮಂತ್ರಿಗಳು ಜನರ ಮೂಗಿಗೆ ಜೇನು ಸವರಲು "ಆತ್ಮ ನಿರ್ಭರ ಭಾರತ" ಎಂಬ ಉದ್ಘೋಷಣೆಗಳನ್ನು ನೀಡುತ್ತಾರೆ. ಆದರೆ ವಾಸ್ತವದಲ್ಲಿ ಅವರ ಸರ್ಕಾರವು ಅವರ ಕಾರ್ಪೊರೇಟ್ ವಲಯದ ಸ್ನೇಹಿತರನ್ನು ಸಂತುಷ್ಟಿಗೊಳಿಸಲು ಬೆಲೆಕಟ್ಟಲಾಗದ ರಾಷ್ಟ್ರೀಯ ಆಸ್ತಿಗಳಾದ ರೈಲ್ವೇ ಮತ್ತಿತರ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಕರಣಕ್ಕೆ ಅನುವು ಮಾಡಿಕೊಡುತ್ತಾರೆ. ಕೋವಿಡ್–19 ಪಿಡುಗು ಸರ್ಕಾರದ ಕಾರ್ಪೊರೇಟ್ ಮಿತ್ರರಿಗೆ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯಲು ಒಳ್ಳೆಯ ಅವಕಾಶವನ್ನು ಒದಗಿಸಿಕೊಟ್ಟಂತಿದೆ.

ರೈತ–ಕಾರ್ಮಿಕರನ್ನು ಸುಲಿದು ಕಾರ್ಪೊರೇಟ್ ವಲಯದ ಮಿತ್ರರನ್ನು ಸಂತುಷ್ಟಿಗೊಳಿಸಲು ನಮ್ಮ ದೇಶದ ಸರ್ಕಾರದ ಧೋರಣೆ–ಕಾರ್ಯಕ್ರಮವನ್ನು ಜಗತ್ತಿನ ಇತರ ದೇಶಗಳು ತೆಗೆದುಕೊಂಡ ಕ್ರಮಗಳ ಜೊತೆ ಹೋಲಿಸಿ ನೋಡಬಹುದು.

ಜಾಗತಿಕ ಸಾಂಕ್ರಾಮಿಕ ಪಿಡುಗಿನಿಂದುಂಟಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ಸಂದರ್ಭದಲ್ಲಿ ನಿರ್ಗತಿಕರಾಗಿರುವ ದೇಶದ ದುಡಿಯುವ ಜನತೆಯ ಕೈಯಲ್ಲಿ ಹಣವನ್ನು ನೀಡುವುದರಿಂದ ಮಾತ್ರ ಬಿಕ್ಕಟ್ಟನ್ನು ಪರಿಹರಿಸಬಹುದು ಎಂಬುದು ಜಾಗತಿಕ ಅನುಭವವೆಂಬ ಸತ್ಯ ಸ್ಪಷ್ಟವಾಗಿದೆ. ಅದರಿಂದ ಮಾತ್ರ ಮಾರುಕಟ್ಟೆಯಲ್ಲಿ, ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಸೃಷ್ಟಿಸಬಹುದಾಗಿದೆ. ಈ ಅಂಶವು ಅರ್ಥಶಾಸ್ತ್ರದ ಸಾಮಾನ್ಯ ತಿಳುವಳಿಕೆಯ ಗ್ರಹಿಕೆಯಲ್ಲದೆ ಬೇರೇನೂ ಅಲ್ಲ. ಅರ್ಥವ್ಯವಸ್ಥೆಯ ಇಂಜಿನ್ ಚಲಿಸುವುದೇ ಕೋಟ್ಯಾಂತರ ದುಡಿಯುವ ಮತ್ತು ಸಾಮಾನ್ಯ ಜನರು ಮಾಡುವ ಅನುಭೋಗ ವೆಚ್ಚದ ಇಂಧನದಿಂದ. ಜಿ.ಡಿ.ಪಿ.ಯ ಶೇ. 60ರಷ್ಟಿರುವ ಅನುಭೋಗ ವೆಚ್ಚವು, ಜಿ.ಡಿ.ಪಿ.ಯ. ಶೇ.22ರಷ್ಟಿರುವ ಹೂಡಿಕೆಗಿಂತ ಅಧಿಕಪಟ್ಟು ಹೆಚ್ಚಿನ ಪ್ರಾಮುಖ್ಯತೆ ಹೊಂದಿದೆ ಎಂಬ ಸಂಗತಿಯನ್ನು ನಾವು ಪದೇ ಪದೇ ಸರ್ಕಾರಕ್ಕೆ ನೆನಪಿಸಿದ್ದೇವೆ. ಮತ್ತು ಕಳೆದ ಮೂರು ವರ್ಷದಲ್ಲಿ ಹೂಡಿಕೆ ಸೂಚ್ಯಂಕವು ಹೆಚ್ಚುಕಡಿಮೆ ಯಥಾಸ್ಥಿತಿಯಲ್ಲಿಯೇ ಇದೆ ಎನ್ನುವುದನ್ನೂ ಒತ್ತಿ ಹೇಳಿದ್ದೇವೆ. ಇದರರ್ಥ ಕಾರ್ಮಿಕ ಕಾನೂನು ಮತ್ತು ಭೂಕಾನೂನುಗಳಲ್ಲಿ ಪ್ರಗತಿವಿರೋಧಿ ತಿದ್ದುಪಡಿಗಳ ಮೂಲಕ ಕೈಗಾರಿಕೋದ್ಯಮಿಗಳಿಗೆ ಕೊಡಲಾಗುವ ಪ್ರೋತ್ಸಾಹಗಳು ಯಾವುದೇ ಹೆಚ್ಚಿನ ಹೂಡಿಕೆಯನ್ನಾಗಲಿ, ಉತ್ಪಾದನಾ ಸಾಮರ್ಥ್ಯ ವಿಸ್ತರಣೆಯಾಗಲಿ, ಹೊಸ ಕಾರ್ಖಾನೆಗಳ ಸ್ಥಾಪನೆಯಾಗಲಿ ತರುವುದಿಲ್ಲ. ಹಿಂದಿನ ವರ್ಷಗಳ ಕೇಂದ್ರ ಬಜೆಟ್‌ನಲ್ಲಿ ಕಾರ್ಪೊರೇಟ್ ತೆರಿಗೆಯ ಪ್ರಮಾಣದಲ್ಲಿ ನೀಡಲಾದ ಶೇ.10 ಇಳಿಕೆಯ ಬೃಹತ್ ಕೊಡುಗೆಯಿಂದ ದೇಶದಲ್ಲಿ ಹೂಡಿಕೆ ಅಥವಾ ಉತ್ಪಾದನಾ ಚಟುವಟಿಕೆಗಳಲ್ಲಿ ಪ್ರತಿಫಲನವಾಗಲಿಲ್ಲ. ಅರ್ಥವ್ಯವಸ್ಥೆಯನ್ನು ಪುನಃಶ್ಚೇತನಗೊಳಿಸಲು ಕರ್ನಾಟಕ ಸರ್ಕಾರವು ಮೊಟ್ಟಮೊದಲಿಗೆ ಉದ್ಯಮಪತಿಗಳ ಹಿತಾಸಕ್ತಿ ಮತ್ತು ಅರ್ಥವ್ಯವಸ್ಥೆಯ ಅಗತ್ಯಗಳು ಎರಡೂ ಒಂದೇ ಎಂಬ ತೀವ್ರ ಬಾಲಿಶ ಗ್ರಹಿಕೆಯ ಪೂರ್ವಗ್ರಹಗಳನ್ನು ಕೈಬಿಡಬೇಕು. ಅದರ ಜೊತೆಗೆ ರಾಜ್ಯಸರ್ಕಾರವು ಅನುಭೋಗ ವೆಚ್ಚವನ್ನು ವಿಸ್ತರಿಸಲು ದುಡಿಯುವ ಜನತೆಯ ಹಾಗೂ ಜನಸಂಖ್ಯೆಯ ಶೇ.90 ರಷ್ಟು ಜನರ ನೈಜ ಆದಾಯವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಬೇಕೆಂದು ನಾವು ಆಗ್ರಹಿಸುತ್ತೇವೆ.

ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಹಲವು ಹತ್ತು ಪ್ರಗತಿವಿರೋಧಿ, ಕಾರ್ಮಿಕವಿರೋಧಿ ಮತ್ತು ರೈತವಿರೋಧಿ ಕ್ರಮಗಳ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಹಭಾಗಿ ಸಂಘಟನೆಗಳ ಪರವಾಗಿ ನಾವು ದುಡಿಯುವ ಜನತೆಗೆ ಪ್ರತಿರೋಧದ ಹೋರಾಟಕ್ಕಿಳಿಯುವಂತೆ ಕರೆ ನೀಡುತ್ತೇವೆ. ಚಾರಿತ್ರಿಕ ಕ್ವಿಟ್ ಇಂಡಿಯಾ ದಿನಾಚರಣೆಯ ಸಂಸ್ಮರಣೆಯಲ್ಲಿ ದಿನಾಂಕ 10.08.2020ರಂದು ಎಲ್ಲಾ ಜಿಲ್ಲೆಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ, ಕೈಗಾರಿಕಾ ಪ್ರದೇಶಗಳಲ್ಲಿ "ಭಾರತ ರಕ್ಷಿಸಿ" ಎಂಬ ಘೋಷಣೆಯೊಂದಿಗೆ ಪ್ರತಿಭಟನಾ ಹೋರಾಟಕ್ಕೆ ಸಿದ್ಧತೆ ನಡೆಸಬೇಕೆಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (JCTU) ಕಾರ್ಮಿಕ ವರ್ಗಕ್ಕೆ ಕರೆ ನೀಡುತ್ತದೆ. 'ಭಾರತ ರಕ್ಷಿಸಿ' ಆಂದೋಲನವು ನಿರಂತರ ಪ್ರತಿರೋಧ ಕಾರ್ಯಕ್ರಮವಾಗಿದ್ದು ಈ ಹೋರಾಟಕ್ಕೆ ರೈತರ, ಕೃಷಿಕಾರ್ಮಿಕರ, ವಿದ್ಯಾರ್ಥಿ, ಯುವಜನರು, ಮಹಿಳೆಯರು ಮೊದಲಾದ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಸಂಘಟನೆಗಳ ಸಕ್ರಿಯ ಬೆಂಬಲ ಮತ್ತು ಪಾಲ್ಗೊಳ್ಳುವಿಕೆಯೊಂದಿಗೆ ಮುಂದುವರೆಯಲಿದೆ. ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (JCTU) ಕಾರ್ಮಿಕ ವರ್ಗಕ್ಕೆ ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಕಾರ್ಮಿಕವಿರೋಧಿ, ರೈತವಿರೋಧಿ ನೀತಿಗಳ ವಿರುದ್ಧ ಹಾಗೂ ಈ ಕೆಳಕಂಡ ಬೇಡಿಕೆಗಳನ್ನು ಬೆಂಬಲಿಸಿ ರಾಷ್ಟ್ರೀಯ ಮುಷ್ಕರಕ್ಕೂ ಸಿದ್ಧರಿರಬೇಕೆಂದು ಕರೆ ನೀಡುತ್ತದೆ.

## ಕಾರ್ಮಿಕರ ಬೇಡಿಕೆಗಳು

1. ಕಾರ್ಖಾನೆಗಳ ಕಾಯಿದೆ, ಕೈಗಾರಿಕಾ ವಿವಾದ ಕಾಯಿದೆ, ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) ಕಾಯಿದೆಗಳಿಗೆ, ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗದಿತ ಅವಧಿ ಕೆಲಸ ಅಳವಡಿಸಲು ತರಲಾಗಿರುವ ಪ್ರಗತಿವಿರೋಧಿ ತಿದ್ದುಪಡಿಗಳು ಹಾಗೂ ವ್ಯತ್ಯಸ್ಥ ತುಟ್ಟಿಭತ್ಯೆ (Variable Dearness Allowance) ಮುಂದೂಡುವಿಕೆಯ ಆದೇಶಗಳನ್ನು ಕೂಡಲೇ ಹಿಂಪಡೆಯಬೇಕು.
2. ಭೂಸಂಬಂಧಿ ಕಾನೂನುಗಳು, ಎ.ಪಿ.ಎಂ.ಸಿ. ಕಾಯಿದೆ ಮತ್ತು ಅಗತ್ಯ ಸಾಮಗ್ರಿ ಕಾಯಿದೆಗಳಿಗೆ ತಿದ್ದುಪಡಿ ತರಲು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ತಿಪ್ಪೆಗೆಸೆಯಿರಿ.
3. ಮುಂದಿನ ಆರು ತಿಂಗಳ ಅವಧಿಗೆ ಆದಾಯ ತೆರಿಗೆ ಪಾವತಿಸದ ಕುಟುಂಬಗಳಿಗೆ ಪ್ರತಿ ತಿಂಗಳೂ
ರೂ. 7,500/– ಪಾವತಿಸುವ ಮೂಲಕ ಸಾರ್ವತ್ರಿಕ ಅಗತ್ಯ ಮೂಲ ಆದಾಯ (Universal Basic Income) ಯೋಜನೆಯನ್ನು ಜಾರಿಗೊಳಿಸುವ ಮೂಲಕ ದುಡಿಯುವ ಜನರ ನೈಜ ವರಮಾನವನ್ನು ಹಾಗೂ ಅನುಭೋಗ ವೆಚ್ಚವನ್ನು ಹೆಚ್ಚಿಸಿ ದೇಶದ ಅರ್ಥವ್ಯವಸ್ಥೆಗೆ ಪುನಶ್ಚೇತನ ಒದಗಿಸಿ.
4. ಪ್ರಸ್ತುತ ಇರುವ ಕಾರ್ಮಿಕ ಕಾನೂನುಗಳು ಅನುಷ್ಠಾನಕ್ಕೆ ಅರ್ಹವಲ್ಲ ಎಂದು ಕಾರ್ಮಿಕ ಇಲಾಖೆ ಭಾವಿಸಿರುವಂತಿದೆ. ಮಾಲಿಕರ ವಿರುದ್ಧ ಕೈಗಾರಿಕಾ ವಿವಾದಗಳನ್ನು, ದೂರುಗಳನ್ನು ಅಂಗೀಕರಿಸುವಲ್ಲಿ ವಿಳಂಬ, ಸರಿಯಾದ ತನಿಖೆಯಿಲ್ಲದೆ ಕಾರ್ಮಿಕರ ಸಮಸ್ಯೆಗಳನ್ನು ಆಲಿಸದೆ, ಲೇ–ಆಫ್, ರಿಟ್ರೆಂಚ್ಮೆಂಟ್, ಮುಚ್ಚುವಿಕೆಗಳಿಗೆ ಶೀಘ್ರ ಅನುಮತಿಯ ಪ್ರೋತ್ಸಾಹ ಇತ್ಯಾದಿಗಳ ಮೂಲಕ ಕಾರ್ಮಿಕ ಇಲಾಖೆ ಕಾನೂನು ಜಾರಿಯಲ್ಲಿ ನಿರ್ಲಕ್ಷ್ಯ ಧೋರಣೆ ತಾಳಿರುವುದನ್ನು ನಾವು ಖಂಡಿಸುತ್ತೇವೆ.
5. ಕೈಗಾರಿಕಾ ಸಂಬಂಧದ ಅಡಿಪಾಯವೆಂದು ಪರಿಗಣಿಸಲಾದ ತ್ರಿಪಕ್ಷೀಯ ಸಭೆಗಳನ್ನು ಸರ್ಕಾರವು ದುರುದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸುತ್ತಿದ್ದು ಕಾರ್ಮಿಕ ಸಂಘಟನೆಗಳನ್ನು ಕಾರ್ಮಿಕವರ್ಗಕ್ಕೆ ಮಾರಕವಾದ ಕಾನೂನುಗಳ ಬದಲಾವಣೆಯ ನಿರ್ಧಾರ ಪ್ರಕ್ರಿಯೆಯಿಂದ ಹೊರಗಿಟ್ಟಿರುವ ರೀತಿಯನ್ನು ಒಪ್ಪಲಾಗದು. ಕಾರ್ಮಿಕವರ್ಗಕ್ಕೆ ಸಂಬಂಧಪಟ್ಟ ನೀತಿ ನಿರೂಪಣೆಯ ಎಲ್ಲಾ ಹಂತಗಳಲ್ಲಿ ಕಾರ್ಮಿಕವರ್ಗದ ಅಭಿಪ್ರಾಯ ಅನಿಸಿಕೆಗಳನ್ನು ಪಡೆಯುವ ವಿಧಾನವನ್ನು ಖಾತರಿಪಡಿಸುವಂತೆ ಒತ್ತಾಯಿಸುತ್ತೇವೆ.
6. ಅಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ ನಷ್ಟ ಮತ್ತು ವರಮಾನ ಕುಸಿತದಿಂದ ಕಾರ್ಮಿಕರು ಕಂಗಾಲಾಗಿದ್ದಾರೆ. ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಿ, ಆರ್ಥಿಕ ದೃಢತೆಯನ್ನು ಖಾತರಿಪಡಿಸಿ, ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಾರ್ಮಿಕರ ಕಲ್ಯಾಣ ಯೋಜನೆಗಳನ್ನು ಪುನಃಶ್ಚೇತನಗೊಳಿಸಿ ಜಾರಿಗೊಳಿಸಲು ಇದು ಸೂಕ್ತ ಸಮಯವಾಗಿದೆ. ಸರ್ಕಾರವು ಮಾರ್ಚ್ 25ರ ಮಧ್ಯರಾತ್ರಿ ಹಠಾತ್ ಲಾಕ್‌ಡೌನ್ ಘೋಷಣೆಯಿಂದ ಮೃತಪಟ್ಟ ವಲಸೆ ಕಾರ್ಮಿಕರ ಕುಟುಂಬದವರಿಗೆ ಸಮರ್ಪಕ ಪರಿಹಾರ ನೀಡಬೇಕು. ಸರ್ಕಾರವು ಸಾಮಾಜಿಕ ಭದ್ರತೆ ಯೋಜನೆಗಳು ದೇಶಾದ್ಯಂತ ಸುಲಭ ವರ್ಗಾವಣೆಯಾಗುವ (portable) ರೀತಿಯಲ್ಲಿ ಕೂಡಲೆ ಕ್ರಮ ವಹಿಸಬೇಕು.
7. ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ 2008 ರ ಅಡಿಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಪ್ರತಿ ವರ್ಷ 10,000 ಕೋಟಿ ರೂಪಾಯಿಗಳ ವರ್ತುಲ ನಿಧಿಯನ್ನು ಸ್ಥಾಪಿಸಬೇಕು.
8. ಕೇಂದ್ರ ಸರ್ಕಾರವು ರಕ್ಷಣಾ ವಲಯ, ರಕ್ಷಣಾ ಉಪಕರಣ ಕಾರ್ಖಾನೆಗಳು, ಸಾರಿಗೆ, ರೈಲ್ವೆ, ಜೀವ ವಿಮಾ ನಿಗಮ, ಸಾಮಾನ್ಯ ವಿಮಾ ನಿಗಮ, ಬ್ಯಾಂಕುಗಳು, ಬಂದರು, ವಿಮಾನ ನಿಲ್ದಾಣಗಳು ಮತ್ತಿತರ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸುವುದನ್ನು ಕೂಡಲೇ ನಿಲ್ಲಿಸಬೇಕೆಂದು ನಾವು ಒತ್ತಾಯಿಸುತ್ತೇವೆ.
9. ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಆರೋಗ್ಯ, ಶಿಕ್ಷಣ ಮತ್ತು ಕೃಷಿಕ್ಷೇತ್ರಗಳಲ್ಲಿ ಸರ್ಕಾರದ ಹೂಡಿಕೆಯನ್ನು ಹೆಚ್ಚಿಸಿ ವಿಸ್ತರಿಸಬೇಕು. ಆನ್‌ಲೈನ್ ಶಿಕ್ಷಣ ಮತ್ತು ಲಾಕ್‌ಡೌನ್ ಅವಧಿಯಲ್ಲಿ ಪರೀಕ್ಷೆಗಳನ್ನು ನಿಷೇಧಿಸಬೇಕು. ಅಗತ್ಯ ಸಾಮಗ್ರಿ ಕಾಯಿದೆಯ ತಿದ್ದುಪಡಿಯೂ ಸೇರಿದಂತೆ, ಕೃಷಿವಯಲಕ್ಕೆ ಸಂಬಂಧಿಸಿದ ಮೂರು ರಾಜ್ಯಸರ್ಕಾರದ ಸುಗ್ರೀವಾಜ್ಞೆಗಳನ್ನು ಹಿಂಪಡೆಯಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸದ ದಿನಗಳನ್ನು ವರ್ಷದಲ್ಲಿ 200ಕ್ಕೆ ಹೆಚ್ಚಿಸಿ ದಿನಗೂಲಿಯ ದರವನ್ನು ? 500/–ಕ್ಕೆ ಏರಿಸಬೇಕು. ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಎಲ್ಲರಿಗೂ ವ್ಯಾಪಿಸಬೇಕೆಂದು ಒತ್ತಾಯಿಸುತ್ತೇವೆ.
10. ನೂತನ ಶಿಕ್ಷಣ ನೀತಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸಾರ್ವತ್ರಿಕ ಮೂಲವರಮಾನ ಯೋಜನೆ, ನಿರುದ್ಯೋಗ ಭತ್ಯೆ, ನಗರಪ್ರದೇಶ ಉದ್ಯೋಗ ಖಾತ್ರಿಯೋಜನೆ ಮುಂತಾದ ವಿಷಯಗಳನ್ನು ಚರ್ಚಿಸಲು ಪಾರ್ಲಿಮೆಂಟ್ / ರಾಜ್ಯ ವಿಧಾನಮಂಡಲಗಳ ವಿಶೇಷ ಅಧಿವೇಶನ ಕರೆಯಬೇಕೆಂದು ಒತ್ತಾಯಿಸುತ್ತೇವೆ. ಚಳುವಳಿ ಕಾರ್ಯಕರ್ತರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿಯನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸುತ್ತೇವೆ.

## 'ಆತ್ಮನಿರ್ಭರ ಭಾರತ'ವೋ 'ರಿಲೈಯನ್ಸ್ ಇಂಡಿಯಾ'ವೋ......

ಪುಟ 8 ರಿಂದ

5ಜಿ ಮಾರಾಟಗಾರರ ಒಕ್ಕೂಟ ರಚಿಸಿ, ಹ್ವಾವೆ ಮತ್ತು ಉಳಿದ ಚೈನಾ ಕಂಪನಿಗಳೊಡನೆ ಜಾಗತಿಕ ಮಟ್ಟದಲ್ಲಿ ಸ್ಪರ್ಧೆಗೆ ಇಳಿಯಬಯಸುತ್ತದೆ. ಇದನ್ನು ಸಾಧಿಸಲು ರಿಲೈಯನ್ಸ್ ಇಡೀ ವಿಶ್ವಕ್ಕೆ ನೀಡಿರುವ ಸಂದೇಶ "ನಮ್ಮ ಜತೆ ಸೇರಿ, ಆದರೆ ನಮ್ಮ ಬಾವುಟದಡಿಯಲ್ಲಿ. ನಾವು ನಿಮ್ಮನ್ನು ವಿಜಯಿಗಳನ್ನಾಗಿ ಮಾಡುತ್ತೇವೆ." ಮತ್ತೆ ತಂತ್ರಜ್ಞಾನದ ಗಾತ್ರವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದರ ಮೂಲಕ, ರಿಲೈಯನ್ಸ್ ಎಂದಿನಂತೆ ಆಟವಾಡುತ್ತದೆ.

ರಿಲೈಯನ್ಸ್ ಈ ಆಟದಲ್ಲಿ ಗೆಲ್ಲಲು ಸಾಧ್ಯವೇ? ಭವಿಷ್ಯ ನುಡಿಯುವುದು ಮೂರ್ಖತನ. ಆದರೆ ಇದು ರಿಲೈಯನ್ಸ್ ಯೋಚಿಸುತ್ತಿರುವುದಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ. ಆದರೆ ಅವರು ಸೋತರೂ ಸೋಲಿನಲ್ಲೂ ಹಣ ಗಳಿಸುತ್ತಾರೆ. ರಿಲೈಯನ್ಸ್ ಹತ್ತಿರ ವಿಶ್ವದ ಎರಡನೇಯ ದೊಡ್ಡ ಮಾರುಕಟ್ಟೆ ಸೆರೆಯಾಳಾಗಿದೆ. ಇದು ಸತತವಾಗಿ ಸರ್ಕಾರಗಳು ಅಂಬಾನಿಗಳಿಗೆ ನೀಡಿರುವ ಉಡುಗೊರೆ. 'ದೇಶೀಯ 5ಜಿ ತಂತ್ರಜ್ಞಾನ'ವನ್ನು ನಿರ್ಮಿಸದಿದ್ದರೂ ಉಡುಗೊರೆಗಳನ್ನು ಪಡೆಯುತ್ತಲೇ ಇರುತ್ತದೆ.

ಶತಮಾನೋತ್ಸವ ಲೇಖನಮಾಲೆ-38

100

# ನಾಲ್ಕನೇ ಮಹಾಧಿವೇಶನ–ಆಂತರಿಕ ಹೋರಾಟ ಪ್ರಾರಂಭ

**ನೆಹರೂ ಸರ್ಕಾರವು ಅನುಸರಿಸುತ್ತಿದ್ದ ನೀತಿಗಳ ವಿಶ್ಲೇಷಣೆಯ ಪ್ರಶ್ನೆಯ ಕುರಿತು ಗಂಭೀರ ಚರ್ಚೆಗಳು ಪಕ್ಷದ ಒಳಗಡೆ ಪ್ರಾರಂಭವಾದವು. ಈ ಪ್ರಕ್ರಿಯೆಯಲ್ಲಿ ಎದ್ದು ಬಂದಿದ್ದ ವರ್ಗ ಸಹಯೋಗದ ನಿಲುವನ್ನು ಕೇಂದ್ರ ಸಮಿತಿಯು ತಿರಸ್ಕರಿಸಿದ್ದಾಗ್ಯೂ, ಅದು ಮುಂದುವರೆಯಿತು. ಮಾರ್ಚ್ 1955ರ ಚುನಾವಣೆಯಲ್ಲಿ ಆಂಧ್ರದಲ್ಲಿ ಪಕ್ಷವು ಸೋಲನ್ನು ಅನುಭವಿಸಿದ ನಂತರ ಈ ಭಿನ್ನಾಭಿಪ್ರಾಯಗಳು ಇನ್ನಷ್ಟು ಗಟ್ಟಿಗೊಂಡವು. ಅಂತರ್ರಾಷ್ಟ್ರೀಯವಾಗಿ, ಕಮ್ಯುನಿಸ್ಟ್ ಚಳುವಳಿಯಲ್ಲಿ ಆಗುತ್ತಿದ್ದ ಬದಲಾವಣೆಗಳೂ ಪರಿಷ್ಕರಣವಾದೀ ಶಕ್ತಿಗಳನ್ನು ಬಲಪಡಿಸಿದವು. ಈ ಹಿನ್ನೆಲೆಯಲ್ಲಿ ಪಕ್ಷದ ನಾಲ್ಕನೇ ಮಹಾಧಿವೇಶನವು ಕೇರಳದ ಪಾಲ್ಘಾಟ್‌ನಲ್ಲಿ 1956ರ ಏಪ್ರಿಲ್ 19ರಿಂದ 29ರವರೆಗೆ ನಡೆಯಿತು. ಅದು ಒಂದು ರಾಜಕೀಯ ನಿರ್ಣಯವನ್ನು ಅಂಗೀಕರಿಸಿದ್ದಾಗ್ಯೂ, ಕಾರ್ಯಕ್ರಮ ಹಾಗೂ ಸೈದ್ಧಾಂತಿಕ ವಿಷಯಗಳ ಮೇಲೆ ಪಕ್ಷದೊಳಗಿನ ದಶಕಗಳ ಕಾಲದ ಹೋರಾಟಕ್ಕೆ ಈ ಮಹಾಧಿವೇಶನವು ಪೂರ್ವಸೂಚಕವಾಯಿತು.**

**ಕನ್ನಡಕ್ಕೆ: ಟಿ.ಸುರೇಂದ್ರ ರಾವ್**

ಕಮ್ಯುನಿಸ್ಟ್ ಪಕ್ಷವು ಸದಾ ಎತ್ತಿದ ಬಹು ಮುಖ್ಯ ಬೇಡಿಕೆಗಳಲ್ಲಿ ಭಾಷಾಧಾರಿತ ರಾಜ್ಯಗಳನ್ನು ರಚಿಸಬೇಕೆಂಬ ಬೇಡಿಕೆಯು ಒಂದು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದ ಹಲವಾರು ರೈತ ಹೋರಾಟಗಳ ಪ್ರಮುಖ ಬೇಡಿಕೆಗಳಲ್ಲಿ ಇದೂ ಕೂಡ ಒಂದಾಗಿತ್ತು. ಸ್ವಾತಂತ್ರ್ಯದ ನಂತರ, ಅದು ದೇಶವನ್ನು ಒಡೆಯಲು ಕಾರಣವಾಗುತ್ತದೆ ಎಂಬ ಕಾರಣ ನೀಡಿ ಕಾಂಗ್ರೆಸ್ ಸರ್ಕಾರವು ಈ ಬೇಡಿಕೆಯನ್ನು ಒಪ್ಪಲು ನಿರಾಕರಿಸಿತು. ಆ ವಾದವನ್ನು ಅಲ್ಲಗಳೆದ ಕಮ್ಯುನಿಸ್ಟ್ ಪಕ್ಷ ಜನರ ನಡುವೆ ವ್ಯಾಪಕವಾಗಿ ಪ್ರಚಾರಮಾಡಿತು ಮತ್ತು ಹಲವಾರು ಹೋರಾಟಗಳನ್ನು ನಡೆಸಿತು ಕೂಡ.

ದೇಶದ ಆರ್ಥಿಕ ಹಾಗೂ ರಾಜಕೀಯ ಬದುಕನ್ನು ಪ್ರಜಾಸತ್ತಾತ್ಮಕವಾಗಿ ಪುನರ್ ನಿರ್ಮಾಣಮಾಡುವ ಮತ್ತು ಅದನ್ನು ಪ್ರಗತಿ ಹಾಗೂ ಅಭಿವೃದ್ಧಿಯ ಹಾದಿಯಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ಜನಸಮುದಾಯವು ಪೂರ್ಣವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸುವ ಸಲುವಾಗಿ ಭಾಷಾವಾರು ರಾಜ್ಯಗಳ ರಚನೆಯು ಒಂದು ಅಗತ್ಯ ಅಂಶ ಎಂದು ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಟ್ಟಿತು. ಪ್ರಜಾಪ್ರಭುತ್ವ ಹಾಗೂ ಎಲ್ಲಾ ಜನರ ಸಮಾನತೆಯ ಆಧಾರದಲ್ಲಿ ಭಾರತದ ಐಕ್ಯತೆಯನ್ನು ಕಟ್ಟುವಲ್ಲಿ ಒಂದು ದೃಢವಾದ ಹಾಗೂ ಸುಭದ್ರವಾದ ಬುನಾದಿಯನ್ನು ಹಾಕಲು ಕೂಡ ಅದು ಅವಶ್ಯವಾಗಿದೆ. ಜನಾಂದೋಲನದ ಪರಿಣಾಮವಾಗಿ 1953ರಲ್ಲಿ ಆಂಧ್ರ ರಾಜ್ಯ ರಚನೆಯಾಗಿದ್ದನ್ನು ಪಕ್ಷವು ಸ್ವಾಗತಿಸಿತು.

ಏಪ್ರಿಲ್ 1954ರಲ್ಲಿ ನಡೆದ ಪಕ್ಷದ ಕೇಂದ್ರ ಸಮಿತಿ ಸಭೆಯಲ್ಲಿ, ರಾಜ್ಯಗಳ ಪುನರ್‌ಸಂಘಟನೆಯ ಕುರಿತು ಕಮ್ಯುನಿಸ್ಟ್ ಪಕ್ಷದ ನಿಲುವನ್ನು ವಿವರಿಸಿ ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು. ರಾಜ್ಯಗಳ ಪುನರ್‌ಸಂಘಟನಾ ಆಯೋಗದ ರಚನೆಯನ್ನು ಅದು ಸ್ವಾಗತಿಸಿತು. ಭಾಷೆ, ಸಂಸ್ಕೃತಿಯ ಕಲ್ಪನೆಯನ್ನು ಬದಿಗೊತ್ತಿ ಅದರ ಬದಲು ಆರ್ಥಿಕ ಕಾರ್ಯಸಾಧ್ಯತೆ ಮತ್ತು ಆಡಳಿತಾತ್ಮಕ ಅನುಕೂಲಗಳಿಗೆ ಒತ್ತು ನೀಡುವ ಕಾರ್ಯ ವ್ಯಾಪ್ತಿ(ಟರ್ಮ್ಸ್ ಆಫ್ ರೆಫರೆನ್ಸ್)ಯನ್ನು ಆ ಆಯೋಗಕ್ಕೆ ನಿಗದಿಪಡಿಸಿದ್ದನ್ನು ಪಕ್ಷ ಟೀಕೆಮಾಡಿತು. ಭಾಷಾವಾರು ರಾಜ್ಯಗಳ ರಚನೆಯು ತಡವಾದರೆ, ಅದು ಜನಸಮುದಾಯದ ಹಲವಾರು ವಿಭಾಗಗಳ ನಡುವಿನ ಸೌಹಾರ್ದ ಸಂಬಂಧಗಳಿಗೆ ಹಾನಿಕರ ಆಗಬಹುದಾದ್ದರಿಂದ ಅದನ್ನು ವಿಳಂಬ ಮಾಡಬಾರದೆಂದು ಸರ್ಕಾರವನ್ನು ಒತ್ತಾಯಿಸಿತು. ಭಾಷೆಗಳ ಆಧಾರದಲ್ಲಿ 20 ರಾಜ್ಯಗಳ ರಚನೆ ಮಾಡಬಹುದೆಂಬ ನಿರ್ದಿಷ್ಟ ಸಲಹೆಯನ್ನು ಪಕ್ಷವು ನೀಡಿತು ಮತ್ತು ಸೆಪ್ಟೆಂಬರ್ 1954ರ ಹೊತ್ತಿಗೆ ಮಧ್ಯಂತರ ವರದಿಯ ಸಲ್ಲಿಕೆಯಾಗಬೇಕೆಂದು ಒತ್ತಾಯಿಸಿತು.

'ರಾಜಪ್ರಮುಖ' ಎಂಬ ಹುದ್ದೆಯನ್ನು, ಮಾಜಿ ರಾಜರುಗಳಿಗೆ ರಾಜಧನ ನೀಡುವುದನ್ನು ಮತ್ತು ಅವರಿಗೆ ನೀಡುವ ಎಲ್ಲಾ ವಿಶೇಷ ಸವಲತ್ತುಗಳನ್ನು ರದ್ದುಮಾಡಬೇಕೆಂದು ಕೂಡ ಪಕ್ಷ ಒತ್ತಾಯ ಮಾಡಿತು. ಹಿಂದಿನ ರಾಜರುಗಳ ಎಲ್ಲಾ ವೈಯಕ್ತಿಕ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಅದನ್ನು ದೇಶದ ಮರುನಿರ್ಮಾಣಕ್ಕೆ ಹಾಗೂ ಜನರ ಅನುಕೂಲಕ್ಕೆ ಬಳಸಬೇಕೆಂದು ಒತ್ತಾಯಿಸಿತು. ಭಾಷಾಧಾರಿತವಾಗಿ ರಚಿಸಲ್ಪಟ್ಟ ರಾಜ್ಯಗಳಲ್ಲಿ ಶಿಕ್ಷಣವು ಮಾತೃಭಾಷೆಯಲ್ಲಿಯೇ ಇರಬೇಕೆಂದು ಕೂಡ ಒತ್ತಾಯಿಸಿತು.

ಭಾಷಾವಾರು ರಾಜ್ಯಗಳಿಗೆ ಆದಿವಾಸಿ ಪ್ರದೇಶಗಳನ್ನು ಸೇರಿಸುವಾಗ ಅವರ ಸಾಂಸ್ಕೃತಿಕ ಹಾಗೂ ಭಾಷಾ ನಂಟುಗಳನ್ನು ಪರಿಗಣಿಸಬೇಕೆಂದು ಕೂಡ ಪಕ್ಷ ಒತ್ತಾಯ ಮಾಡಿತು. ಆ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆಯನ್ನು ನೀಡಬೇಕೆಂದು ಒತ್ತಾಯಿಸಲಾಯಿತು.

ಗಡಿಗಳ ಸಣ್ಣಪುಟ್ಟ ವಿವರಗಳಿಗೆ ತಮ್ಮ ಶಕ್ತಿಸಾಮರ್ಥ್ಯಗಳನ್ನು ವ್ಯಯಮಾಡದೇ ಒಂದು ಹಳ್ಳಿಯನ್ನು ಒಂದು ನಿರ್ಣಾಯಕ ಘಟಕವಾಗಿ ಪರಿಗಣಿಸಿ ರಾಜ್ಯಗಳ ರಚನೆಗಾಗಿ ಹೋರಾಟ ಮಾಡಬೇಕೆಂದು ಜನರಲ್ಲಿ ಪಕ್ಷವು ಮನವಿ ಮಾಡಿತು. ಈ ಎಲ್ಲಾ ಹಕ್ಕೊತ್ತಾಯಗಳ ಆಧಾರದಲ್ಲಿ ಒಂದು ಸವಿಸ್ತಾರವಾದ ಮನವಿಯನ್ನು ಕಮ್ಯುನಿಸ್ಟ್ ಪಕ್ಷವು ಆಯೋಗಕ್ಕೆ ಸಲ್ಲಿಸಿತು.

ಕೇರಳ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಮತ್ತು ತಮಿಳುನಾಡುಗಳ ರಚನೆಯನ್ನು ಪಕ್ಷವು ಸ್ವಾಗತಿಸಿತು. ಆದರೆ ಬೊಂಬಾಯಿಯನ್ನು ಮಹಾರಾಷ್ಟ್ರದಿಂದ ಬೇರ್ಪಡಿಸಿ ಕೇಂದ್ರಾಡಳಿತ ಪ್ರದೇಶವಾಗಿ ಮಾಡುವ ಆಯೋಗದ ಶಿಫಾರಸನ್ನು ಮತ್ತು ಬಿಹಾರ ಹಾಗೂ ಬಂಗಾಳವನ್ನು ವಿಲೀನಗೊಳಿಸುವ ಶಿಫಾರಸನ್ನೂ ಕೂಡ ಪಕ್ಷವು ಟೀಕೆಮಾಡಿತು. ಈ ಹಕ್ಕೊತ್ತಾಯಗಳ ಮೇಲೆ ಪಕ್ಷವು ಹಲವಾರು ಹೋರಾಟಗಳನ್ನು ನಡೆಸಿತು, ಹಲವಾರು ಕಾರ್ಯಕರ್ತರು ಬಂಧಿಸಲ್ಪಟ್ಟರು ಮತ್ತು ಪೋಲಿಸರಿಂದ ಹೊಡೆತ ತಿಂದರು. ಈ ಪ್ರತಿಭಟನೆಗಳಲ್ಲಿ ಪಕ್ಷದ ಕೇಂದ್ರ ಸಮಿತಿಯ ಆರು ಸದಸ್ಯರು ಬಂಧಿಸಲ್ಪಟ್ಟರು. ಕೆಲವು ಕಡೆಗಳಲ್ಲಿ, ಪೋಲೀಸರು ಗೋಲಿಬಾರು ನಡೆಸಿ ಬಹಳ ಜನರನ್ನು ಕೊಂದುಹಾಕಿದರು.

ಈ ಅವಧಿಯಲ್ಲಿ, ಭಾರತ ಸರ್ಕಾರದ ವಿದೇಶಾಂಗ ನೀತಿ, ಪಂಚವಾರ್ಷಿಕ ಯೋಜನೆಗಳು ಮತ್ತು 'ಸಮಾಜವಾದಿ ಮಾದರಿಯ ಸಮಾಜವನ್ನು' ಸ್ಥಾಪನೆ ಮಾಡುತ್ತೇವೆಂಬ ಕಾಂಗ್ರೆಸ್ ಪಕ್ಷದ ವಂಚಕ ಘೋಷಣೆ ಮುಂತಾದ ನೆಹರೂ ಸರ್ಕಾರವು ಅನುಸರಿಸುತ್ತಿದ್ದ ನೀತಿಗಳ ವಿಶ್ಲೇಷಣೆಯ ಪ್ರಶ್ನೆಯ ಕುರಿತು ಗಂಭೀರ ಚರ್ಚೆಗಳು ಪಕ್ಷದ ಒಳಗಡೆ ಪ್ರಾರಂಭವಾದವು. ಪಕ್ಷದ ನಾಯಕತ್ವದಲ್ಲಿನ ಒಂದು ವಿಭಾಗವು ಈ ಬೆಳವಣಿಗೆಗಳಿಂದ ಪರವಶರಾಗಿದ್ದರು ಮತ್ತು ರಾಷ್ಟ್ರೀಯ ಬಂಡವಾಳಶಾಹಿಯು ಎರಡು ವಿಭಾಗಗಳಾಗಿ ಒಡೆದುಹೋಗಿವೆ–ಏಕಸ್ವಾಮ್ಯ ವಿಭಾಗವು ಸಾಮ್ರಾಜ್ಯಶಾಹಿಗಳು ಮತ್ತು ಪಾಳೇಗಾರಿಗಳೊಂದಿಗೆ ಸಂಪೂರ್ಣ ಶಾಮೀಲಾಗುವುದರ ಪರವಾಗಿದ್ದಾರೆ, ಮತ್ತೊಂದೆಡೆ ನೆಹರೂ ಮತ್ತು ಇತರ ಎಡ ಕಾಂಗ್ರೆಸ್ಸಿಗರು ಎಂದು ಕರೆದುಕೊಳ್ಳುವವರನ್ನು ಪ್ರತಿನಿಧಿಸುವ ಮತ್ತೊಂದು ವಿಭಾಗವು ಸಾಮ್ರಾಜ್ಯಶಾಹಿ ಹಾಗೂ ಪಾಳೇಗಾರಿ ಶಕ್ತಿಗಳಿಗೆ ವಿರುದ್ಧವಾಗಿದ್ದಾರೆ ಎಂದು ಪ್ರತಿಪಾದನೆ ಮಾಡಲು ಶುರುಮಾಡಿದರು. ಈ ವರ್ಗ ಸಹಯೋಗದ ನಿಲುವನ್ನು ಕೇಂದ್ರ ಸಮಿತಿಯು ತಿರಸ್ಕರಿಸಿದ್ದಾಗ್ಯೂ, ಅದು ಮುಂದುವರೆಯಿತು.

ಮಾರ್ಚ್ 1955ರ ಚುನಾವಣೆಯಲ್ಲಿ ಆಂಧ್ರದಲ್ಲಿ ಪಕ್ಷವು ಸೋಲನ್ನು ಅನುಭವಿಸಿದ ನಂತರ ಈ ಭಿನ್ನಾಭಿಪ್ರಾಯಗಳು ಇನ್ನೂ ಎದ್ದು ಕಾಣುವಂತಾಯಿತು. ಆ ರಾಜ್ಯದಲ್ಲಿ ಪಕ್ಷವು ಬಹುಮತ ಪಡೆಯಲಿದೆ ಎಂಬ ನಿರೀಕ್ಷೆ ಇತ್ತು. ಭಾರಿ ಬಹಿರಂಗ ಸಭೆಗಳಲ್ಲಿ ಜನರಿಂದ ದೊರೆತ ಬೆಂಬಲ ಮತ್ತು ಪ್ರೋತ್ಸಾಹಗಳು ಹಾಗೂ ಆಳುವ ವರ್ಗಗಳು ಹರಿಬಿಟ್ಟ ಉಗ್ರದ್ವೇಷದ ಪ್ರಚಾರಗಳ ಹೊರತಾಗಿಯೂ ಮತ್ತು ಕಾಂಗ್ರೆಸ್ ಪಕ್ಷದ ಬೆದರಿಕೆ ಮತ್ತು ಅಸಹ್ಯಕರ ತಂತ್ರಗಳನ್ನು ಸೋಲಿಸಿ, ನಾವು ಆ ರಾಜ್ಯದಲ್ಲಿ ಬಹುಮತ ಗಳಿಸುತ್ತೇವೆಂಬ ಹುಸಿ ಭರವಸೆಯನ್ನು ಹುಟ್ಟಿಸಿದ್ದವು. ಕಮ್ಯುನಿಸ್ಟರನ್ನು ಸೋಲಿಸುವ ಸಲುವಾಗಿ ಆಳುವ ವರ್ಗಗಳು ಭಾರೀ ಹಣ ಮತ್ತಿತರ ಸಂಪನ್ಮೂಲಗಳನ್ನು ಬಳಸಿದವು. ಫಲಿತಾಂಶವು ಪಕ್ಷಕ್ಕೆ ಆಘಾತ ಉಂಟುಮಾಡಿತು. ಪಕ್ಷದ ಅನೇಕ ಅಭ್ಯರ್ಥಿಗಳು ಕೆಲವೇ ಓಟುಗಳ ಅಂತರದಲ್ಲಿ ಪರಾಭವಗೊಂಡಿದ್ದರು. ಪಕ್ಷವು 31% ಮತ ಗಳಿಸಿದರೂ, ಪಡೆದ ಸ್ಥಾನಗಳು ಕೇವಲ 7% ಮಾತ್ರ. ಸುಮಾರು 100 ಕ್ಷೇತ್ರಗಳಲ್ಲಿ, ಪಕ್ಷವು 47% ಮತಗಳನ್ನು ಗಳಿಸಿತು. ಮತ್ತೊಂದೆಡೆ, ಕಾಂಗ್ರೆಸ್ ಮತ್ತದರ ಮೈತ್ರಿಕೂಟವು 74% ಸ್ಥಾನಗಳನ್ನು ಪಡೆದು, 50% ಮತ ಗಳಿಸಿತು. ಈ ಚುನಾವಣೆಯ ಸರಿಯಾದ ಪರಾಮರ್ಶೆಯನ್ನು ಮಾಡಲಾಗಲಿಲ್ಲ, ಏಕೆಂದರೆ ಪಕ್ಷದ ಒಳಗಡೆ ಭಿನ್ನಾಭಿಪ್ರಾಯಗಳು ತೀವ್ರಗೊಂಡಿದ್ದವು.

ಈ ಹಿನ್ನೆಲೆಯಲ್ಲಿ ಪಕ್ಷದ ನಾಲ್ಕನೇ ಮಹಾಧಿವೇಶನವು ಕೇರಳದ ಪಾಲ್ಘಾಟ್(ಈಗಿನ ಪಾಲಕ್ಕಾಡ್)ನಲ್ಲಿ 1956ರ ಏಪ್ರಿಲ್ 19ರಿಂದ 29ರವರೆಗೆ ನಡೆಯಿತು. ನಾಲ್ಕನೇ ಮಹಾಧಿವೇಶನದ ಹೊತ್ತಿಗೆ, ಪಕ್ಷವು 75,000 ಸದಸ್ಯತ್ವ ಮತ್ತು 30,000 ಅಭ್ಯರ್ಥಿ ಸದಸ್ಯರನ್ನು ಹೊಂದಿತ್ತು.


ಪಕ್ಷದ ಮಹಾಧಿವೇಶನದ ಮೇಲೆ ಪ್ರಭಾವ ಬೀರಿದ ಬಹು ಮುಖ್ಯ ಬೆಳವಣಿಗೆಯೆಂದರೆ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ, ಬಹು ಮುಖ್ಯವಾಗಿ ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷ(ಸಿಪಿಎಸ್‌ಯು)ದಲ್ಲಿ ಆಗುತ್ತಿದ್ದ ಬದಲಾವಣೆಗಳು. 1956ರಲ್ಲಿ ಸಿಪಿಎಸ್‌ಯುನ 20ನೇ ಮಹಾಧಿವೇಶನವು ನಡೆಯಿತು ಮತ್ತು ಅದು ತನ್ನ ತಪ್ಪು ವಿಶ್ಲೇಷಣೆಗಳೊಂದಿಗೆ ಅಂಗೀಕರಿಸಿದ ನಿರ್ಣಯಗಳು ಮತ್ತೆ ಪರಿಷ್ಕರಣವಾದೀ ಶಕ್ತಿಗಳನ್ನು ಬಲಪಡಿಸಿತು.

ಪಾಲ್ಘಾಟ್ ಮಹಾಧಿವೇಶನಕ್ಕಾಗಿ ಸಿದ್ಧಪಡಿಸಿದ್ದ ಕೇಂದ್ರ ಸಮಿತಿಯ ಕರಡು ನಿರ್ಣಯವು ಅನೇಕ ಪರಿಷ್ಕರಣವಾದಿ ಸೂತ್ರಗಳನ್ನು ಹೊಂದಿತ್ತು ಮತ್ತು ಅದು ಪಕ್ಷದೊಳಗಿನ ವರ್ಗ ಸಹಯೋಗದ ಪ್ರವೃತ್ತಿಯನ್ನು ಉತ್ತೇಜಿಸಿತು. ಈ ಸೂತ್ರಗಳನ್ನು ಒಪ್ಪದ ಕೇಂದ್ರ ಸಮಿತಿಯ ಒಂದು ವಿಭಾಗವು ಮತ್ತೊಂದು ಪರ್ಯಾಯ ಕರಡನ್ನು ಮಹಾಧಿವೇಶನದ ಮುಂದೆ ಮಂಡಿಸಿತು. ಈ ಕರಡಿನಲ್ಲಿನ ಸೂತ್ರಗಳಲ್ಲಿ ಎಲ್ಲವೂ ತಪ್ಪುಗಳಿಂದ ಹೊರತಾಗಿರಲಿಲ್ಲ, ಏಕೆಂದರೆ 1951ರಲ್ಲಿ ಅಂಗೀಕರಿಸಿದ್ದ ಪಕ್ಷದ ಕಾರ್ಯಕ್ರಮದ ಆಧಾರದಲ್ಲಿ ಅವು ಇದ್ದವು, ಹಾಗಾಗಿ ಮಿತಿಗಳಿದ್ದವು. ಆದರೆ, ಈ ಕರಡು ಭಾರತೀಯ ಪ್ರಭುತ್ವದ ವರ್ಗ ಗುಣವನ್ನು ಸ್ಪಷ್ಟವಾಗಿ ವಿಶ್ಲೇಷಣೆ ಮಾಡಿತ್ತು ಮತ್ತು ವರ್ಗ ಸಹಯೋಗದ ಸೂತ್ರಗಳನ್ನು ತೀವ್ರವಾಗಿ ಟೀಕೆಮಾಡಿತ್ತು. ಈ ಎರಡು ದಸ್ತಾವೇಜುಗಳ ಬಗ್ಗೆ ತೀಕ್ಷ್ಣವಾದ ಚರ್ಚೆಗಳಾದವು ಮತ್ತು ತಮ್ಮ ನಿಲುವಿನ ಪರವಾಗಿ ಇಡೀ ಪಕ್ಷವನ್ನು ಕೊಂಡೊಯ್ಯಬೇಕೆಂಬ ವರ್ಗ ಸಹಯೋಗ ಬಯಸುವವರ ಪ್ರಯತ್ನ ವಿಫಲವಾಯಿತು. ಈ ಸಂವಾದ ಮತ್ತು ಚರ್ಚೆಗಳು ಕೆಲವು ಮೂಲಭೂತ ಸೈದ್ಧಾಂತಿಕ ನಿಲುವುಗಳನ್ನು ಹಾಗೇ ಉಳಿಸಿಕೊಳ್ಳಲು ಅವರನ್ನು ಬಲವಂತ ಮಾಡಿದವು; ಅದರ ಫಲವಾಗಿ, ಜನತಾ ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ವರ್ಗದ ನೇತೃತ್ವದಲ್ಲಿನ ಜನತಾ ಪ್ರಜಾಪ್ರಭುತ್ವ ರಂಗ ಎಂಬ ರಣತಂತ್ರದ ಧ್ಯೇಯೋದ್ದೇಶಗಳನ್ನು ಒಳಗೊಳ್ಳಲು ಸಾಧ್ಯವಾಯಿತು. ಪರ್ಯಾಯ ಕರಡು ಮಂಡಿಸಿದವರನ್ನು ಈ ತಿದ್ದುಪಡಿಗಳು ಹೆಚ್ಚೂ ಕಡಿಮೆ ಸಮಾಧಾನಗೊಳಿಸಿದ ಕಾರಣ ಅವರು ಅದನ್ನು ಹಿಂಪಡೆದರು.

ಪುನರೂಪಿಸಿದ ಹಾಗೂ ತಿದ್ದುಪಡಿ ಮಾಡಿದ ಕರಡು ವರ್ಗ-ಸಹಯೋಗದ ನಿಲುವಿನವರಿಗೆ ಹಿಡಿಸಲಿಲ್ಲ, ಅವರು ಕೇಂದ್ರ ಸಮಿತಿಯು ಮಂಡಿಸಿದ ಮೊದಲಿನ ಕರಡನ್ನೇ ಬೆಂಬಲಿಸಿದರು. ಸಮಾಜದ ಬದಲಾವಣೆಗೆ ಅನುಸಾರವಾಗಿ ಇಲ್ಲದೇ ಅದೇ ಹಳೆಯ ಜಾಡಿಗೇ, ಬದಲಾಗದ ಕಲ್ಪನೆಗಳು ಹಾಗೂ ತಂತ್ರಗಳಿಗೆ ಅಂಟಿಕೊಂಡು ಪಕ್ಷಕ್ಕೆ ಸರಿಪಡಿಸಲಾಗದ ಹಾನಿಯನ್ನು ಉಂಟುಮಾಡುತ್ತಿದ್ದಾರೆ ಎಂದು ಅವರು ಇತರರನ್ನು ದೂಷಿಸಿದರು. ಅವರು ತಮ್ಮದೇ ಆದ ಒಂದು ಪರ್ಯಾಯ ಕರಡನ್ನು ಪಕ್ಷದ ಮಹಾಧಿವೇಶನದಲ್ಲಿ ಮಂಡಿಸಿದರು, ಅದು ಸೋತುಹೋಯಿತು, ಆದರೆ ಅದಕ್ಕೆ ಮೂರನೇ ಒಂದು ಭಾಗದ ಪ್ರತಿನಿಧಿಗಳು ಮತಹಾಕಿದರು.

ಮಹಾಧಿವೇಶನದಲ್ಲಿ ಮಂಡಿಸಿದ ಸಂಘಟನಾ ವರದಿಯು ಶಿಸ್ತು ಸಡಿಲವಾಗುತ್ತಿರುವುದು ಮತ್ತು ತೀರ್ಮಾನಗಳನ್ನು ಜಾರಿ ಮಾಡದಿರುವ ಬಗ್ಗೆ ಟಿಪ್ಪಣಿ ಮಾಡಿತ್ತು. ಈ ಅವಧಿಯಲ್ಲಿ ಒಂದು ಕೇಂದ್ರ ಶಾಲೆಯನ್ನು ಸಂಘಟಿಸಲಾಗಿತ್ತಾದರೂ ಅದಕ್ಕೆ ಪಕ್ಷದಲ್ಲಿ ಒಂದು ಸಮಾನ ತಿಳುವಳಿಕೆಯನ್ನು ಉಂಟುಮಾಡಲು ಸಾಧ್ಯವಾಗಲಿಲ್ಲ. ಸಾಮೂಹಿಕ ಕಾರ್ಯನಿರ್ವಹಣೆಗೆ ಹೊಡೆತ ಬಿದ್ದಿತ್ತು ಮತ್ತು ಪಕ್ಷದ ಕೇಂದ್ರದಲ್ಲಿ

ಪುಟ 14 ನೋಡಿ



# ಜಿಡಿಪಿ ಇಳಿಯಲಿದೆ, ಹಣದುಬ್ಬರ ಏರಲಿದೆ ಮತ್ತು...... ಕೊವಿಡ್ ಸಂಖ್ಯೆ 20 ಲಕ್ಷ ದಾಟಿದೆ

ಎಂದು ಸ್ವತಃ ರಿಝರ್ವ್ ಬ್ಯಾಂಕ್ ಈಗ ಹೇಳಿದೆ. ಹಣದುಬ್ಬರ ದರ ಮಾರ್ಚ್‌ನಲ್ಲಿ 5.8ಶೇ. ಇದ್ದದ್ದು ಜೂನ್‌ನಲ್ಲಿ 6.1ಶೇ.ಕ್ಕೇರಿದೆ. ಇದು ಮುಂದಿನ ತಿಂಗಳುಗಳಲ್ಲಿ ಹೀಗೇ ಮುಂದುವರೆಯಲಿದೆಯಂತೆ.

ಜಿಡಿಪಿ ಬೆಳವಣಿಗೆ ದರ ಇಳಿಯುತ್ತದೆ ಎಂದೂ ರಿಝರ್ವ್ ಬ್ಯಾಂಕ್ ಗವರ್ನರ್ ಹೇಳಿದ್ದಾರೆ. 2020-21ಕ್ಕೆ ಅದು ಋಣಾತ್ಮಕ(ನೆಗೆಟಿವ್) ಇರುತ್ತದೆ, ಆದರೆ ಎಷ್ಟು ಎಂದೇನೂ ಅವರು ಹೇಳಲು ಹೋಗಿಲ್ಲ. ಆದರೆ ಒಂದು ರೇಟಿಂಗ್ ಸಮಸ್ಥೆಯ ಪ್ರಕಾರ 9.5ಶೇ.ದಷ್ಟು ಇಳಿಯಬಹುದು. ಕೆಲವು ಅರ್ಥಶಾಸ್ತ್ರಜ್ಞರು 20ಶೇ.ದಷ್ಟು ಇಳಿಯಬಹುದು ಎಂದು ಹೇಳಿರುವುದಾಗಿ ರಾಯ್ಟರ್ ವರದಿ ಮಾಡಿದೆ.

ಜೂನ್‌ನಲ್ಲಿ ಸತತ ನಾಲ್ಕನೇ ತಿಂಗಳು ಎಂಟು ಮೂಲರಚನೆ ಉದ್ದಿಮೆಗಳಲ್ಲಿ ಉತ್ಪಾದನೆ 15ಶೇ.ದಷ್ಟು ಇಳಿದಿದೆ. ಒಂದು ವರ್ಷದ ಹಿಂದೆ ಕಳೆದ ಜೂನ್‌ನಲ್ಲಿ 1.2ಶೇ.ದಷ್ಟಾದರೂ ಏರಿಕೆ ಇತ್ತು. ಮೇ ತಿಂಗಳಲ್ಲಿ ರಸಗೊಬ್ಬರ ಬಿಟ್ಟು ಉಳಿದ ವಲಯಗಳಲ್ಲಿ, ಅಂದರೆ ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಇವೆಲ್ಲವೂ ನಕಾರಾತ್ಮಕ ಬೆಳವಣಿಗೆಯನ್ನು ತೋರಿಸಿದ್ದವು.

ಎಪ್ರಿಲ್ ಜೂನ್ 2020ರಲ್ಲಿ, ಅಂದರೆ ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಈ ವಲಯಗಳ ಉತ್ಪಾದನೆಯಲ್ಲಿ 24.6ಶೇ. ಇಳಿಕೆಯಾಗಿದೆ ಎನ್ನಲಾಗಿದೆ.

ಈ ನಡುವೆ ಆಗಸ್ಟ್ 6ರಂದು ಕೊವಿಡ್ ಸೋಂಕಿತರ ಸಂಖ್ಯೆ 2ಮಿಲಿಯ ದಾಟಿದೆ. ಅದಕ್ಕೆ ಎರಡು ದಿನಗಳ ಮೊದಲು ದೈನಂದಿನ ಸೋಂಕಿತರ ಸಂಖ್ಯೆಯಲ್ಲಿ ಅತ್ಯುನ್ನತ ಸ್ಥಾನಗಳಲ್ಲಿದ್ದ ಅಮೆರಿಕಾ ಮತ್ತು ಬ್ರೆಝಿಲನ್ನೂ ಹಿಂದೆ ಹಾಕಿ ಮೊದಲ ಸ್ಥಾನಕ್ಕೇರಿತು.

ಇವೆರಡರ ಮಧ್ಯೆ ಆಗಸ್ಟ್ 5ರಂದು ಪ್ರಧಾನ ಮಂತ್ರಿಗಳು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣದ ಭೂಮಿ ಪೂಜೆ ನಡೆಸಿದ್ದಾರೆ. ಸುಪ್ರಿಂ ಕೋರ್ಟ್ ಈ ಕೆಲಸವನ್ನು ಟ್ರಸ್ಟ್ ನಡೆಸಬೇಕು ಎಂದು ಹೇಳಿದ್ದರೂ, ಮುಖ್ಯ ಅತಿಥಿಯಾಗಿ ಹೋಗಿದ್ದ ಪ್ರಧಾನ ಮಂತ್ರಿಗಳೇ ಎಲ್ಲ ವಿಧಿಗಳನ್ನು ಪೂರೈಸಿದ್ದಾರೆ ಎಂದು ವರದಿಯಾಗಿದೆ. ಇದರೊಂದಿಗೆ ಒಂದು ಸುವರ್ಣ ಅಧ್ಯಾಯ ಆರಂಭವಾಗಿದೆ ಎಂದು ಹೇಳಿರುವುದಾಗಿಯೂ ವರದಿಯಾಗಿದೆ. ಹಾಗೆ ಹೇಳುವ ಮೊದಲು ದೇಶದ ಪ್ರಸಕ್ತ ಪರಿಸ್ಥಿತಿಯನ್ನು ನೆನಪಿಸಿಕೊಂಡು ಪೂಜೆಯ ವೇಳೆಯಲ್ಲಿ ಈ ವ್ಯಂಗ್ಯಚಿತ್ರಕಾರರು ಚಿತ್ರಿಸಿರುವಂತೆ **'ದೇವರು ಈ ದೇಶವನ್ನು ಉಳಿಸಲಿ'** ಎಂದು ಕೇಳಿರಬಹುದೇ?

(ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್)




| | ಒಟ್ಟು ಸೋಂಕಿತರು | ಒಟ್ಟು ಸಾವುಗಳು |
|---|---|---|
| ಜುಲೈ 16 | 10,03,832 | 25602 |
| ಜುಲೈ 19 | 11,18,043 | 27497 |
| ಜುಲೈ 22 | 12,38,65 | 29,861 |
| ಜುಲೈ 24 | 13,36,861 | 31,358 |
| ಜುಲೈ 26 | 14,35,453 | 32,771 |
| ಜುಲೈ 28 | 15,31,669 | 34,193 |
| ಜುಲೈ 31 | 16,95,988 | 36,511 |
| ಆಗಸ್ಟ್ 2 | 18,0,695 | 38,135 |
| ಆಗಸ್ಟ್ 4 | 19,08,254 | 39,795 |
| ಆಗಸ್ಟ್ 6 | 20,27,074 | 41,585 |

ಹಿಂದಿನ ಸಂಚಿಕೆಗಳಲ್ಲಿ ನೋಡಿರುವಂತೆ ಕೊವಿಡ್ ಸೋಂಕಿತರ ಸಂಖ್ಯೆ ಸುಮಾರು ಆರು ತಿಂಗಳ ನಂತರ ಒಂದು ಮಿಲಿಯ (10ಲಕ್ಷ) ತಲುಪಿತು. ಈ ಹಂತ ತಲುಪುವಾಗ ದೈನಂದಿನ ಏರಿಕೆ ಸರಾಸರಿ 20,000 ದಷ್ಟಿತ್ತು. ಒಟ್ಟು ಸಾವುಗಳ ಸಂಖ್ಯೆ 25,619 ಇತ್ತು.

ಆದರೆ ಮುಂದಿನ 12 ದಿನಗಳಲ್ಲೇ ಸೋಂಕಿತರ ಸಂಖ್ಯೆ ಒಂದೂವರೆ ಮಿಲಿಯ ದಾಟಿತು, ಸಾವುಗಳ ಸಂಖ್ಯೆ 35 ಸಾವಿರದ ಹತ್ತಿರ ಬಂತು.

ನಂತರ 9 ದಿನಗಳಲ್ಲೇ ಅದು 2 ಮಿಲಿಯ(20ಲಕ್ಷ) ದಾಟಿದೆ. ಸಾವುಗಳ ಸಂಖ್ಯೆ 40,000 ದಾಟಿದೆ. ದೈನಂದಿನ ಏರಿಕೆಯ ಪ್ರಮಾಣ 60,000 ದಾಟಿದೆ.

# '9 ಆಗಸ್ಟ್ 1942 ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' 10 ಆಗಸ್ಟ್ 2020 : "ಕಾರ್ಪೊರೇಟ್ ಕಂಪನಿಗಳೇ ಬೇಸಾಯ ಬಿಟ್ಟು ತೊಲಗಿ"



ಪುಟ 9 ರಿಂದ

ಸತತವಾಗಿ ಹೋರಾಡಿವೆ. ಈ ಕುರಿತು ಖಾಸಗಿ ಮಸೂದೆಯನ್ನು ಕೂಡ ಮಂಡಿಸಿವೆ. ಆದರೆ ದಣಿಗಳ ಲಕ್ಷಾಂತರ ಕೋಟಿ ರೂಪಾಯಿ ಸಾಲವನ್ನು ಕ್ಷಣಾರ್ಧದಲ್ಲಿ ಮನ್ನಾ ಮಾಡಿದ ಕೇಂದ್ರ ಸರ್ಕಾರ ಬಡ ರೈತರ ಪುಡಿಗಾಸಿನ ಸಾಲವನ್ನು ಮನ್ನಾ ಮಾಡಿ, ಖಾಸಗಿ ಲೇವಾದೇವಿಗಾರರಿಂದ ರಕ್ಷಣೆ ನೀಡಿ ಬಡವರಿಗೆ ನೆಮ್ಮದಿ ನೀಡಲು ಮೋದಿ ಸರ್ಕಾರ ಮೀನಾ ಮೇಷ ಎಣಿಸುತ್ತಿದೆ.

ಕೋವಿಡ್ -19 ರ ಹಿನ್ನೆಲೆಯಲ್ಲಿ ಘೋಷಿಸಿದ ಅವೈಜ್ಞಾನಿಕ, ಯೋಜನಾ ರಹಿತ ಲಾಕ್‌ಡೌನ್ ಪರಿಣಾಮವಾಗಿ ರೈತರು ಹಿಂಗಾರು ಬೆಳೆಗಳನ್ನು ಮಾರಲಾಗದೆ ಅತೀವ ನಷ್ಟ ಅನುಭವಿಸಿದ್ದಾರೆ. ಅವರು ಬ್ಯಾಂಕುಗಳಿಂದ, ಖಾಸಗಿ ವ್ಯಕ್ತಿಗಳಿಂದ ಮಾಡಿರುವ ಸಾಲವನ್ನು ತೀರಿಸಲಾಗದೆ ಜೀವನ ನಡೆಸುವುದೇ ಕಷ್ಟವಾಗಿದೆ. ಹೀಗಿರುವಾಗ ಹಿಂಗಾರು ಬೆಳೆಗೆ ಮಾಡಿದ್ದ ಸಾಲ ಮನ್ನಾ ತಕ್ಷಣ ಮಾಡುವುದಲ್ಲದೇ, ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಹೊಸ ಸಾಲ ನೀಡಿ ಬೆಳೆ ಒಡ್ಡಲು ಸಾಧ್ಯವಾಗುವಂತೆ ಕ್ರಮ ಕೈಗೊಳ್ಳಬೇಕಾಗಿದೆ.

ವಿದ್ಯುತ್ ಮಸೂದೆ, ಡೀಸೆಲ್ ಬೆಲೆ ಹೆಚ್ಚಳ, ಬೆಂಬಲ ಬೆಲೆ ನಿರಾಕರಣೆ ಹೀಗೆ ರೈತರ ಮೇಲೆ ದಾಳಿಗಳ ಸರಪಳಿಯನ್ನೇ ಹೆಣೆಯಲಾಗುತ್ತಿದೆ. ಕರೋನಾ ರೋಗದ ಸಂದರ್ಭದಲ್ಲಿ ಒಂದು ಕಡೆ ಸೇರಲಾಗದ ಜನತೆಯ ಅಸಹಾಯಕತೆ ಮತ್ತು ಕ್ರೂರ ಕಾನೂನುಗಳನ್ನು ಬಳಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ಕಾನೂನುಗಳನ್ನು ಜಾರಿ ಮಾಡಿಕೊಂಡು, ರೈತರನ್ನು ರೈತಾಪಿ ಕೃಷಿಯನ್ನು ಅಳಿಸಿ ಹಾಕುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಏನೇ ಅಡೆ ತಡೆಗಳಿದ್ದರೂ ರೈತರನ್ನು, ರೈತ ಕೃಷಿಯನ್ನು ಉಳಿಸಿಕೊಳ್ಳಲು ಬೀದಿಗೆ ಬರಲೇ ಬೇಕಾಗಿದೆ. ಆದ್ದರಿಂದ ಆಗಸ್ಟ್ 9 ರ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ದಿನವನ್ನು "ಕಾರ್ಪೊರೇಟ್ ಕಂಪನಿಗಳೇ ಬೇಸಾಯ ಬಿಟ್ಟು ತೊಲಗಿ" ದಿನವನ್ನಾಗಿ ಆಚರಿಸಬೇಕು ಎಂದು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ತೀರ್ಮಾನಿಸಿದೆ. ಆ ದಿನ ದೇಶದ ಎಲ್ಲಾ ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ಸಾವಿರಾರು ರೈತರ ಪ್ರತಿಭಟನಾ ಪ್ರದರ್ಶನಗಳು ನಡೆಯಲಿವೆ..

## ಬೇಡಿಕೆಗಳು:

1. **ಸಾಲದಿಂದ ವಿಮೋಚನೆ:** ಈ ತಕ್ಷಣವೇ ಕರೋನಾ ಪಿಡುಗಿನ ಕಾರಣದಿಂದ ನೊಂದಿರುವ ಎಲ್ಲಾ ರೈತರ ಈ ವರ್ಷದ ಹಿಂಗಾರು(ರಾಬಿ)ಬೆಳೆ ಸಾಲವನ್ನು ಸರ್ಕಾರ ಮನ್ನಾ ಮಾಡಬೇಕು. ಮುಂಗಾರು ಬೆಳೆಗಳಿಗಾಗಿ (ಖಾರೀಫ್)ಕೂಡಲೇ ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ವಿತರಿಸಬೇಕು. ಸ್ವ ಸಹಾಯ ಗುಂಪುಗಳ ಸಾಲಗಳ ಬಡ್ಡಿ ಮನ್ನಾ ಮಾಡಿ, ಸಾಲ ವಸೂಲಾತಿ ಮಾಡದಂತೆ ಕ್ರಮ ವಹಿಸಬೇಕು. ಆ ನಂತರ ಸರ್ಕಾರವು ಪ್ರತಿಯೊಬ್ಬ ರೈತನನ್ನು ಸಾಲದಿಂದ ಸಂಪೂರ್ಣ ಮುಕ್ತಿಗೊಳಿಸಲು ಕಾನೂನು ಅಂಗೀಕರಿಸಬೇಕು.

2. **ಪೂರ್ಣ ಬೆಲೆ:** ತರಕಾರಿ, ಹಣ್ಣು, ಹಾಲು ಸೇರಿದಂತೆ ಪ್ರತಿ ಬೆಳೆಯ ಉತ್ಪಾದನಾ ವೆಚ್ಚಕ್ಕೆ ಶೇಕಡಾ 50 ರಷ್ಟು ಹೆಚ್ಚುವರಿ ಸೇರಿಸಿ ಕನಿಷ್ಠ ಬೆಂಬಲ ಬೆಲೆಯನ್ನು(MSP) ಘೋಷಿಸಬೇಕು. ಈ ಬೆಲೆಗಳಲ್ಲಿ ಬೆಳೆಗಳ ಖರೀದಿಯನ್ನು ಸರ್ಕಾರ ಖಾತರಿಪಡಿಸಬೇಕು. ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ಖರೀದಿಸುವುದು ಕ್ರಿಮಿನಲ್ ಅಪರಾಧವಾಗಿ ಘೋಷಿಸಬೇಕು.

3. **ರೈತ ವಿರೋಧಿ ಸುಗ್ರೀವಾಜ್ಞೆಗಳನ್ನು ರದ್ದುಗೊಳಿಸಿ:** 03-06-2020 ರಂದು ಕೇಂದ್ರ ಸರ್ಕಾರ ಹೊರಡಿಸಿದ ಎಲ್ಲಾ ಮೂರು ಸುಗ್ರೀವಾಜ್ಞೆಗಳಾದ 1) ಕೃಷಿ ಉತ್ಪನ್ನ ವಾಣಿಜ್ಯ ಮತ್ತು ಮಾರಾಟ (ಉತ್ತೇಜನ ಹಾಗೂ ಬೆಂಬಲ) ಸುಗ್ರೀವಾಜ್ಞೆ -2020, 2)ಬೆಲೆ ಭರವಸೆ (ಸಶಕ್ತೀಕರಣ ಹಾಗೂ ಸುರಕ್ಷೆ)ಮತ್ತು ಕೃಷಿ ಸೇವೆಗಳ ಕುರಿತ ಒಪ್ಪಂದ ಸುಗ್ರೀವಾಜ್ಞೆ -2020 3) ಅಗತ್ಯ ವಸ್ತುಗಳ ಕಾಯ್ದೆ (ತಿದ್ದುಪಡಿ) -2020 ಎಂಬ ರೈತ ವಿರೋಧಿಯಾದ ಈ ಕಾನೂನುಗಳನ್ನು ಹಿಂಪಡೆಯಬೇಕು.ಇವುಗಳು ಬೆಳೆಗಳ ದರಗಳನ್ನು ಇಳಿಸುತ್ತವೆ. ಕೃಷಿ ವೆಚ್ಚಗಳನ್ನು ದುಬಾರಿಗೊಳಿಸಿ ಬೀಜ ಸಂರಕ್ಷಣೆಯನ್ನು ನಾಶಪಡಿಸುತ್ತದೆ. ಆಹಾರ ಭದ್ರತೆ ಹಾಗೂ ಸರ್ಕಾರದ ಮಧ್ಯಪ್ರವೇಶದ ಸಾಧ್ಯತೆಯನ್ನು ಕೊನೆಗಾಣಿಸುತ್ತದೆ. ಇವು, ಒಟ್ಟಾರೆಯಾಗಿ ಕಾರ್ಪೊರೇಟ್ ವಲಯವನ್ನು ಉತ್ತೇಜಿಸಲಿದ್ದು ,ಆಹಾರ ಪೂರೈಕೆ, ದಾಸ್ತಾನು ಹಾಗೂ ಕಾಳಸಂತೆ ಮಾರುಕಟ್ಟೆಯನ್ನು ಕಾರ್ಪೊರೇಟ್ ಸಂಸ್ಥೆಗಳ ನಿಯಂತ್ರಣಕ್ಕೆ ಒಳಪಡಿಸಲಿವೆ. 'ಒಂದು ದೇಶ ಒಂದು ಮಾರುಕಟ್ಟೆ' ರೈತರಿಗೆ ಬೇಡ; 'ಒಂದು ದೇಶ ಒಂದು ಕನಿಷ್ಠ ಬೆಂಬಲ ಬೆಲೆ(MSP)' ರೈತರಿಗೆ ಬೇಕಾಗಿದೆ.

4. **ಡಿಸೇಲ್ ದರ ಅರ್ಧದಷ್ಟು ಇಳಿಸಿ:** 2014 ರಿಂದ ಅಂತರರಾಷ್ಟ್ರೀಯ ಬೆಲೆಗಳಲ್ಲಿ ಡೀಸೆಲ್ ದರ ಶೇಕಡಾ 60 ರಷ್ಟು ಕಡಿಮೆಯಾಗಿದ್ದರೂ ಭಾರತ ಸರ್ಕಾರದ ತೆರಿಗೆ ಎರಡು ಪಟ್ಟು ಹೆಚ್ಚಿಸಿ ಡೀಸೆಲ್ ದುಬಾರಿ ಮಾಡಿದೆ. ಕೂಡಲೇ ದರವನ್ನು ಅರ್ಧದಷ್ಟು ಇಳಿಸಬೇಕು.

5. **ವಿದ್ಯುತ್ ಮಸೂದೆ 2020 ಹಿಂಪಡೆಯಿರಿ:** ಕರೋನಾ ಅವಧಿಯ ರೈತರ, ಸಣ್ಣಪುಟ್ಟ ಅಂಗಡಿಗಳ, ಸಣ್ಣ ಉದ್ಯಮಗಳ ಹಾಗೂ ವ್ಯಾಪಾರಿಗಳ ವಿದ್ಯುತ್ ಬಿಲ್ ಗಳನ್ನು ಮನ್ನಾ ಮಾಡಬೇಕು ಹಾಗೂ ನೇರ ನಗದು ವರ್ಗಾವಣೆ ಯೋಜನೆಗೆ ಅನುಮೋದನೆ ನೀಡಬಾರದು.

6. **ಈ ವರ್ಷ ನಷ್ಟಕ್ಕೀಡಾದ ರೈತರಿಗೆ ಪರಿಹಾರ ಒದಗಿಸಿ:** ಆಲಿಕಲ್ಲು ಮಳೆ, ಆಕಾಲಿಕ ಮಳೆ ಮತ್ತು2020 ಫೆಬ್ರವರಿ-ಮಾರ್ಚ್ ನಲ್ಲಿ ಆದ ಲಾಕ್ ಡೌನ್ ಕಾರಣದಿಂದ ತರಕಾರಿ, ಹಣ್ಣು, ಹಾಲು ಮುಂತಾದ ಬೆಳೆ ನಷ್ಟಕ್ಕೀಡಾದ ರೈತರಿಗೆ ಸರ್ಕಾರ ಪರಿಹಾರಗಳನ್ನು ಒದಗಿಸಬೇಕು.

7. **ಮನರೇಗಾ ಅಡಿಯಲ್ಲಿ ಗ್ಯಾರಂಟಿ ಕೆಲಸವನ್ನು ಈ ವರ್ಷ ಹೆಚ್ಚಿಸಿ:** ಇವತ್ತಿನ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಕೃಷಿ ಕೂಲಿಕಾರರು ,ಸಣ್ಣ ರೈತರು, ಹಳ್ಳಿಗಳಿಗೆ ಮರಳಿ ಬಂದಿರುವ ವಲಸೆ ರೈತರುಗಳು ಕೆಲಸ ಪಡೆಯುವಂತಾಗಲೂ 200 ದಿನಗಳಿಗೆ ಮನರೇಗಾ ಕೆಲಸವನ್ನು ಹೆಚ್ಚಿಸಿ, ಕನಿಷ್ಠ ಕೂಲಿ ದರದ ಆಧಾರದಲ್ಲಿ ಕೂಲಿ ಪಾವತಿಸಬೇಕು.

8. **ಕರೋನಾ ಬಿಕ್ಕಟ್ಟಿನ ಇಡೀ ಅವಧಿಯುದ್ದಕ್ಕೂ ಪ್ರತಿಯೊಬ್ಬರಿಗೂ ಪೂರ್ಣ ಆಹಾರ ಧಾನ್ಯಗಳನ್ನು ಸರ್ಕಾರ ಒದಗಿಸಬೇಕು:** ರೈತರ ಕಠಿಣ ಶ್ರಮದಿಂದ ದೇಶದಲ್ಲಿ ಆಹಾರ ಧಾನ್ಯವು ಉತ್ಪಾದನೆಯಾಗಿದ್ದು, ಇದನ್ನು ಜನತೆಯ ಸಹಾಯಕ್ಕೆ ಉಪಯೋಗಿಸಬೇಕಾಗಿದೆ. ತಲಾ ಯೂನಿಟ್‌ಗೆ ಪ್ರತಿ ತಿಂಗಳು 15 kg. ಆಹಾರ ಧಾನ್ಯ, ಪ್ರತಿ ಕುಟುಂಬಕ್ಕೆ 1 kg ಅಡುಗೆ ಎಣ್ಣೆ,1 kg ದ್ವಿದಳ ಧಾನ್ಯಗಳು ಹಾಗೂ 1 kg ಸಕ್ಕರೆಯನ್ನು ಒದಗಿಸಬೇಕು.

9 **ರೈತರ ಹಾಗೂ ಆದಿವಾಸಿಗಳ ಕೃಷಿ ಭೂಮಿಗಳ ಕಂಪನಿ ಸ್ವಾಧೀನ ನಿಷೇಧಿಸಿ:** CAMPA ಕಾನೂನು ಹೆಸರಿನಲ್ಲಿ ಅರಣ್ಯ ಭೂಮಿಯಲ್ಲಿ ಬಲವಂತದ ಸಸಿ ನೆಡುವ ಕೆಲಸ ನಿಲ್ಲಿಸಿ. ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಿ,. ಗುತ್ತಿಗೆ ಭೂಮಿಯನ್ನು ಖಾಯಂ ವರ್ಗಾಯಿಸುವ ಕರ್ನಾಟಕ ರಾಜ್ಯ ಸರ್ಕಾರದ ತೀರ್ಮಾನ ಕೈಬಿಡಬೇಕು.

ಈ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿರುವ ಪ್ರತಿಭಟನೆ, ಪ್ರದರ್ಶನ, ಹೋರಾಟಗಳಲ್ಲಿ ರೈತರು, ಕೂಲಿಕಾರರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಲು ಮನವಿ ಮಾಡುತ್ತೇವೆ

# ಕೊರೊನಾ ಮುನ್ನವೇ ದುಡಿಯುವ ಜನರ ವರಮಾನ ಕುಸಿದಿತ್ತು




**ಕೊರೊನಾ ಮತ್ತು ಲಾಕ್‌ಡೌನ್ ಜಾರಿ ಮಾಡುವ ಮೊದಲೇ ಭಾರತದ ಅಪಾರ ಸಂಖ್ಯೆಯ ದುಡಿಯುವ ಜನರ ನಿಜ ಆದಾಯ ಕುಸಿದಿತ್ತು ಎಂಬ ಗಂಭೀರವಾದ ಸಂಗತಿಯನ್ನು ಈ ಕೊರೊನಾ ಮತ್ತು ಲಾಕ್‌ಡೌನ್‌ನ ಅಬ್ಬರಗಳು ಮರೆಮಾಚಿವೆ.**
**1991ರಿಂದ ಹಿಡಿದು ಇಲ್ಲಿಯವರೆಗಿನ ನವ ಉದಾರವಾದಿ ಅವಧಿಯಲ್ಲಿ ದೇಶದಲ್ಲಿ ಆಹಾರಧಾನ್ಯಗಳ ಉತ್ಪಾದನೆಯ ಹೆಚ್ಚಳವು ಜನಸಂಖ್ಯಾ ಬೆಳವಣಿಗೆಗಿಂತ ಹೆಚ್ಚಿಗೆ ಇರಲೇ ಇಲ್ಲ: ಆದಾಗ್ಯೂ, ಈ ಇಡೀ ಅವಧಿಯಲ್ಲಿ ಭಾರತೀಯ ಆಹಾರ ನಿಗಮವು ಸಂಗ್ರಹಿಸುತ್ತಿದ್ದ ಆಹಾರಧಾನ್ಯಗಳ ಪ್ರಮಾಣದಲ್ಲಿ ಸಾಕಷ್ಟು ಏರಿಕೆಯಾಗಿದೆ. ಇದಕ್ಕೆ ಕಾರಣ ಜನಸಾಮಾನ್ಯರ ಆಹಾರಧಾನ್ಯಗಳ ಬಳಕೆಯಲ್ಲಿ ಇಳಿಕೆ, ಅಂದರೆ ನಿಜ ಆದಾಯದ ಕುಸಿತ. ಆಹಾರಧಾನ್ಯಗಳ ಬಳಕೆ ಮತ್ತು ನಿಜ ಬಳಕೆಯ ವೆಚ್ಚದ ಅಂಕಿ-ಅಂಶಗಳು ಇದನ್ನೇ ತೋರಿಸುತ್ತಿವೆ.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

ಕೊರೊನಾ ಸಾಂಕ್ರಾಮಿಕವು ವ್ಯಾಪಕವಾಗಿ ಹರಡಿರುವುದರಿಂದ ಮತ್ತು ಅದರ ಸಂಬಂಧವಾಗಿ ಹೇರಿದ ಲಾಕ್‌ಡೌನ್ ಪರಿಣಾಮಗಳಿಂದಾಗಿ ಭಾರತದ ಜಿಡಿಪಿಯು ಕುಸಿದು ಬಿದ್ದಿದೆ, ನಿಜ. ಆದರೆ, ಕೊರೊನಾ ಹರಡುವ ಮುನ್ನವೇ ಮತ್ತು ತತ್ಸಂಬಂಧದ ಲಾಕ್‌ಡೌನ್ ಜಾರಿ ಮಾಡುವ ಸಮಯದ ಮೊದಲೇ ಭಾರತದ ಅಪಾರ ಸಂಖ್ಯೆಯ ದುಡಿಯುವ ಜನರ ನಿಜ ಆದಾಯ ಕುಸಿದಿತ್ತು ಎಂಬ ಗಂಭೀರವಾದ ಸಂಗತಿಯನ್ನು ಈ ಕೊರೊನಾ ಮತ್ತು ಲಾಕ್‌ಡೌನ್‌ನ ಅಬ್ಬರಗಳು ಮರೆಮಾಚಿವೆ.

ಈ ಸಂಗತಿಯನ್ನು ಹಲವಾರು ಅಂಶಗಳು ದೃಢೀಕರಿಸುತ್ತವೆ. ಸಾಮಾನ್ಯವಾಗಿ ಶೇ.2ರಿಂದ 3ರವರೆಗಿನ ಪ್ರಮಾಣದಲ್ಲಿರುತ್ತಿದ್ದ ನಿರುದ್ಯೋಗವು 2018-19ನೇ ವರ್ಷದಲ್ಲಿ ಶೇ.6ರ ಮಟ್ಟಕ್ಕೆ ಏರಿತ್ತು. ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚಿನ ನಿರುದ್ಯೋಗವನ್ನು ಕಂಡ ಸಮಯ ಇದು. 2017-18ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಭಾರತದಲ್ಲಿ 2016-17ರಲ್ಲಿ ತಲಾ ವಾರ್ಷಿಕ ಬಳಕೆಯ ವೆಚ್ಚವು 2011-12ರಲ್ಲಿ ಇದ್ದುದಕ್ಕಿಂತ ಶೇ.9ರಷ್ಟು ಕಡಿಮೆಯಾಗಿತ್ತು. ಅಷ್ಟೊಂದು ದೊಡ್ಡ ಜನಸಂಖ್ಯೆಯ ಸರಾಸರಿ ಬಳಕೆ ವೆಚ್ಚವು ಇಷ್ಟೊಂದು ಪ್ರಮಾಣದಲ್ಲಿ ಇಳಿಕೆಯಾಗಿರುವುದು ಒಂದು ಅಭೂತಪೂರ್ವ ಸಂಗತಿಯೇ ಸರಿ. ರಾಷ್ಟ್ರೀಯ ಮಾದರಿ ಸಮೀಕ್ಷೆಯಿಂದ ಕಂಡುಬಂದ ಈ ಸಂಗತಿಯು ಅದೆಷ್ಟು ಕಳವಳಕಾರಿಯಾಗಿತ್ತು ಎಂದರೆ, ಸಮೀಕ್ಷೆಯ ವರದಿಯನ್ನು ಅಡಗಿಸಿಡಲು ಮೋದಿ ಸರ್ಕಾರ ನಿರ್ಧರಿಸಿತ್ತು. ರಾಷ್ಟ್ರೀಯ ಮಾದರಿ ಸಮೀಕ್ಷೆಯಿಂದ ಕಂಡುಬಂದ ಈ ಅಂಶವು ನಂಬಲರ್ಹವಲ್ಲ ಎಂಬುದು ಸರ್ಕಾರದ ಒಂದು ಅತೀ ಅಸಂಬದ್ಧವಾದ ಹೇಳಿಕೆಯಾಗಿತ್ತು. ದಶಕ ದಶಕಗಳಿಂದಲೂ ಕಾಲ ಕಾಲಕ್ಕೆ ನಡೆಯುತ್ತಿರುವ ವಿಶ್ವದ ಅತಿದೊಡ್ಡ ಮಾದರಿ ಸಮೀಕ್ಷೆಯು, ಅದರ ಇತಿ ಮಿತಿಗಳು ಏನೇ ಇದ್ದರೂ ಸಹ, ಒಂದು ನಿರ್ದಿಷ್ಟ ವರ್ಷದಲ್ಲಿ ಮಾತ್ರ ನಂಬಲರ್ಹವಲ್ಲ ಎನ್ನಲು ಕಾರಣವೇ ಇಲ್ಲ. ಆದ್ದರಿಂದ, ಭಾರತದ ಅರ್ಥವ್ಯವಸ್ಥೆಯಲ್ಲಿ ಗಂಭೀರವಾಗಿರುವಂಥಹ ಏನೋ ಒಂದು ವಿದ್ಯಮಾನವು ನಡೆಯುತ್ತಾ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಆಹಾರಧಾನ್ಯಗಳ ಉತ್ಪಾದನೆ ಮತ್ತು ಬಳಕೆಯ ಅಂಕಿ ಅಂಶಗಳು ಏನು ನಡೆಯುತ್ತಿತ್ತು ಎಂಬುದರ ಸತ್ಯವನ್ನು ದೃಢೀಕರಿಸುತ್ತವೆ. 1991ರಿಂದ ಹಿಡಿದು ಇಲ್ಲಿಯವರೆಗಿನ ನವ ಉದಾರವಾದಿ ಅವಧಿಯನ್ನು ಗಣನೆಗೆ ತೆಗೆದುಕೊಂಡರೆ, ದೇಶದಲ್ಲಿ ಆಹಾರಧಾನ್ಯಗಳ ಉತ್ಪಾದನೆಯ ಹೆಚ್ಚಳವು ಜನಸಂಖ್ಯಾ ಬೆಳವಣಿಗೆಗಿಂತ ಹೆಚ್ಚಿಗೆ ಇರಲೇ ಇಲ್ಲ: 1991 ಮತ್ತು 2018ರ ನಡುವೆ ಜನಸಂಖ್ಯಾ ಬೆಳವಣಿಗೆಯು ವಾರ್ಷಿಕವಾಗಿ ಸುಮಾರು ಶೇ.1.6ರಷ್ಟಿದ್ದರೆ, ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳವು ಶೇ.1.8ರಷ್ಟಿತ್ತು. ಆದಾಗ್ಯೂ, ಕುತೂಹಲಕಾರಿಯಾದ ಎರಡು ಸ್ಪಷ್ಟ ವಿದ್ಯಮಾನಗಳನ್ನು ಗುರುತಿಸಬಹುದು: ಮೊದಲನೆಯದು, ಆಹಾರಧಾನ್ಯಗಳ ಸಂಗ್ರಹಣೆ. ನವ ಉದಾರವಾದದ ಇಡೀ ಅವಧಿಯಲ್ಲಿ ಭಾರತೀಯ ಆಹಾರ ನಿಗಮವು ಸಂಗ್ರಹಿಸುತ್ತಿದ್ದ ಆಹಾರಧಾನ್ಯಗಳ ಪ್ರಮಾಣದಲ್ಲಿ ಸಾಕಷ್ಟು ಏರಿಕೆಯಾಗಿದೆ. ಅದರಲ್ಲೂ ವಿಶೇಷವಾಗಿ 2008ರ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ನಂತರ, ಸಂಗ್ರಹಣೆಯ ಪ್ರಮಾಣವು ವೇಗವಾಗಿ ಏರಿದೆ. 1991ರಲ್ಲಿ ಸರ್ಕಾರದ ಆಹಾರ ಧಾನ್ಯಗಳ ಸಂಗ್ರಹಣೆಯು ಧಾನ್ಯಗಳ ನಿವ್ವಳ ಉತ್ಪಾದನೆಯ ಶೇ.12.7ರಷ್ಟಿತ್ತು. ಈ ಪ್ರಮಾಣವು 2017ರಲ್ಲಿ ಶೇ.29.6ಕ್ಕೆ ಏರಿಕೆಯಾಯಿತು. 2001 ರಿಂದ 2008ರ ವರೆಗಿನ ಅವಧಿಯ ಸರಾಸರಿ ಅನುಪಾತವು 22.4 ಆಗಿತ್ತು ಮತ್ತು 2011 ರಿಂದ 2017ರ ಅವಧಿಯಲ್ಲಿ ಈ ಅನುಪಾತವು 28.5 ಆಗಿತ್ತು. ಅಂದರೆ, ಕೃಷಿ ವ್ಯಾಪಾರದಲ್ಲಿ ಪ್ರಾಬಲ್ಯ ಹೊಂದಿದ್ದ ಖಾಸಗಿ ವ್ಯಾಪಾರಿಗಳು ದೇಶೀಯ ಮಾರುಕಟ್ಟೆಯಲ್ಲಿ ಆಹಾರಧಾನ್ಯಗಳ ವ್ಯಾಪಾರದಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ಕಳೆದುಕೊಂಡವು.

ಎರಡನೆಯ ಗಮನಾರ್ಹವಾದ ವಿದ್ಯಮಾನವೆಂದರೆ, ಉತ್ಪಾದನೆಯ ಪ್ರಮಾಣಕ್ಕೆ ಹೋಲಿಸಿದರೆ ವಾಡಿಕೆಯ ಬಳಕೆ ಮತ್ತು ಬಫರ್ ಉದ್ದೇಶಗಳಿಗಾಗಿ ಹೊಂದಿರುತ್ತಿದ್ದ ಆಹಾರ ಧಾನ್ಯಗಳ ದಾಸ್ತಾನು ಪ್ರಮಾಣವು ವಾಡಿಕೆಗಿಂತಲೂ ಹೆಚ್ಚಿನ ಏರಿಕೆಯನ್ನು ಕಂಡಿದೆ. 2017ರಿಂದ ಆರಂಭವಾದ ನಾಲ್ಕು ವರ್ಷಗಳಲ್ಲಿ, ಆಯಾ ವರ್ಷಗಳ ಜೂನ್ ತಿಂಗಳಿನಲ್ಲಿ ಹೊಂದಿದ್ದ ದಾಸ್ತಾನುಗಳು ಅನುಕ್ರಮವಾಗಿ 55.7, 68.1, 74.3 ಮತ್ತು 83.5 ದಶಲಕ್ಷ ಟನ್ನುಗಳಷ್ಟಿದ್ದವು. ದಾಸ್ತಾನುಗಳು ನಿವ್ವಳ ಉತ್ಪಾದನೆಗಿಂತ ವೇಗವಾಗಿ ಬೆಳೆಯುತ್ತಿದ್ದವು ಮತ್ತು ಪ್ರತಿ ವರ್ಷದ ಜೂನ್ ತಿಂಗಳಿನಲ್ಲೂ ದಾಸ್ತಾನು ಮಟ್ಟವು ಆಯಾ ವರ್ಷದ ನಿವ್ವಳ ಉತ್ಪಾದನೆಯ ಶೇ.25ರಷ್ಟು ಹೆಚ್ಚಿಗೆ ಪ್ರಮಾಣದಲ್ಲಿ ಇರುತ್ತಿತ್ತು. ಭಾರತದ ಅರ್ಥವ್ಯವಸ್ಥೆಯಲ್ಲಿ ಅಷ್ಟೊಂದು ಹೆಚ್ಚಿನ ಮಟ್ಟದ ದಾಸ್ತಾನು ಯಾವತ್ತೂ ಇರಲಿಲ್ಲ: ಎಪ್ಪತ್ತರ ದಶಕದಲ್ಲಿ ನಿವ್ವಳ ಉತ್ಪಾದನೆಯ ಸುಮಾರು ಶೇ.12ರಷ್ಟಿದ್ದ ದಾಸ್ತಾನು, ತೊಂಬತ್ತರ ದಶಕದ ಕೊನೆಯ ಹೊತ್ತಿಗೆ ಸುಮಾರು ಶೇ.15 ಕ್ಕಿಂತ ಹೆಚ್ಚಿಗೆ ಇರಲಿಲ್ಲ.

ಈ ಎರಡೂ ವಿದ್ಯಮಾನಗಳೂ ಪರಸ್ಪರ ಸಂಬಂಧ ಹೊಂದಿವೆ. ಸರ್ಕಾರವು ಹೊಂದಿದ್ದ ಬೃಹತ್ ಪ್ರಮಾಣದ ದಾಸ್ತಾನು ಏನನ್ನು ಸೂಚಿಸುತ್ತದೆ ಎಂದರೆ, ಮಾರುಕಟ್ಟೆಯಲ್ಲಿ ಬೇಡಿಕೆ ಇರುವುದಕ್ಕಿಂತಲೂ "ಹೆಚ್ಚಿನ ಪೂರೈಕೆ"ಯೇ ಇರುತ್ತಿದ್ದುದೇ ಒಂದು ದೀರ್ಘಾವಧಿಯ ಅವಸ್ಥೆಯಾಗಿದ್ದ ಕಾರಣದಿಂದ ಖಾಸಗಿ ವ್ಯಾಪಾರಿಗಳಿಗೆ ಆಹಾರ ಧಾನ್ಯ ವ್ಯಾಪಾರವು ಆಕರ್ಷಣೀಯವಾಗಿ ಉಳಿಯಲಿಲ್ಲ. ಸಾಕಷ್ಟು ಬೇಡಿಕೆ ಇಲ್ಲದಿದ್ದರೂ ಸಹ, ದೊಡ್ಡ ಪ್ರಮಾಣದ ಆಹಾರ ಧಾನ್ಯಗಳ ದಾಸ್ತಾನು ಇಟ್ಟುಕೊಳ್ಳಬೇಕಾದ ಅನಿವಾರ್ಯತೆ ಇದ್ದ ಕಾರಣದಿಂದ, ಖರೀದಿದಾರರೇ ಮೇಲುಗೈ ಪಡೆದ ಮಾರುಕಟ್ಟೆಯಲ್ಲಿ, ಈ ದಾಸ್ತಾನುಗಳು ಸರಕಾರ ಬಳಿಯೇ ಇರಲಿ ಎಂಬುದು ಖಾಸಗಿ ವ್ಯಾಪಾರಿಗಳ ಇರಾದೆಯಾಗಿತ್ತು. ಹಾಗಾಗಿ, ಖಾಸಗಿ ವ್ಯಾಪಾರಿಗಳ ಬಳಿ ಅತಿ ಕಡಿಮೆ ಆಹಾರಧಾನ್ಯಗಳ ದಾಸ್ತಾನು ಇರುತ್ತಿತ್ತು ಮತ್ತು ಅದೇ ಸಮಯದಲ್ಲಿ ಸರ್ಕಾರದ ಬಳಿ ಅತಿ ಹೆಚ್ಚಿನ ಪ್ರಮಾಣದ ದಾಸ್ತಾನು ಇರುತ್ತಿತ್ತು ಮತ್ತು ಅದು ನಿವ್ವಳ ಉತ್ಪಾದನೆಯ ಅನುಪಾತದ ಲೆಕ್ಕದಲ್ಲಿ ಹೆಚ್ಚಿನ ಮಟ್ಟದಲ್ಲೇ ಇರುತ್ತಿತ್ತು.

ಆಹಾರ ಧಾನ್ಯಗಳ ಉತ್ಪಾದನೆಯ ದರವು ಜನಸಂಖ್ಯಾ ಬೆಳವಣಿಗೆಯ ದರವನ್ನು ಮೀರದಿದ್ದರೂ ಸಹ, ಆಹಾರ ಧಾನ್ಯಗಳ ಮಾರುಕಟ್ಟೆಯಲ್ಲಿ ಪೂರೈಕೆಯೇ ಸತತವಾಗಿ ಹೆಚ್ಚಾಗಿರುವ ಪ್ರವೃತ್ತಿ ಇರುವುದಾದರೂ ಏಕೆ ಎಂಬುದೇ ಪ್ರಶ್ನೆ. ನವ ಉದಾರವಾದದ ಕಾಲಮಾನದಲ್ಲಿ ಭಾರತದ ಅರ್ಥವ್ಯವಸ್ಥೆಯು ಉನ್ನತ ಮಟ್ಟದಲ್ಲಿ ಬೆಳೆಯುತ್ತಿದೆ ಎಂದು ನವ ಉದಾರವಾದದ ಭಕ್ತರು ತಾವೇ ತಮ್ಮ ಬೆನ್ನು ತಟ್ಟಿಕೊಳ್ಳುತ್ತಾರೆ. ಆದರೆ, ಅರ್ಥ ವ್ಯವಸ್ಥೆಯಲ್ಲಿ ಉಂಟಾದ ಈ ಬೆಳವಣಿಗೆಯ ಜೊತೆಯಲ್ಲೇ ಆಹಾರ ಧಾನ್ಯಗಳ ತಲಾ ಬೇಡಿಕೆಯೂ ವೃದ್ಧಿಯಾಗಿರಲೇ ಬೇಕಿತ್ತು. ಈ ಸಂಬಂಧವಾಗಿ ನವ ಉದಾರವಾದದ ಭಕ್ತರು ಮಂಡಿಸುವ ಒಂದು ವಾದವೆಂದರೆ, ಹೆಚ್ಚುತ್ತಿರುವ ಆದಾಯದೊಂದಿಗೆ ಆಹಾರ ಬಳಕೆಯು ಬಗೆ ಬಗೆಯ ರೂಪ ತಾಳುತ್ತದೆ. ಆದ್ದರಿಂದ ಧಾನ್ಯಗಳ ಮೇಲಿನ ಬೇಡಿಕೆ ಕುಸಿದಿದೆ. ಆದರೆ, ಇದು ಸಂಪೂರ್ಣವಾಗಿ ಸರಿಯಲ್ಲದ ವಾದ. ಏಕೆಂದರೆ, ಬಿತ್ತನೆ ಬೀಜವನ್ನು ಬದಿಗಿಟ್ಟು ಉಳಿದ ಧಾನ್ಯಗಳು ನೇರವಾಗಿ ಮನುಷ್ಯರ ಆಹಾರವಾಗಿ ಮಾತ್ರವಲ್ಲದೆ, ಪರೋಕ್ಷವಾಗಿ ಪಶು ಉತ್ಪನ್ನಗಳ (ಹಾಲು ಮತ್ತು ಕೋಳಿಯಂತಹ) ಉತ್ಪಾದನೆಗಾಗಿ ಬಳಸಲಾಗುತ್ತದೆ. ಅದರಲ್ಲಿ ಒಂದು ಭಾಗವು ಮನುಷ್ಯರ ಬಳಕೆಗಾಗಿ ಮತ್ತು ಇನ್ನೊಂದು ಭಾಗವನ್ನು ಕೈಗಾರಿಕಾ ಬಳಕೆಗಾಗಿ ಸಂಸ್ಕರಿಸಲಾಗುತ್ತದೆ. ನಿಜ ವರಮಾನಗಳ ಏರಿಕೆಯೊಂದಿಗೆ ಮತ್ತು ಆಹಾರ ವೈವಿಧ್ಯತೆಯೊಂದಿಗೆ, ಜಾಗತಿಕ ಮಟ್ಟದಲ್ಲಿ ನೋಡಿದರೆ ಎಲ್ಲಾ ರೀತಿಯ ಉಪಯೋಗಗಳಿಗೆ, ಅದರಲ್ಲೂ ವಿಶೇಷವಾಗಿ ಪರೋಕ್ಷ ಆಹಾರಗಳಿಗೆ, ಆಹಾರ ಧಾನ್ಯಗಳ ತಲಾ ಬೇಡಿಕೆಯು ಏರುತ್ತಲೇ ಇದೆ.

ಭಾರತದಲ್ಲಿ, ಧಾನ್ಯಗಳ ಉತ್ಪಾದನೆಯ ತಲಾ ಹೆಚ್ಚಳವು ನಿಕೃಷ್ಟ ಪ್ರಮಾಣದಲ್ಲಿರುವುದರಿಂದ, ಆಹಾರ ಧಾನ್ಯಗಳಿಗೆ ಬೇಡಿಕೆಯು ನಿರಂತರವಾಗಿ ಹೆಚ್ಚಲೇಬೇಕು. ಹಾಗಿದ್ದರೂ ಸಹ, ಭಾರತವು ತದ್ವಿರುದ್ಧವಾದ ಪರಿಸ್ಥಿತಿಯಲ್ಲಿದೆ. ಅದೆಷ್ಟು ತದ್ವಿರುದ್ಧವಾಗಿದೆ ಎಂದರೆ, ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳನ್ನು ನಿರಂತರವಾಗಿ ರಫ್ತುಮಾಡುತ್ತಿದೆ. ಇದು ಸಾಧ್ಯವಾಗುವುದು ಹೇಗೆ?


ಇದಕ್ಕೆ ಕಾರಣವೆಂದರೆ ಜಿಡಿಪಿ ಉನ್ನತ ಮಟ್ಟದಲ್ಲಿದ್ದರೂ ಸಹ, ದುಡಿಯುವ ಜನರ ನಿಜ ವರಮಾನವು ಸಾಕಷ್ಟು ಪ್ರಮಾಣದಲ್ಲಿ ಏರಿಕೆಯಾಗಿಲ್ಲ. ಸರ್ಕಾರದ ಬಳಿ ಆಹಾರ ಧಾನ್ಯಗಳ ದಾಸ್ತಾನು ಅತಿ ಹೆಚ್ಚಿನ ಮಟ್ಟದಲ್ಲಿದ್ದ ಇತ್ತೀಚಿನ ದಿನಗಳಲ್ಲೇ ದುಡಿಯುವರ ವರಮಾನವು ಇಳಿಕೆಯಾಗಿರುವ ಸಾಧ್ಯತೆ ಇದೆ.


ದುಡಿಯುವ ಜನರ ಆಹಾರ ಧಾನ್ಯಗಳ ತಲಾ ಬಳಕೆಯು ಇತ್ತೀಚಿನ ವರ್ಷಗಳಲ್ಲಿ ಇಳಿದಿರಲೇಬೇಕು. ಏಕೆಂದರೆ, ಈ ನವ-ಉದಾರವಾದದ ಇಡೀ ಅವಧಿಯಲ್ಲಿ, 1990-91 ರಿಂದ 2017-18ರ ವರೆಗೆ, ಮೊದಲು ನಾವು ತಲಾ ಆಹಾರ ಧಾನ್ಯದ ಲಭ್ಯತೆಯಲ್ಲಿ ಒಂದು ಇಳಿಕೆಯನ್ನು , ನಂತರ ಏರಿಕೆಯನ್ನು ಕಾಣುತ್ತೇವೆ. ಆದರೆ, ಒಟ್ಟಾರೆಯಾಗಿ ತಲಾ ಆಹಾರ ಧಾನ್ಯದ ಲಭ್ಯತೆಯು ಏರಿಕೆಯಾಗಿಲ್ಲ. ಉದಾಹರಣೆಗೆ, 1991ರಲ್ಲಿ ದಿನಕ್ಕೆ 510 ಗ್ರಾಂ, 2007ರಲ್ಲಿ 442.8 ಗ್ರಾಂ, 2018ರಲ್ಲಿ 494 ಗ್ರಾಂ. ಆಹಾರ ಧಾನ್ಯದ ಲಭ್ಯತೆ ಇತ್ತು. ಈ ಅವಧಿಯಲ್ಲಿ ಅಸಮಾನತೆಯು ಅಗಾಧ ಪ್ರಮಾಣದಲ್ಲಿ ಏರಿಕೆಯಾಗಿದ್ದರಿಂದ, ಶ್ರೀಮಂತರ ಆದಾಯವು ಜಿಡಿಪಿಯ ಒಟ್ಟಾರೆ ಬೆಳವಣಿಗೆಗಿಂತಲೂ ಹೆಚ್ಚಿಗೆ ಇದ್ದಿರಲೇಬೇಕು. ಅವರ ಆಹಾರ ಧಾನ್ಯಗಳ ಪ್ರತ್ಯಕ್ಷ ಮತ್ತು ಪರೋಕ್ಷ ತಲಾ ಬಳಕೆಯು ಗಣನೀಯವಾಗಿ ಹೆಚ್ಚಿರಲೇಬೇಕು. ಅದರ ಪರಿಣಾಮವಾಗಿ ದುಡಿಯುವ ಜನರ ತಲಾ ಬಳಕೆ ಬಹಳಷ್ಟು ಇಳಿದಿರಲೇಬೇಕು.

ನಿಜ ವರಮಾನದಲ್ಲಿ ಹೆಚ್ಚಳವಾದ ಸಂದರ್ಭದಲ್ಲಿ ಅದರೊಂದಿಗೆ ಅಗತ್ಯವಾಗಿ ಆಹಾರ ಧಾನ್ಯಗಳಿಗೆ ಒಟ್ಟು ಬೇಡಿಕೆಯೂ ಹೆಚ್ಚುತ್ತದೆ. ಹಾಗಾಗಿ, ತಲಾ ನಿಜ ವರಮಾನದ ಇಳಿಕೆಯೊಂದಿಗೆ ಧಾನ್ಯಗಳ ತಲಾ ಬಳಕೆಯ ಇಳಿಕೆಯೂ ತಳುಕು ಹಾಕಿಕೊಂಡಿರುತ್ತದೆ. ಅಂದರೆ, ನವ ಉದಾರ ನೀತಿಗಳ ಜಾರಿಯು ಆರಂಭದಿಂದ ಹಿಡಿದು ಕೊರೊನಾ ಅಂಟುರೋಗವು ಇತ್ತೀಚೆಗೆ ಇಡೀ ವಿಶ್ವವನ್ನು ಆವರಿಕೊಂಡ ಸಮಯದವರೆಗಿನ ಅವಧಿಯಲ್ಲಿ ದುಡಿಯುವ ಜನರ ತಲಾ ನಿಜ ವರಮಾನವು ಇಳಿದಿರಲೇಬೇಕು.


ಈ ಅಭಿಪ್ರಾಯವು ಪೌಷ್ಟಿಕಾಂಶಕ್ಕೆ ಸಂಬಂಧಿಸಿದ ದತ್ತಾಂಶಕ್ಕೆ ಅನುಗುಣವಾಗಿದೆ. 1993-94 ಮತ್ತು 2011-12ರ ನಡುವೆ, (ಇವೆರಡೂ ರಾಷ್ಟ್ರೀಯ ಮಾದರಿ ದೊಡ್ಡ ಸಮೀಕ್ಷೆಯ ವರ್ಷಗಳು) ಗ್ರಾಮೀಣ ಭಾರತದಲ್ಲಿ ದಿನಕ್ಕೆ 2200 ಕ್ಯಾಲೋರಿಗಿಂತ ಕಡಿಮೆ ಮೌಲ್ಯದ ಆಹಾರ ಸೇವಿಸುವ (ಗ್ರಾಮೀಣ ಬಡತನವನ್ನು ವ್ಯಾಖ್ಯಾನಿಸುವ ಮಾನದಂಡ) ಜನರ ಸಂಖ್ಯೆಯು ಶೇ.58ರಿಂದ 68ಕ್ಕೆ ಏರಿಕೆಯಾಗಿದೆ.

ಪುಟ 14 ನೋಡಿ





**ದುಡಿಯುವ ಜನರ ಕೈಗೆ ಖರೀದಿಸುವ ಶಕ್ತಿಯನ್ನು ನೀಡುವ ಬದಲು, ಮೋದಿ ಸರ್ಕಾರವು ತನ್ನ ಆಹಾರ ಧಾನ್ಯಗಳ ದಾಸ್ತಾನಿನ ಪ್ರಮಾಣವನ್ನು ತಗ್ಗಿಸಿಕೊಳ್ಳಲು ಧಾನ್ಯಗಳನ್ನು ಎಥೆನಾಲ್‌ಗೆ ಪರಿವರ್ತಿಸಲು ಅನುಮತಿ ನೀಡುವ ಯೋಜನೆ ರೂಪಿಸಿರುವುದು ವಿಪರ್ಯಾಸವಾಗಿ ಕಂಡರೂ ಅದರಲ್ಲಿ ಆಶ್ಚರ್ಯವೇನಿಲ್ಲ.**




ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

## ಕೊರೊನಾ ಮುನ್ನವೇ ದುಡಿಯುವ ಜನರ ವರಮಾನ ಕುಸಿದಿತ್ತು

ಪುಟ 13 ರಿಂದ



ಅದೇ ರೀತಿಯಲ್ಲಿ ನಗರ ಭಾರತದಲ್ಲಿ ದಿನಕ್ಕೆ 2100 ಕ್ಯಾಲೋರಿಗಿಂತ ಕಡಿಮೆ ಮೌಲ್ಯದ ಆಹಾರ ಸೇವಿಸುವ (ನಗರ ಬಡತನವನ್ನು ವ್ಯಾಖ್ಯಾನಿಸುವ ಮಾನದಂಡ) ಜನರ ಸಂಖ್ಯೆಯು ಶೇ.57 ರಿಂದ ಶೇ.65ಕ್ಕೆ ಏರಿಕೆಯಾಗಿದೆ.

ಈ ಪರಿಸ್ಥಿತಿಯು 2011–12ರ ನಂತರದಲ್ಲಿ ಬಿಗಡಾಯಿಸಿದೆ. 2012ರಲ್ಲಿ ದೇಶದಲ್ಲಿ ಆಹಾರ ಧಾನ್ಯಗಳ ಲಭ್ಯತೆಯ ತಲಾ ಪ್ರಮಾಣವು 463.8 ಗ್ರಾಂ ಇತ್ತು. 2012 ರಿಂದ 2018ರ ವರೆಗೆ ಅನುಕ್ರಮವಾಗಿ 491.9, 489.3, 465.1, 486.8, 488.7, ಮತ್ತು 494.1 ಗ್ರಾಂ ತಲಾ ಪ್ರಮಾಣದ ಆಹಾರದ ಲಭ್ಯತೆ ಇತ್ತು. ಆಹಾರ ಧಾನ್ಯಗಳ ಲಭ್ಯತೆಯ ಪ್ರಮಾಣ ಮತ್ತು ಅದರ ಸೇವನೆಯ ಪ್ರಮಾಣವು ಒಂದೇ ಆಗಿರುವುದಿಲ್ಲ. ಆದರೂ ಇವೆರಡೂ ಸಮನಾಗಿ ಒಟ್ಟಿಗೆ ಸಾಗುತ್ತವೆ ಎಂದೇ ಊಹಿಸಿಕೊಳ್ಳಬಹುದು. ಅಸಮಾನತೆ ಹೆಚ್ಚಿದ ಕಾರಣದಿಂದಾಗಿ ಶ್ರೀಮಂತರ ತಲಾ ಬಳಕೆಯ ಪ್ರಮಾಣವು ಗಣನೀಯವಾಗಿ ಹೆಚ್ಚಿಗೆ ಇರುವುದರಿಂದ ದುಡಿಯುವ ಜನರ ತಲಾ ಬಳಕೆಯು ಇಳಿದಿರಲೇಬೇಕು. 2014ರಿಂದ ಆರಂಭವಾಗಿರುವ ಮೋದಿ ವರ್ಷಗಳಲ್ಲಿ, ದುಡಿಯುವ ಜನರ ಆಹಾರ ಧಾನ್ಯಗಳ ತಲಾವಾರು ಸೇವನೆಯ ಪ್ರಮಾಣವು ಇಳಿಕೆಯಾಗಿದೆ. ದುಡಿಯುವ ಜನರ ತಲಾ ಆದಾಯವು ಇಳಿಕೆಯಾಗದ ಹೊರತು ಇದು ವಿವರಣೆಗೆ ಸಿಗುವ ಅಂಶವಲ್ಲ. ನಿರುದ್ಯೋಗದ ಇತ್ತೀಚಿನ ಹೆಚ್ಚಳ ಮತ್ತು ಗ್ರಾಮೀಣ ಭಾರತದಲ್ಲಿ 2011–12 ಮತ್ತು 2017–18ರ ನಡುವೆ ನಿಜ ಬಳಕೆಯ ವೆಚ್ಚಗಳ ಕುಸಿತ ಮುಂತಾದ ಎಲ್ಲ ಪುರಾವೆಗಳೂ ಈ ಅಭಿಪ್ರಾಯಕ್ಕೆ ಅನುಗುಣವಾಗಿವೆ.

ದುಡಿಯುವ ಜನರ ಕೈಗೆ ಖರೀದಿಸುವ ಶಕ್ತಿಯನ್ನು ನೀಡುವ ಬದಲು, ಮೋದಿ ಸರ್ಕಾರವು ತನ್ನ ಆಹಾರ ಧಾನ್ಯಗಳ ದಾಸ್ತಾನಿನ ಪ್ರಮಾಣವನ್ನು ತಗ್ಗಿಸಿಕೊಳ್ಳಲು ಧಾನ್ಯಗಳನ್ನು ಎಥೆನಾಲ್‌ಗೆ ಪರಿವರ್ತಿಸಲು ಅನುಮತಿ ನೀಡುವ ಯೋಜನೆ ರೂಪಿಸಿರುವುದು ವಿಪರ್ಯಾಸವಾಗಿ ಕಂಡರೂ ಅದರಲ್ಲಿ ಆಶ್ಚರ್ಯವೇನಿಲ್ಲ.

## ನಾಲ್ಕನೇ ಮಹಾಧಿವೇಶನ...........

ಪುಟ 11 ರಿಂದ

ದೌರ್ಬಲ್ಯ ಹಾಗೆಯೇ ಉಳಿದಿತ್ತು. ಇದು ಪಕ್ಷದ ಪತ್ರಿಕೆಗಳ ಪ್ರಕಟಣೆಗೂ ಅಡಚಣೆ ಉಂಟುಮಾಡಿತ್ತು ಮತ್ತು ಪಕ್ಷದ ಸಾಹಿತ್ಯ ಮಾರಾಟಕ್ಕೂ ಧಕ್ಕೆ ಮಾಡಿತ್ತು. ಪಕ್ಷ ಹಾಗೂ ಪಕ್ಷದ ಸಿದ್ಧಾಂತದ ಬೆಳವಣಿಗೆಗೆ ಉತ್ತಮ ವಾತಾವರಣ ಇದ್ದಾಗಲೂ ಅದನ್ನು ಪರಿಣಾಮಕಾರಿಯಾಗಿ ಬಳಸಲಾಗದಿರುವುದು ನಾಯಕತ್ವದ ಸೋಲು ಎಂಬುದನ್ನು ವರದಿಯು ಸ್ವವಿಮರ್ಶಾತ್ಮಕವಾಗಿ ಒಪ್ಪಿಕೊಂಡಿತ್ತು.

ಪ್ರತಿನಿಧಿ ಪರಿಚಯ ಪತ್ರ ಸಮಿತಿಯ ವರದಿಯು 407 ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು ಎನ್ನುವುದನ್ನು ದಾಖಲಿಸಿತು. ಪ್ರತಿನಿಧಿಗಳು ಜೈಲಿನಲ್ಲಿ ಕಳೆದ ವರ್ಷಗಳನ್ನು ಲೆಕ್ಕ ಹಾಕಿದರೆ ಅದು 1344 ವರ್ಷಗಳಾಗಿತ್ತು. ಅಂದರೆ ಪ್ರತಿಯೊಬ್ಬ ಪ್ರತಿನಿಧಿಯೂ ಕನಿಷ್ಠ ಮೂರು ವರ್ಷಗಳ ಜೈಲುವಾಸ ಅನುಭವಿಸಿದ್ದರು. ಪ್ರತಿನಿಧಿಗಳು ಒಟ್ಟಾಗಿ 1021 ವರ್ಷಗಳ ಭೂಗತ ಜೀವನ ನಡೆಸಿದ್ದರು, ಅಂದರೆ ಪ್ರತಿಯೊಬ್ಬ ಪ್ರತಿನಿಧಿಯೂ ಎರಡೂವರೆ ವರ್ಷಗಳ ಕಾಲ ಭೂಗತರಾಗಿದ್ದರು. ಇದು ಪಕ್ಷದ ಹೋರಾಟದ ಸಾಮರ್ಥ್ಯವನ್ನು ಪ್ರತಿಫಲಿಸಿತ್ತು.

ಜಗತ್ತಿನಲ್ಲಿ ಬಲಾಬಲಗಳು ಸಮಾಜವಾದದತ್ತ ನಿರ್ಣಾಯಕವಾಗಿ ವಾಲಿವೆ ಮತ್ತು ಸಾಮ್ರಾಜ್ಯಶಾಹಿಯ ಪ್ರಭಾವ ದುರ್ಬಲವಾಗುತ್ತಿದೆ ಎಂದು ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ನಿರ್ಣಯವು ಹೇಳಿತು. ಇದು ಸಂಸದೀಯ ಬಹುಮತಗಳು ಸಾಮಾಜಿಕ ಬದಲಾವಣೆಗೆ ಎಡೆ ಮಾಡಿಕೊಡ ಬಲ್ಲವು ಮತ್ತು ಪಕ್ಷದ ಮುಂದಿರುವ ಪ್ರಶ್ನೆಯು ಸಮಾಜವಾದದೆಡೆಗೆ ಶಾಂತಿಯುತ ಬದಲಾವಣೆಗೆ 'ಪರಿಸ್ಥಿತಿಯನ್ನು ಸೃಷ್ಟಿಸುವುದೇ' ಆಗಿದೆ ಎಂಬ ಕೆಲವರ ತೀರ್ಮಾನಕ್ಕೆ ಕಾರಣವಾಯಿತು. ಕಾರ್ಯಕ್ರಮಾತ್ಮಕ ಪ್ರಶ್ನೆಗಳಲ್ಲಿ ಹಾಗೂ ತತ್‌ಕ್ಷಣದಲ್ಲಿ ಅನುಸರಿಸಬೇಕಾದ ತಂತ್ರಾತ್ಮಕ ನಿಲುವುಗಳಲ್ಲಿ ಪಕ್ಷವು ಇನ್ನೂ ವಿಭಜಿತವಾಗಿಯೇ ಇತ್ತು ಎಂಬುದನ್ನು ಈ ಎಲ್ಲಾ ಸಂವಾದಗಳು ಮತ್ತು ಚರ್ಚೆಗಳು ತೋರಿಸಿಕೊಟ್ಟವು.

ಪಕ್ಷದ ಮಹಾಧಿವೇಶನವು ರಾಜಕೀಯ ನಿರ್ಣಯವನ್ನು ಅಂಗೀಕರಿಸಿದ್ದಾಗ್ಯೂ, ಭಾರತೀಯ ಕಮ್ಯುನಿಸ್ಟ್ ಚಳುವಳಿಯು ಎದುರಿಸುತ್ತಿದ್ದ ಕೆಲವು ಪ್ರಮುಖ ಪ್ರಶ್ನೆಗಳ(ಪ್ರಭುತ್ವದ ವರ್ಗ ಗುಣ, ಅನುಸರಿಸಬೇಕಾದ ದೀರ್ಘಕಾಲದ ಹಾಗೂ ತತ್‌ಕ್ಷಣದ ತಂತ್ರಗಳು) ವಿಷಯಗಳಲ್ಲಿ ಪಕ್ಷದ ಒಳಗಡೆ ಸಮಾನ ತಿಳುವಳಿಕೆ ಇಲ್ಲ ಎನ್ನುವುದು ಸ್ಪಷ್ಟವಾಯಿತು. ಹೀಗೆ ಕಾರ್ಯಕ್ರಮ ಹಾಗೂ ಸೈದ್ಧಾಂತಿಕ ವಿಷಯಗಳ ಮೇಲೆ ಪಕ್ಷದೊಳಗಿನ ದಶಕಗಳ ಕಾಲದ ಹೋರಾಟಕ್ಕೆ ಈ ಮಹಾಧಿವೇಶನವು ಪೂರ್ವಸೂಚಕವಾಯಿತು.



## ಆಶ್ವಾಸನೆಗಳೆಲ್ಲವೂ ಮರೀಚಿಕೆಯಾಗಿವೆ, ದಾವೆಗಳು ಹುಸಿಯಾಗಿವೆ

ಪುಟ 2 ರಿಂದ


ವ್ಯಾಪಾರ–ವ್ಯವಹಾರಗಳು ಕಳೆದೊಂದು ವರ್ಷದಲ್ಲಿ ಕಾಶ್ಮೀರ ಕಣಿವೆಯಲ್ಲಿ ಮಾತ್ರವಲ್ಲ, ಜಮ್ಮುವಿನಲ್ಲೂ ಧ್ವಂಸಗೊಂಡಿದೆ. ಅರ್ಥ ವ್ಯವಸ್ಥೆಯ ಬೆನ್ನೆಲುಬೇ ಮುರಿದುಹೋಗಿದೆ.

ಕಾಶ್ಮೀರ ಕಣಿವೆಯ ಜನಗಳಷ್ಟೇ ಅಲ್ಲ, ಜಮ್ಮು ಮತ್ತು ಲಡಾಖ್ ಪ್ರದೇಶದ ಜನಗಳೂ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅನಿಶ್ಚಿತತೆಗಳು ಮತ್ತು ಪರಕೀಯ ಭಾವ ಈ ಪ್ರದೇಶದ ಸಾಮಾಜಿಕ–ರಾಜಕೀಯ ಪರಿಸ್ತಿತಿಯ ಮೇಲೆ ಹೆಚ್ಚಿನ ಬೆದರಿಕೆ ಒಡ್ಡಿದೆ

ಕಲಮು 370ರ ರದ್ದತಿ ಇದುವರೆಗೆ ಸಾಧಿಸಿರುವುದು ಇಲ್ಲಿ ಪ್ರಜಾಪ್ರಭುತ್ವದ ಸಂಪೂರ್ಣ ರದ್ಧತಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳು ಹಾಗು ನಾಗರಿಕ ಸ್ವಾತಂತ್ರ್ಯಗಳ ಪೈಶಾಚಿಕ ದಮನ ಎಂದು ತರಿಗಾಮಿ ಹೇಳುತ್ತಾರೆ.

ಕಲಮು 370 ಭಾರತೀಯ ಒಕ್ಕೂಟವನ್ನು ದುರ್ಬಲಗೊಳಿಸಿತ್ತು ಎಂಬುದು ತಪ್ಪು ಅಭಿಪ್ರಾಯ. ಅದು ಪ್ರಜಾಪ್ರಭುತ್ವದ ಮೂಲ ತಿಳುವಳಿಕೆಗೆ ಮತ್ತು ಭಾರತದ ಕಳೆದ 70 ವರ್ಷಗಳ ಅನುಭವಗಳಿಗೆ ವ್ಯತಿರಿಕ್ತವಾಗಿದೆ ಎನ್ನುವ ತರಿಗಾಮಿಯವರು ಎಲ್ಲರನ್ನೂ ಒಳಗೊಳ್ಳುವ ಭಾರತದ ಪರಿಕಲ್ಪನೆ ಹೊಂದಿರುವ ಎಲ್ಲರೂ ಜಮ್ಮು ಮತ್ತು ಕಾಶ್ಮೀರದ ಕಳೆದ ಒಂದು ವರ್ಷದ ಹೊಸ ಸಂವಿಧಾನಿಕ ವಾಸ್ತವತೆಯ ಹಿನ್ನೆಲೆಯಲ್ಲಿ ಒಂದು ಗಂಭೀರ ಆತ್ಮಾವಲೋಕನ ಮಾಡಬೇಕಾಗಿದೆ ಎಂದಿದ್ದಾರೆ.

ಜಮ್ಮು–ಕಾಶ್ಮೀರ ಮತ್ತು ಉಳಿದ ಭಾರತದ ನಡುವೆ ಹಾಗೂ ಈ ಪ್ರದೇಶದ ಒಳಗಿನ ವಿವಿಧ ಸಮುದಾಯಗಳ ನಡುವೆಯೂ ಹಲವು ಸೇತುವೆಗಳನ್ನು ಕಟ್ಟಬೇಕಾಗಿದೆ, ಈ ಸೇತುವೆಗಳನ್ನು ಕಟ್ಟಲು ಬಹುಸ್ತರಗಳಲ್ಲಿ, ವಿಕೇಂದ್ರೀಕರಣ ಮತ್ತು ಜಮ್ಮು–ಕಾಶ್ಮೀರದ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಬಗ್ಗೆ ಗೌರವ ಅಗತ್ಯ. ಆದರೆ ಕಳೆದ ಒಂದು ವರ್ಷದ ಬೆಳವಣಿಗೆಗಳು ತದ್ವಿರುದ್ಧ ದಿಕ್ಕಿನಲ್ಲಿವೆ.ಎನ್ನುತ್ತಾರೆ ತರಿಗಾಮಿ. ಇದು ಖಂಡಿತವಾಗಿಯೂ ಜಮ್ಮು ಮತ್ತು ಕಾಶ್ಮೀರದ ಪ್ರಶ್ನೆಯನ್ನು ಬಗೆಹರಿಸುವುದಿಲ್ಲ, ಬದಲಾಗಿ ಇನ್ನಷ್ಟು ಬಿಗಡಾಯಿಸುತ್ತದೆ .





ಸಿಪಿಐ(ಎಂ)ನ ಆಂಧ್ರಪ್ರದೇಶ ಘಟಕ ಕೊವಿಡ್ ಸೋಂಕಿಗೆ ತನ್ನ ಇಬ್ಬರು ಹಿರಿಯ ಮುಖಂಡರನ್ನು ಕಳಕೊಂಡಿದೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಸುನ್ನಂ ರಾಜಯ್ಯ ಮತ್ತು ರಾಜ್ಯ ಹತೋಟಿ ಅಯೋಗದ ಸದಸ್ಯ ಟಿ. ಶದ್ರಕ್ ವೈರಾಣು ಸೋಂಕಿನಿಂದ ನಿಧನರಾಗಿದ್ದಾರೆ. ಇಬ್ಬರಿಗೂ 62 ವರ್ಷ ವಯಸ್ಸು.

ಸುನ್ನಂ ರಾಜಯ್ಯ ಭದ್ರಾಚಲಂ ಕ್ಷೇತ್ರದಿಂದ ಮೂರು ಬಾರಿ, 1999, 2004 ಮತ್ತು 2014ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದವರು. ಅವರು ಗಿರಿಜನ ಸಂಘಂನ ರಾಜ್ಯ ಅಧ್ಯಕ್ಷರು ಮತ್ತು ಆದಿವಾಸಿ ಅಧಿಕಾರ್ ಮಂಚ್‌ನ ಉಪಾಧ್ಯಕ್ಷರಾಗಿದ್ದರು. ಇವರು ಎರಡೂ ತೆಲುಗು ಭಾಷಿಕ ರಾಜ್ಯಗಳ ಬುಡಕಟ್ಟು ಜನಗಳ ಪ್ರೀತಿಪಾತ್ರ ನಾಯಕರಾಗಿದ್ದರು. ಇವರು ಸರಳಜೀವಿಯಾಗಗಿದ್ದು ತಮ್ಮ ಜೀವನವನ್ನು ಬುಡಕಟ್ಟು ಜನಗಳ ಕಲ್ಯಾಣಕ್ಕೆ ಮುಡಿಪಿಟ್ಟಿದ್ದರು.

ಶದ್ರಕ್ ಅವರು ಈ ಹಿಂದೆ ಕುರ್ನೂಲು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದರು.

## ಆಗಸ್ಟ್ 28 ರಂದು ರಾಷ್ಟ್ರೀಯ ಪ್ರತಿಭಟನೆಗೆ ಮಹಿಳಾ ಸಂಘಟನೆಗಳ ಕರೆ

### "ಜೀವನ, ಜೀವನೋಪಾಯ ಮತ್ತು ಪ್ರಜಾಪ್ರಭುತ್ವ"

ದೇಶದ ಆರು ರಾಷ್ಟ್ರೀಯ ಮಟ್ಟದ ಮಹಿಳಾ ಸಂಘಟನೆಗಳು ಆಗಸ್ಟ್ 28ರಂದು ದೇಶಾದ್ಯಂತ ಆಹಾರ, ಉದ್ಯೋಗ, ಆರೋಗ್ಯ ಸೇವೆಗಳು ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆಗಳನ್ನು ನಡೆಸಲು ನಿರ್ಧರಿಸಿವೆ.

ಜುಲೈ 29 ಮತ್ತು 30ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ರಾಷ್ಟ್ರೀಯ ಭಾರತೀಯ ಮಹಿಳೆಯರ ಒಕ್ಕೂಟ(ಎನ್‌ಎಫ್‌ಐಡಬ್ಲ್ಯು), ಅಖಿಲ ಭಾರತ ಪ್ರತಿಪರ ಮಹಿಳಾ ಸಂಘಟನೆ(ಎಐಪಿಡಬ್ಲ್ಯುಎ), ಪ್ರಗತಿಶೀಲ ಮಹಿಳಾ ಸಂಘಟನ್(ಪಿಎಂಎಸ್), ಅಖಿಲ ಭಾರತ ಅಗ್ರಗಾಮಿ ಮಹಿಳಾ ಸಮಿತಿ (ಎಐಎಎಂಎಸ್) ಮತ್ತು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್)ಯ ಮುಖಂಡರು ಭಾಗವಹಿಸಿದ ಆನ್‌ಲೈನ್ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಂಡಿದ್ದಾರೆ.

ಹರಡುತ್ತಿರುವ ಮಹಾಸೋಂಕು ಮತ್ತು ಮತ್ತೆ–ಮತ್ತೆ ಬರುತ್ತಿರುವ ಲಾಕ್‌ಡೌನ್‌ಗಳು ಬಹುಪಾಲು ಜನಗಳ, ಅದರಲ್ಲೂ ಮಹಿಳೆಯರ ಬದುಕುಗಳನ್ನು ಅಲ್ಲೋಲಕಲ್ಲೋಲಗೊಳಿಸಿವೆ. ಇವರುಗಳೆಲ್ಲ ತಮ್ಮ ಜೀವನೋಪಯುಗಳನ್ನು ಕಳಕೊಂಡು ಉಪವಾಸ ಬೀಳುವ ಅಂಚಿನಲ್ಲಿದ್ದಾರೆ. ಆರೋಗ್ಯ ಸೇವೆಗಳು ಕೊವಿಡ್–19 ಕ್ಕೆ ಬಿಟ್ಟು ಬೇರೆ ಯಾವುದಕ್ಕೂ ಲಭ್ಯವಿಲ್ಲದಂತಾಗಿದೆ. ಇದರಿಂದ ಗರ್ಭಿಣಿ ಮತ್ತು ಬಾಣಂತಿಯರು ತೀವ್ರ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಿದೆ. ಜತೆಗೆ ಹೆಚ್ಚುತ್ತಿರುವ ಕುಟುಂಬ ಹಿಂಸಾಚಾರವೂ ಮಹಿಳೆಯರನ್ನು ತೀವ್ರವಾಗಿ ಬಾಧಿಸುತ್ತಿದೆ. ಸ್ವಸಹಾಯ ಗುಂಪುಗಳಲ್ಲಿನ ಮಹಿಳೆಯರು ಕಿರು ಹಣಕಾಸು ಸಂಸ್ಥೆಗಳಿಂದ ಕಿರುಕುಳಗಳನ್ನು ಎದುರಿಸಬೇಕಾಗಿ ಬಂದಿದೆ, ಆದರೆ ಸರಕಾರ ಕಲೆಕ್ಷನ್ ಏಜೆಂಟರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ.

ಬಿಜೆಪಿ ಸರಕಾರ ಸಂಕಟಪೀಡಿತ ಜನಗಳ ಸಮಸ್ಯೆಗಳನ್ನು ಪರಿಹರಿಸುವ ಬದಲು ತನ್ನ ಕಾರ್ಪೊರೇಟ್--ಪರ ಅಜೆಂಡಾವನ್ನೇ ಮುಂದೊತ್ತುವಲ್ಲಿ ಮಗ್ನವಾಗಿದೆ. ಜನಸಾಮಾನ್ಯರಿಗೆ ನೀಡಿದ ಅಲ್ಪ ಆಶ್ವಾಸನೆಗಳೂ ಜಾರಿಗೆ ಬರುತ್ತಿಲ್ಲ. ಇನ್ನೊಂದೆಡೆಯಲ್ಲಿ ಕೊವಿಡ್ ಮತ್ತು ಲಾಕ್‌ಡೌನಿನ ಅವಕಾಶವನ್ನೇ ದುರುಪಯೋಗ ಪಡಿಸಿಕೊಂಡು ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೆಲೆಯೇ ದಾಳಿ ಮಾಡಲಾಗುತ್ತಿದೆ.


ಇಂತಹ ಹದಗೆಡುತ್ತಿರುವ ಪರಿಸ್ಥಿತಿಯಲ್ಲಿ ಈ ರಾಷ್ಟ್ರೀಯ ಮಹಿಳಾ ಸಂಘಟನೆಗಳು ಜಂಟಿಯಾಗಿ ಆಹಾರ ಭದ್ರತೆ, ಉದ್ಯೋಗ, ಉಚಿತ ಆರೈಕೆಗಳ ಮೂಲಕ ಆರೋಗ್ಯ ಸೌಕರ್ಯಗಳ ಲಭ್ಯತೆ, ಮಹಿಳೆಯರು ಮತ್ತು ವಲಸೆ ಕಾರ್ಮಿಕರಿಗೆ ನಗದು ವರ್ಗಾವಣೆ ಮುಂತಾದ ಪ್ರಶ್ನೆಗಳನ್ನು ಎತ್ತಿಕೊಳ್ಳಲು ನಿರ್ಧರಿಸಿವೆ.

ಮಹಿಳೆಯರು ಹೋರಾಟಗಳ ಮೂಲಕ ಗಳಿಸಿದ ಹಕ್ಕುಗಳು ಮತ್ತು ಸೌಲಭ್ಯಗಳ ರಕ್ಷಣೆಗೆ ಹಾಗೂ ಸರಕಾರದ ಜನ–ವಿರೋಧಿ ನೀತಿಗಳು ಮತ್ತು ಕೊವಿಡ್ ಸಂಕಟಗಳ ಅದಕ್ಷ ನಿರ್ವಹಣೆಯಿಂದಾಗಿ ಉಪವಾಸ ಬೀಳುತ್ತಿರುವ, ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿರುವವರಿಗೆ ಪರಿಹಾರಗಳನ್ನು ಪಡೆಯಲು ಬೃಹತ್ ಪ್ರಮಾಣದಲ್ಲಿ ಮಹಿಳೆಯರನ್ನು ಅಣಿನೆರೆಸುವುದು ಈಗಿನ ಸಮಯದ ಆವಶ್ಯಕತೆಯಾಗಿದೆ ಎಂದು ಈ ಆರು ಮಹಿಳಾ ಸಂಘಟನೆಗಳು ಹೇಳಿವೆ.

ನಮ್ಮ ಜನಸಂಖ್ಯೆಯ ಅಂಚಿಗೆ ತಳ್ಳಲ್ಪಟ್ಟ ಎಲ್ಲ ಜನವಿಭಾಗಗಳನ್ನು ಬಾಧಿಸುತ್ತಿರುವ ಪ್ರಶ್ನೆಗಳ ಮೇಲೆ ವಿಶಾಲ ನೆಲೆಯಲ್ಲಿ ಹೋರಾಟಗಳನ್ನು ನಡೆಸಲು ತಮ್ಮ ಸಂಘಟನೆಗಳು ಬದ್ಧವಾಗಿವೆ ಎಂದಿರುವ ಈ ಮುಖಂಡರು ಈ ನಿಟ್ಟಿನಲ್ಲಿ ಮಹಿಳೆಯರನ್ನು ಅಣಿನೆರೆಸಲು ನಿರ್ಧರಿಸಿವೆ. ಮುಂಬರುವ ದಿನಗಳಲ್ಲಿ ರಾಜ್ಯಮಟ್ಟದ ಜಂಟಿ ಸಭೆಗಳನ್ನು ನಡೆಸಲಾಗುವುದು ಎಂದಿರುವ ಈ ಸಂಘಟನೆಗಳು ಆಗಸ್ಟ್ 28 ರ ಪ್ರತಿಭಟನೆಯಲ್ಲಿ ಸೇರಿಕೊಳ್ಳುವಂತೆ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಯುವಜನರು, ವಿದ್ಯಾರ್ಥಿಗಳು ಮತ್ತು ವಿವಿಧ ಪ್ರಜಾಪ್ರಭುತ್ವವಾದಿ ಚಳುವಳಿಗಳಿಗೆ ಮನವಿ ಮಾಡಿಕೊಂಡಿವೆ.

# 5 ಜಿ ರಣರಂಗ : ಚೀನಾದ ಮೇಲೆ ಅಮೆರಿಕಾದ ಟೆಕ್ ಸಮರ

– ನಾಗರಾಜ ನಂಜುಂಡಯ್ಯ–




ಚೀನಾದ ಮೇಲೆ ಯುಎಸ್ ತನ್ನ ಟೆಕ್ ಸಮರವನ್ನು ಮುಂದುವರಿಸುತ್ತಿದೆ. ಈ ನಿಟ್ಟಿನಲ್ಲಿ, ಚೀನಾದ 5 ಜಿ ನೆಟ್ ವರ್ಕ್ ಉಪಕರಣಗಳನ್ನು ತನ್ನ ನೆಟ್ ವರ್ಕ್ ನಿಂದ ನಿಷೇಧಿಸುತ್ತಿದೆ. ಹಾಗೆಯೇ, ತನ್ನ ಫೈ–ಐಸ್(ಆಸ್ಟ್ರೇಲಿಯ, ನ್ಯೂಜಿಲೆಂಡ್, ಕೆನಡಾ, ಯುಕೆ) ಪಾಲುದಾರರು ಹಾಗೂ ನ್ಯಾಟೋ ಮಿತ್ರ ರಾಷ್ಟ್ರಗಳು ಕೂಡ ತನ್ನ ನಡೆಯನ್ನೇ ಅನುಸರಿಸಬೇಕೆಂದು ಯುಎಸ್ ಒತ್ತಾಯಿಸುತ್ತಿದೆ. ಚೀನಾಕ್ಕೆ ಮಾರುಕಟ್ಟೆ ಮತ್ತು ತಂತ್ರಜ್ಞಾನವನ್ನು ನಿರಾಕರಣೆ ಮಾಡುವ ಮೂಲಕ, ಚೀನಾದ 5 ಜಿ ಉಪಕರಣಗಳ ಪ್ರಭಾವವನ್ನು ನಾಶ ಮಾಡಿ, ಯುಎಸ್ ಮತ್ತು ಯುರೋಪಿಯನ್ ಕಂಪನಿಗಳ ಮಾರುಕಟ್ಟೆಯನ್ನು ಮರಳಿ ಪಡೆಯುವ ಪ್ರಯತ್ನ ನಡೆದಿದೆ.

ಪ್ರಸ್ತುತವಿರುವ ಅಂತರಾಷ್ಟ್ರೀಯ ವಾಣಿಜ್ಯ–ವ್ಯಾಪಾರ ಒಪ್ಪಂದಗಳ ಪ್ರಕಾರ, ತಾಂತ್ರಿಕ ಸರಕು ಮತ್ತು ಉಪಕರಣಗಳನ್ನು ವಿಶ್ವದ ಯಾವುದೇ ದೇಶಗಳಿಂದ ಪಡೆಯ ಬಹುದಾಗಿದೆ. ಇದಕ್ಕಾಗಿ ನಿಯಮಗಳನ್ನೂ ಕೂಡ ರೂಪಿಸಲಾಗಿದೆ. ಆದರೆ, ಈ ಒಪ್ಪಿರುವ ನಿಯಮಗಳನ್ನು ಅಮೆರಿಕಾವೇ ಉಲಂಘನೆ ಮಾಡಿ, ಕಳೆದ ವರ್ಷ ಚೀನಾದ "ಹುವಾವೇ" ಕಂಪನಿಯ ಮೇಲೆ ಅಮೆರಿಕಾ ದಿಗ್ಬಂಧನಗಳನ್ನು ಹೇರಿತು. ಶೇ.25 ಅಥವಾ ಅದಕ್ಕಿಂತ ಹೆಚ್ಚು ಯುಎಸ್ ನ ಸರಕುಗಳನ್ನು ಬಳಸುವ ಯಾವುದೇ ಕಂಪನಿ ಯು.ಎಸ್ ನ ದಿಗ್ಬಂಧನಗಳನ್ನು ಪಾಲಿಸಲೇ ಬೇಕು. ಇದರ ಪ್ರಕಾರ, ಯು.ಎಸ್ ನ ಸಾಫ್ಟ್‌ವೇರ್ ಮತ್ತು ವಿನ್ಯಾಸಗಳನ್ನು ಆಧರಿಸಿದ ಚಿಪ್ ಗಳನ್ನು "ಹುವಾವೇ"ಗೆ ರಫ್ತು ಮಾಡಬಾರದು. ಇದರ ಜೊತೆಗೆ, ಈ ವರ್ಷದ ಮೇ ತಿಂಗಳಲ್ಲಿ ಕೊನೆಯ ಸುತ್ತಿನ ಮತ್ತಷ್ಟು ಕಠಿಣವಾದ ದಿಗ್ಬಂಧನಗಳನ್ನು ಹೇರಿತು. ಅದರ ಪ್ರಕಾರ ಯುಎಸ್ ಉಪಕರಣ ಗಳೊಂದಿಗೆ ಉತ್ಪಾದಿಸುವ ಯಾವುದೇ ಸರಕುಗಳನ್ನು ಯಾವುದೇ ಕಂಪನಿ ಅಥವಾ ದೇಶ, ಯುಎಸ್ ದಿಗ್ಬಂಧನ ಹೇರಿದ ಕಂಪನಿ ಅಥವಾ ದೇಶಕ್ಕೆ ಮಾರುವಂತಿಲ್ಲ. ಆ ಮೂಲಕ ಯುಎಸ್ ತನ್ನ ದಿಗ್ಬಂಧನಗಳನ್ನು ದೇಶಗಳ ಸಾರ್ವಭೌಮತ್ವ ಮತ್ತು ಗಡಿಗಳನ್ನು ಮೀರಿ ವಿಸ್ತರಿಸಿದೆ.

ಕಳೆದ ಒಂದು ದಶಕದಲ್ಲಿ, ಜಾಗತಿಕ ವ್ಯಾಪಾರದ ಭಾಗವಾಗಿ ಯುಎಸ್ ತನ್ನ ಸಾಮೂಹಿಕ ತಯಾರಿಕೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಬೇರೆ ದೇಶಗಳಿಗೆ ವರ್ಗಾಯಿಸಿತ್ತು. ಆದರೆ ಜಾಗತಿಕ ಹಣಕಾಸು–ಬ್ಯಾಂಕುಗಳು, ಪಾವತಿ ವ್ಯವಸ್ಥೆಗಳು, ವಿಮೆ ಮತ್ತು ಹೂಡಿಕೆ ನಿಧಿಗಳ ನಿಯಂತ್ರಣದ ಮೂಲಕ ಜಾಗತಿಕ ಆರ್ಥಿಕತೆಯ ಮೇಲೆ ತನ್ನ ಹಿಡಿತವನ್ನು ಉಳಿಸಿಕೊಳ್ಳಲು ಯುಎಸ್ ಗೆ ಸಾಧ್ಯವಾಗಿದೆ. ಇದೀಗ ಹೊಸ ನಿರ್ಬಂಧಗಳ ಮೂಲಕ, ಜಾಗತಿಕ ಆರ್ಥಿಕತೆಯ ಮೇಲಿನ ತನ್ನ ನಿಯಂತ್ರಣದ ಮತ್ತೊಂದು ಪದರವನ್ನು ಬಹಿರಂಗ ಪಡಿಸಿದೆ. ಅದೇ ಚೀನಾದ ಮೇಲಿನ ಈ ಟೆಕ್ ಸಮರದಲ್ಲಿ ಬಳಸಲಾಗುತ್ತಿರುವ ಬೌದ್ಧಿಕ ಆಸ್ತಿ ಮತ್ತು ಚಿಪ್ ತಯಾರಿಕೆಯಲ್ಲಿ ನಿರ್ಣಾಯಕ ಉತ್ಪಾದನಾ ಸಾಧನಗಳಾದ ಉಪಕರಣಗಳ ಮೇಲೆ ಯುಎಸ್‌ನ ನಿಯಂತ್ರಣ.

ಯುಎಸ್ ವಿಧಿಸಿರುವ ಈ ಹೊಸ ವ್ಯಾಪಾರ ದಿಗ್ಬಂಧನಗಳು ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯೂ.ಟಿ.ಒ)ಯ ಒಪ್ಪಂದದ ನಿಯಮಗಳ ಉಲ್ಲಂಘನೆಯಾಗಿವೆ. ಇಂತಹ ವಿವಾದಗಳನ್ನು ನಿಭಾಯಿಸುವ ಡಬ್ಲ್ಯೂ.ಟಿ.ಒ 'ಇತ್ಯರ್ಥ ನ್ಯಾಯ ಮಂಡಳಿ'ಗೆ ತನ್ನ ನಾಮನಿರ್ದೇಶನಗಳನ್ನು ಯುಎಸ್ ತಡೆ ಹಿಡಿದಿದೆ. ಆ ಮೂಲಕ ವಿವಾದಗಳನ್ನು ಇತ್ಯರ್ಥ ಪಡಿಸುವ ನ್ಯಾಯ ಮಂಡಳಿಯನ್ನು ಯುಎಸ್ ನಿಷ್ಕ್ರಿಯಗೊಳಿಸಿದೆ. ಹಾಗಾಗಿ, ಯುಎಸ್ ಎಸಗುವ ಉಲಂಘನೆಗಳ ವಿವಾದವನ್ನು ಇತ್ಯರ್ಥಕ್ಕಾಗಿ ಚೀನಾ ಡಬ್ಲ್ಯೂ.ಟಿ.ಒ ಗೆ ತರಲು ಸಾಧ್ಯವಿಲ್ಲ.

ಹೀಗಾಗಿ, 5 ಜಿ ಮತ್ತು ಹುವಾವೇ ಮೇಲಿನ ಸಮರವು, ಯುಎಸ್–ಚೀನಾದ ಟೆಕ್ ಸಮರದ ರಣರಂಗವಾಗಿ ಪರಿವರ್ತನೆಗೊಂಡಿದೆ. ಇದಕ್ಕೆ ಕೋವಿಡ್–19 ಚೀನಾದಿಂದ ಹರಡಿತು ಎಂಬುದು ನೆಪ ಮಾತ್ರ ಅಷ್ಟೇ. 5 ಜಿ ನೆಟ್ ವರ್ಕ್ ಮಾರುಕಟ್ಟೆಯು 10 ವರ್ಷಗಳಲ್ಲಿ 50 ಶತಕೋಟಿ ಡಾಲರ್ ಗಳನ್ನು ತಲುಪುವ ನಿರೀಕ್ಷೆಯಿದೆ. ಮಾತ್ರವಲ್ಲದೆ ಈ ನೆಟ್ ವರ್ಕ್ ನಿಂದಾಗಿ, ಮುಂದಿನ ವರ್ಷಗಳಲ್ಲಿ ಟ್ರಿಲಿಯನ್ ಡಾಲರ್ ಗಟ್ಟಲೆ ಆರ್ಥಿಕ ಉತ್ಪನ್ನಗಳು ಹೆಚ್ಚಳವಾಗುವ ಸಂಭವವಿದೆ. 5 ಜಿ ತಂತ್ರಜ್ಞಾನವನ್ನು ನಿಯಂತ್ರಿಸುವ ಯಾವುದೇ ಕಂಪನಿ ಅಥವಾ ದೇಶವು ಜಾಗತಿಕ ಆರ್ಥಿಕ ರಂಗದಲ್ಲಿ ಹೆಚ್ಚಿನ ಪ್ರಭಾವ ಹೊಂದಿರುತ್ತದೆ ಎಂದು ಅಂದಾಜಿಸಲಾಗಿದೆ. ಈ ಕಾರಣದಿಂದಾಗಿಯೇ, ಅಮೆರಿಕ ಚೀನಾದ ಈ 5 ಜಿ ತಂತ್ರಜ್ಞಾನದ ಮೇಲೆ ಯುದ್ಧ ಸಾರಲು ಹೊರಟಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

**5 ಜಿ ಯ ಪಾತ್ರ**

5 ಜಿ ಮತ್ತು ಹುವಾವೇ ಮೇಲಿನ ಯುಎಸ್ ಟೆಕ್ ಯುದ್ಧವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು, 5 ಜಿ ಯ ಪಾತ್ರವನ್ನು ತಿಳಿದುಕೊಳ್ಳುವುದು ಅಗತ್ಯವಿದೆ. ಭವಿಷ್ಯದಲ್ಲಿ ವಿಶ್ವದ ಎಲ್ಲಾ ಡಿಜಿಟಲ್ ತಂತ್ರಜ್ಞಾನಗಳನ್ನು ನಿಯೋಜಿಸಲು ಈ 5 ಜಿ ಜಾಲ ಅಡಿಪಾಯವಾಗಲಿದೆ. 5 ಜಿ ಜಾಲಗಳು ವೈರ್ ಲೆಸ್ ನೆಟ್ ವೇಗವನ್ನು 10 ರಿಂದ 40 ಪಟ್ಟು ಹೆಚ್ಚಿಸಬಲ್ಲದು. ಪ್ರಸ್ತುತ, ನಿಧಾನಗತಿಯ ವೇಗದ ನೆಟ್ ನಿಂದಾಗಿ, ವಿಡಿಯೋ ಕಾನ್ಫರೆನ್ಸಿಂಗ್, ಮಲ್ಟಿಮೀಡಿಯಾ, ಮಲ್ಟಿ ಪ್ಲೇಯರ್ ಗೇಮ್ಸ್ ಆನ್ ಲೈನ್ ಆಟಗಳಂತಹ, ಹಲವಾರು ಅಪ್ಲಿಕೇಶನ್ ಗಳನ್ನು ಬಳಸಲು ಗ್ರಾಹಕರು ಅಡಚಣೆಗಳನ್ನು ಅನುಭವಿಸುತ್ತಿದ್ದಾರೆ. ಏಕೆಂದರೆ, ಅಲ್ಲಿ ಅಪ್ ಲೋಡ್ ಮತ್ತು ಡೌನ್ ಲೋಡ್ ಎರಡೂ ಸಮಾನವಾದ ಹೆಚ್ಚಿನ ವೇಗದಲ್ಲಿ ಇರಬೇಕಾಗುತ್ತದೆ. ಇದು ನೆಟ್ ಫ್ಲಿಕ್ಸ್ ನಂತಹ ನೆಟ್ ವಿಡಿಯೋ ಗಳನ್ನು ನೋಡುವುದಕ್ಕಿಂತ ಭಿನ್ನವಾಗಿರುತ್ತದೆ. ಅದರಲ್ಲಿ ಡೌನ್‌ಲೋಡ್ ವೇಗ ಮಾತ್ರ ಪ್ರಮುಖವಾಗಿರುತ್ತದೆ. 5 ಜಿ ಜಾಲಗಳು, ಹೆಚ್ಚಿನ ವೇಗದ ನೆಟ್ ನ್ನು ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಮತ್ತು ಮೊಬೈಲ್ ಸಾಧನಗಳಲ್ಲಿಯೂ ಅಳವಡಿಸುವುದಕ್ಕೆ ಅನುವು ಮಾಡುತ್ತದೆ.

5 ಜಿ ನೆಟ್ ಜಾಲದಿಂದ, ಹೆಚ್ಚು ಪ್ರಯೋಜನ ಪಡೆಯುವ ಇತರೆ ಎರಡು ಕ್ಷೇತ್ರಗಳೆಂದರೆ, 'ಚಾಲಕ ರಹಿತ ವಾಹನ'ಗಳು ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ಅಥವಾ 'ವಸ್ತುಗಳ ಜಾಲ'. ಇದರಲ್ಲಿ ಎಲ್ಲಾ ನಮ್ಮ ಗ್ಯಾಡ್ಜೆಟ್ ಗಳು ವೈರ್ ಲೆಸ್ ಮೂಲಕ ಪರಸ್ಪರ ಮಾತನಾಡುತ್ತವೆ. ಚಾಲಕ ರಹಿತ ಕಾರುಗಳು ಸದ್ಯದಲ್ಲಿ ಕಾರ್ಯಗತವಾಗದಿದ್ದರೂ ಸಹಾ, ಭವಿಷ್ಯದ 'ಸ್ಮಾರ್ಟ್ ಸಿಟಿ' ಗಳಲ್ಲಿ ವಿದ್ಯುತ್, ಸಂಚಾರ ದೀಪಗಳು ನೀರು ಮತ್ತು ಒಳಚರಂಡಿ ವ್ಯವಸ್ಥೆಗಳ ದಕ್ಷತೆಯನ್ನು ಸುಧಾರಿಸುವಲ್ಲಿ ಮತ್ತು ಭೌತಿಕ ಮೂಲ ಸೌಕರ್ಯಗಳನ್ನು ನಿರ್ವಹಿಸಲು ಐಒಟಿ ಹೆಚ್ಚು ಮಹತ್ವಪೂರ್ಣವಾಗಿರುತ್ತದೆ.

5ಜಿ ಯಲ್ಲಿರುವ 'ಜಿ' ವೈರ್ ಲೆಸ್ ಸಂವಹನದ ಪೀಳಿಗೆಯ ತಂತ್ರಜ್ಞಾನವನ್ನು ಸೂಚಿಸುತ್ತದೆ. ಈ ಪೀಳಿಗೆ ರೇಡಿಯೋ ತರಂಗಗಳು ಸಾಗಿಸಬಲ್ಲ ಗರಿಷ್ಠ ಮಾಹಿತಿಯ ಪ್ರಮಾಣವನ್ನು ಸೂಚಿಸುತ್ತದೆ. 5 ಜಿ ಸಾಗಿಸುವ ಮಾಹಿತಿಯ ಪ್ರಮಾಣ ಮತ್ತು ವೇಗವನ್ನು ಹೆಚ್ಚಿಸುತ್ತದೆ ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಸಾಧನಗಳನ್ನು ಬೆಂಬಲಿಸುತ್ತದೆ. ಆದರೆ 5ಜಿ, 3 ಜಿ ಮತ್ತು 4 ಜಿ ನಷ್ಟು ದೂರವನ್ನು ಕ್ರಮಿಸಲಾರದು. ಅದೇ ದೂರವನ್ನು ಕ್ರಮಿಸಲು ಹಲವಾರು ರಿಪೀಟರ್ ಹಾಪ್ಸ್ ಅಥವಾ ಕೋಶಗಳು ಮತ್ತು ಆಂಟೆನಾಗಳು ಬೇಕಾಗುತ್ತವೆ. ಅತಿ ದೊಡ್ಡ ವೆಚ್ಚವಿಲ್ಲದೆ, 5 ಜಿ' ನೆಟ್ ವರ್ಕ್ ಭೌತಿಕ ಕೇಬಲಿಂಗ್ ಇಲ್ಲದೆ ಫೈಬರ್ ಆಪ್ಟಿಕ್ ಕೇಬಲ್ ಗಳ ವೇಗವನ್ನು ಒದಗಿಸುತ್ತದೆ. ಕಡಿಮೆ ವೆಚ್ಚದಲ್ಲಿ ಹೆಚ್ಚಿನ ವೇಗದ ನೆಟ್ ಸೇವೆಯನ್ನು ಗ್ರಾಮೀಣ ಪ್ರದೇಶಗಳು ಸೇರಿದಂತೆ ಕಡಿಮೆ ದಟ್ಟನೆ ಇರುವ ಕೇಂದ್ರಗಳನ್ನು ಇದು ತಲುಪಿಸುತ್ತದೆ.

**5 ಜಿ ಯ ಘಟಕಗಳು ಮತ್ತು ಕಂಪನಿಗಳು**

ಹುವಾವೇ ಹೊರೆತುಪಡಿಸಿ, ಸ್ಯಾಮ್‌ಸಂಗ್ (ದಕ್ಷಿಣ ಕೊರಿಯ), ನೋಕಿಯಾ (ಫಿನ್‌ಲ್ಯಾಂಡ್), ಎರಿಕ್ಸನ್ (ಸ್ವೀಡನ್) ಮತ್ತು ಜಡ್.ಟಿ.ಇ (ಚೀನಾ) 5ಜಿ ತಂತ್ರಜ್ಞಾನದಲ್ಲಿ ಪರಿಣಿತಿ ಇರುವ ಕಂಪನಿಗಳು. ಯಾವ ಯು.ಎಸ್ ಕಂಪನಿ ಸಹ 5ಜಿ ನೆಟ್ ವರ್ಕ್ ಸಲಕರಣೆಗಳ ಸಾಮರ್ಥ್ಯ ಹೊಂದಿಲ್ಲ. ಆದಾಗ್ಯೂ, ವೈರ್‌ಲೆಸ್ ಘಟಕಗಳು ಮತ್ತು ಚಿಪ್ ಗಳನ್ನು ತಯಾರಿಸುವ ಕ್ವಾಲ್ಕಾಮ್ ಮಾತ್ರ ಯುಎಸ್ ಕಂಪನಿ. ಇದರೊಂದಿಗೆ, ಆಪಲ್ ಸ್ಮಾರ್ಟ್ ಫೋನ್ ಗಳಲ್ಲಿ ಮಾರುಕಟ್ಟೆಯ ಮುಂಚೂಣಿಯಲ್ಲಿದೆ.


ಈ ಹಿಂದೆ ಯುಎಸ್, ಸಾಫ್ಟ್‌ವೇರ್ ನಲ್ಲಿನ ತನ್ನ ಪ್ರಬಲ ಸ್ಥಾನವನ್ನು ಉಪಯೋಗಿಸಿಕೊಂಡು ಹುವಾವೇ ಮೇಲೆ ದಾಳಿಯನ್ನು ನಡೆಸಿತ್ತು. ಗೂಗಲ್ ನ ಆಂಡ್ರಾಯ್ಡ್ ನ್ನು ಚೀನಾದ ಹೆಚ್ಚಿನ ಸ್ಮಾರ್ಟ್‌ಫೋನ್ ಗಳಲ್ಲಿ ಅಳವಡಿಸಲಾಗಿದೆ. ಆಪಲ್ ಫೋನ್ ಗಳನ್ನು ಬಿಟ್ಟರೆ ಜಗತ್ತಿನ ಎಲ್ಲ ಸ್ಮಾರ್ಟ್‌ಫೋನ್‌ಗಳಲ್ಲಿ ಆಂಡ್ರಾಯ್ಡ್ ಕಾರ್ಯನಿರ್ವಹಿಸುತ್ತವೆ. ಎಲ್ಲ ಮೊಬೈಲ್ ಉಪಕರಣಗಳಲ್ಲಿ ಬಳಸುವ ಚಿಪ್ ಗಳಲ್ಲಿ, ಪ್ರಸ್ತುತ ಎ.ಆರ್.ಎಮ್ ಪ್ರೊಸೆಸರ್ ಗಳು ಪ್ರಮುಖ ಸ್ಥಾನವನ್ನು ಹೊಂದಿವೆ. ಹೆಚ್ಚಿನ ಕಂಪನಿಗಳು ಅಡ್ವಾನ್ಸ್ಡ್ ಪ್ರೊಸೆಸರ್ ಗಳು ಬೇಕಾದಲ್ಲಿ ಹಿಂದೆ ಮುಂಚೂಣಿಯಲ್ಲಿದ್ದ ಇಂಟೆಲ್ ನಿಂದ ಎ.ಆರ್.ಎಮ್ ಗೆ ಬದಲಾಯಿಸುತ್ತಿವೆ. ಎ.ಆರ್.ಎಮ್ ಯುಕೆ ಮೂಲದ ಕಂಪನಿ, ಆದರೆ, ಜಪಾನಿನ ಸಾಫ್ಟ್‌ಬ್ಯಾಂಕ್ ನ ಒಡೆತನದಲ್ಲಿದೆ. ಅದು ಸ್ವತಃ ಚಿಪ್ ಗಳನ್ನು ತಯಾರಿಸುವುದಿಲ್ಲ. ಆದರೆ, ಪ್ರೊಸೆಸರ್ ಗಳಿಗೆ ಹೋಗುವ ಕೋರ್ ಗಳಿಗೆ ವಿನ್ಯಾಸಗಳನ್ನು ಒದಗಿಸುತ್ತದೆ. ಆ ನಂತರ, ಇವುಗಳನ್ನು ಹುವಾವೇ, ಕ್ವಾಲ್ಕಾಮ್, ಸ್ಯಾಮ್‌ಸಂಗ್ ಮತ್ತು ಆಪಲ್ ನಂತಹ ಕಂಪನಿಗಳಿಗೆ ಪರವಾನಗಿ ನೀಡುತ್ತದೆ. ಇಂತಹ 2, 4, 8 ಕೋರ್ ಗಳನ್ನು ಬಳಸಿ ಪ್ರೊಸೆಸರ್ ಗಳನ್ನು ಅವು ವಿನ್ಯಾಸ ಮಾಡಿ ಸಿಲಿಕಾನ್ ಫೌಂಡ್ರಿಗಳಲ್ಲಿ ಉತ್ಪಾದಿಸುತ್ತವೆ. ಪ್ರೊಸೆಸರ್‌ಗಳು ಮೊಬೈಲ್ ನೆಟ್‌ವರ್ಕ್ ಉಪಕರಣಗಳು, ಮೊಬೈಲ್ ಫೋನ್ ಅಥವಾ ಲ್ಯಾಪ್ ಟಾಪ್ ಗಳಿಗೆ ಶಕ್ತಿ ನೀಡುತ್ತವೆ. ಇವುಗಳೆಲ್ಲ ಮೇಲು ನಿರ್ಬಂಧಗಳನ್ನು ಹೇರಲಾಗಿದೆ. ಪ್ರೊಸೆಸರ್ ಗಳನ್ನು ತಯಾರಿಸುವ ಸಿಲಿಕಾನ್ ಫೌಂಡ್ರಿಗಳು ಪ್ರಮುಖವಾಗಿ ತೈವಾನ್, ದ.ಕೊರಿಯಾ, ಚೀನಾಗಳಲ್ಲಿವೆ.

ಯು.ಎಸ್ ನ ಎರಡು ಸುತ್ತಿನ ದಿಗ್ಬಂಧನಗಳು ಆಂಡ್ರಾಯ್ಡ್ ಮತ್ತು ಎ.ಆರ್.ಎಮ್ ಪ್ರೊಸೆಸರ್ ಗಳನ್ನು ಹುವಾವೇಗೆ ನಿರಾಕರಿಸುವ ಮೂಲಕ ಅದನ್ನು ಮಣಿಸಬಹುದು ಎಂದು ತಿಳಿದಿತ್ತು. ಆಂಡ್ರಾಯ್ಡ್ ಮತ್ತು ಅದರ ಆಪ್‌ಗಳಿಗೆ ಗೆ ಹುವಾವೇ ತನ್ನದೇ ಬದಲಿ ಹುಡುಕಿದೆ. ಎ.ಆರ್.ಎಮ್ ಯುಎಸ್ ನಿರ್ಬಂಧಗಳಿಗೆ ಒಳಪಡುವುದಿಲ ಎ.ಆರ್.ಎಮ್ ಪ್ರೊಸೆಸರ್ ಗಳ ಸ್ಟಾಕ್ ಇದೆ. 5 ಜಿ ನೆಟ್ ವರ್ಕ್ ನಲ್ಲಿ ಪ್ರಮುಖ ಅಂಶವಾಗಿರುವ ರೇಡಿಯೋ ಗಳು ಮತ್ತು ಆಂಟೆನಾಗಳಲ್ಲಿ ಹುವಾವೇ ಗಮನಾರ್ಹ ಮುನ್ನಡೆ ಹೊಂದಿದೆ. ಹಾಗಾಗಿ ಹುವಾವೇ ಯನ್ನು ಯು.ಎಸ್ ದಿಗ್ಬಂಧನಗಳು ಮಣಿಸಲಾರವು. ಆದರೆ ಮಧ್ಯ ಮತ್ತು ದೀರ್ಘಕಾಲೀನ ಚಿಪ್ ಮತ್ತು ಪ್ರೊಸೆಸರ್ ತಯಾರಿಗೆ ಸ್ಯಾಮ್ಸಂಗ್ ನ್ನು ಅವಲಂಬಿಸಬೇಕು ಅಥವಾ ಚೀನಾದ ಫೌಂಡ್ರಿಗಳ ಸಾಮರ್ಥ್ಯ ಹೆಚ್ಚಿಸಬೇಕು ಮತ್ತು ತಂತ್ರಜ್ಞಾನವನ್ನು ಆಧುನೀಕರಿಸಬೇಕು.

ಇದೇ ಸಂದರ್ಭದಲ್ಲಿ, ಹುವಾವೇ ಸ್ಯಾಮ್ ಸಂಗ್ ನ ಚಿಪ್ ಫ್ಯಾಬ್ರಿಕೇಶನ್ ಬಳಸಲು ಉನ್ನತ ಮಟ್ಟದ ಮೊಬೈಲ್ ಫೋನ್ ಮಾರುಕಟ್ಟೆಯನ್ನು ಅದಕ್ಕೆ ಬಿಟ್ಟು ಕೊಡಲು ಚಿಂತನೆ ನಡೆಸಿದೆ. ಹಾಗಾಗಿ, ಸ್ಯಾಮ್‌ಸಂಗ್ ಮತ್ತು ಹುವಾವೇ ಪಾಲುದಾರರಾಗಲು ಸಿದ್ಧರಿದ್ದರೆ, ಯು.ಎಸ್ ನ ನಿರ್ಬಂಧಗಳನ್ನು ಹಿಮ್ಮೆಟ್ಟಿಸಲು ಹುವಾವೇ ಗೆ ಸುಲಭವಾಗುತ್ತದೆ. ಹುವಾವೇ ಮತ್ತು ಸ್ಯಾಮ್‌ಸಂಗ್ ಪಾಲುದಾರರಾದರೆ ಸಂಪೂರ್ಣ 5 ಜಿ ಪರಿಹಾರವನ್ನು ಜಗತ್ತಿಗೆ ಒದಗಿಸಬಹುದು. ಸ್ಯಾಮ್‌ಸಂಗ್ 5ಜಿ ರೇಡಿಯೊ ತಂತ್ರಜ್ಞಾನದಲ್ಲಿ ಹಿಂದೆ ಇದ್ದು ಹುವಾವೇ ಯ ಇಂತಹ ಸಲಹೆಯನ್ನು ಸ್ವೀಕರಿಸಲೂಬಹುದು.

ಟೆಕ್ ಯುದ್ಧದಲ್ಲಿ ಹುವಾವೇ ಮತ್ತು ಚೀನಾ ತುಂಬಾ ದೊಡ್ಡ ಸವಾಲನ್ನು ಎದುರಿಸಬೇಕಾಗಿದೆ. ದಿಗ್ಬಂಧಗಳ ಭಾಗವಾಗಿ ಗೂಗಲ್ ಆಂಡ್ರಾಯ್ಡ್ ಸಿಸ್ಟಮ್ ನಿರಾಕರಣೆಯ ನಂತರ, ಎಆರ್ ಎಮ್ ಪ್ರೊಸೆಸರ್ ನಿಷೇದವು ಸೇರಿಕೊಂಡಿದೆ. ಇದರಿಂದ, ಯುಎಸ್ ಮತ್ತು ಇತರೆ ಪಾಶ್ಚಿಮಾತ್ಯ ಕಂಪನಿಗಳಿಗೆ ತಾತ್ಕಾಲಿಕ ಪ್ರಯೋಜನವಾಗಿದೆ. ಆದರೆ ಇದು, ಯುಎಸ್ ಹೊರಗಿನ ಹೆಚ್ಚಿನ ತಯಾರಕರು ಯುಎಸ್ ಸಾಧನಗಳಿಂದ ದೂರ ಸರಿಯಲು ಪ್ರೋತ್ಸಾಹ ಮತ್ತು ಒತ್ತಡ ಸೃಷ್ಟಿಸಿದೆ. ಈ ಪರಿಸ್ಥಿತಿಯನ್ನು ಮತ್ತು ಭಾರಿ ಜಾಗತಿಕ 5ಜಿ ಮಾರುಕಟ್ಟೆಯನ್ನು ಬರಿಯ ರಾಜಕೀಯ–ಸೈದ್ಧಾಂತಿಕ ಕಾರಣಗಳಿಗೆ ಕಳೆದುಕೊಳ್ಳಲು ಯಾವ ಕಂಪನಿ ಸಹ ಸಿದ್ಧವಿರುವುದಿಲ್ಲ ಎಂಬ ಸಂಗತಿಯನ್ನು ಹುವಾವೇ ಮತ್ತು ಚೀನಾ ಜಾಣ್ಮೆಯಿಂದ ಬಳಸಿಕೊಳ್ಳುವ ಸಾಧ್ಯತೆಯಿದೆ.

ಆದ್ದರಿಂದ, ಈ ಟೆಕ್ ಯುದ್ಧದಲ್ಲಿ, ರಾಜಕೀಯ ಆರ್ಥಿಕತೆಯ ಎರಡು ದೊಡ್ಡ ಪ್ರಬಲ ಶಕ್ತಿಗಳೇ ಯುದ್ಧವನ್ನು ನಿರ್ಧರಿಸುತ್ತವೆ. ಇತರೆ, ಯಾವುದೇ ಯುದ್ಧದಂತಲ್ಲ ಈ ಟೆಕ್ ಯುದ್ಧ, 5 ಜಿ ಕೇವಲ ಒಂದು ರಣರಂಗ ಮಾತ್ರ. ಈ ಯುದ್ಧದ ಭವಿಷ್ಯವನ್ನು ನಿರ್ಧರಿಸುವ ಇನ್ನೂ ಅನೇಕ ರಣರಂಗಗಳಿವೆ. ಅವುಗಳಲ್ಲಿ ಚೀನಾ ಪ್ರಬಲವಾಗಿದೆ.



JANASHAKTHI KANNADA VARA PATRIKE August 10-16, 2020 Price: Rs. 10/- Date of Publication: 7 August 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

# ಸ್ಕೀಂ ಕಾರ್ಮಿಕರ ಅಖಿಲ ಭಾರತ ಪ್ರತಿಭಟನೆ



ಸ್ಕೀಂ ಕಾರ್ಮಿಕರಾದಂತಹ ಬಿಸಿಯೂಟ, ಆಶಾ ಮತ್ತು ಅಂಗನವಾಡಿ ಕಾರ್ಮಿಕರ ಬೇಡಿಕೆಗಳ ಜ್ಯಾರಿಗಾಗಿ ಒತ್ತಾಯಿಸಿ ದಿನಾಂಕ 7–8–2020 ರಂದು ಅಖಿಲ ಭಾರತ ಪ್ರತಿಭಟನೆಗೆ ಕಾರ್ಮಿಕರ ಸಂಘಟನೆಗಳು ಕರೆಗೆ ಮಂಗಳೂರು ಮಿನಿ ವಿಧಾನಸೌಧದ ಮುಂದೆ ಸಿಐಟಿಯು ನೇತೃತ್ವದ ಅಕ್ಷರದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಂಘದ ಅಧ್ಯಕ್ಷರಾದ ಪದ್ಮಾವತಿ ಶೆಟ್ಟಿಯವರು ಮಾತನಾಡುತ್ತಾ, ಕೊರೋನಾ ವೈರಸ್‌ನಿಂದಾಗಿ ಸ್ಕೀಂ ಕಾರ್ಮಿಕರಲ್ಲಿ ಒಂದು ವಿಭಾಗವಾದ ಅಕ್ಷರ ದಾಸೋಹ ನೌಕರರಿಗೆ ಕೆಲಸ ಹಾಗೂ ವೇತನವಿಲ್ಲವಾಗಿದೆ. ಕೊರೋನಾ ವೈರಸ್ ಲಾಕ್‌ಡೌನ್ ಅವಧಿಯ ಹಾಗೂ ಬೇಸಿಗೆ ರಜೆಯ ಪರಿಹಾರವನ್ನು ನೀಡಬೇಕೆಂದು ವಿನಂತಿಸಿದರೂ ಲಕ್ಷಾಂತರ ಕಾರ್ಮಿಕರಿಗೆ ಪರಿಹಾರವನ್ನು ನೀಡಿಲ್ಲ. ಬಿಸಿಯೂಟ ನೌಕರರಿಗೆ ಮುಂದಿನ 6 ತಿಂಗಳ ತನಕ ಕನಿಷ್ಟ ರೂ.7,500/–ರಷ್ಟು ಪರಿಹಾರವನ್ನು ನೇರ ನಗದು ಮಾಡಬೇಕು ಹಾಗೆನೇ ಮುಂದಿನ 6 ತಿಂಗಳ ತನಕ 10 ಕೆ.ಜಿ.ಆಹಾರ ಧಾನ್ಯವನ್ನು ಉಚಿತವಾಗಿ ರೇಶನ್ ಮುಖಾಂತರ ನೀಡಬೇಕೆಂದು ಅವರು ಒತ್ತಾಯಿಸಿದರು.

ಭಾರತ ಕಾರ್ಮಿಕ ಸಮ್ಮೇಳನದ ನಿರ್ಣಯದಂತೆ ಸ್ಕೀಂ ಕಾರ್ಮಿಕರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಟ ವೇತನ ಕಾಯಿದೆಯ ಅನ್ವಯ ಮಾಸಿಕವಾಗಿ ರೂ.21,000 ಕನಿಷ್ಟ ಕೂಲಿ ನೀಡಬೇಕಾದಂತಹ ಸರಕಾರ ಎಲ್ಲಾ ರಂಗವನ್ನು ಖಾಸಗೀಕರಣ ಮಾಡಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಕೊರೋನಾ ವಾರಿಯರ್ಸ್ ಆಗಿ ಆಶಾ, ಅಂಗನವಾಡಿ ಮತ್ತು ಬಿಸಿಯೂಟ ನೌಕರರನ್ನೂ ಉಪಯೋಗ ಮಾಡಿದ್ದರೂ ಅವರ ಜೀವಕ್ಕೆ ರಕ್ಷಣೆ ಇಲ್ಲದಂತಾಗಿದೆ. ಅವರಿಗೆ ಈ ಅವಧಿಯಲ್ಲಿ ಕೆಲಸ ಮಾಡುವುದಕ್ಕೆ ನೀಡಬೇಕಾದಂತಹ ವೇತನವನ್ನು ಕೂಡಾ ನೀಡಿಲ್ಲ. ಕೊರೋನಾ ವಾರಿಯರ್ಸ್ ಕೆಲಸ ಮಾಡುವ ಸಂದರ್ಭ ಮರಣ ಅಪ್ಪಿದಲ್ಲಿ ಅವರಿಗೆ ಯಾವುದೇ ಪರಿಹಾರದ ಖಾತರಿಯಿಲ್ಲ. ಆದ್ದರಿಂದ ಕನಿಷ್ಟ 10 ಲಕ್ಷದವರೆಗೆ ವಿಮೆಯನ್ನು ಜಾರಿಗೊಳಿಸಬೇಕು. ಹಾಗೆನೇ ಅಕ್ಷರದಾಸೋಹ ಕಾರ್ಮಿಕರಿಗೆ ಕನಿಷ್ಟ ಮಾಸಿಕ ವೇತನವನ್ನು ಕೂಡಲೇ ರಾಜ್ಯ ಸರಕಾರ ನೀಡಬೇಕು ಎಂದು ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಸರಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯ ಮನವಿಯನ್ನು ತಹಶೀಲ್ದಾರ್ ಮುಖಾಂತರ ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಯಿತು.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಸಂಘದ ಮುಂದಾಳುಗಳಾದ ರೇಖಲತಾ, ರತ್ನಮಾಲಾ, ರೆಮೆಜಾ, ಉಮಾವತಿ, ಅಂಜಲಿ, ಭವಾನಿ, ಪಾರ್ವತಿ ಅನುರಾಧಾ ಮುಂತಾದವರು ವಹಿಸಿದ್ದರು. ಪ್ರಾರಂಭದಲ್ಲಿ ಸಂಘದ ಮುಂದಾಳು ಭವ್ಯಾರವರು ಸ್ವಾಗತಿಸಿ, ಕೊನೆಯಲ್ಲಿ ರತ್ನಮಾಲಾರವರು ಧನ್ಯವಾದ ನೀಡಿದರು.

## ಕರೋನ ನಿಯಂತ್ರಣಕ್ಕಾಗಿ ದುಡಿಯುವ ಸ್ಕೀಂ ನೌಕರರ ಕಡೆಗಣನೆ: ಪ್ರತಿಭಟನೆ

ಕರೋನ ವಾರಿಯರ್ಸ್ ಆಗಿ ದುಡಿಯುತ್ತಿರುವ ಅಂಗನವಾಡಿ, ಆಶಾ, ಅಕ್ಷರದಾಸೋಹ ನೌಕರರನ್ನು ಕೇಂದ್ರ–ರಾಜ್ಯ ಸರಕಾರಗಳು ಯಾವುದೇ ರಕ್ಷಣೆ ನೀಡದೇ ದುಡಿಸಿಕೊಳ್ಳುತ್ತಿರುವುದನ್ನು ಖಂಡಿಸಿ ಸ್ಕೀಂ ನೌಕರರು ರಾಷ್ಟ್ರವ್ಯಾಪಿ ಮುಷ್ಕರದ ಭಾಗವಾಗಿ ಉಡುಪಿ ಜಿಲ್ಲೆಯ ಉಡುಪಿ, ಕುಂದಾಪುರದಲ್ಲಿ ಜಂಟಿ ಹೋರಾಟ ನಡೆಸಿ ಮನವಿ ಸಲ್ಲಿಸಲಾಯಿತು. ಉಡುಪಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕ್ರಷ್ಣ ಶೆಟ್ಟಿ ಮಾತನಾಡಿ ಕರೋನ ತಡೆಗಟ್ಟಲು ಸ್ಕೀಂ ನೌಕರರು ಹಗಲು–ರಾತ್ರಿ ದುಡಿಯುತ್ತಿದ್ದಾರೆ ಈ ನೌಕರರು ಬದುಕಲು ಕುಟುಂಬ ರಕ್ಷಣೆ ಮಾಡಿಕೊಳ್ಳಲು ಗೌರವವಿಲ್ಲದ ವೇತನ ನೀಡಲಾಗುತ್ತಿದೆ. ಸ್ವರಕ್ಷಣೆ ಮಾಡಿಕೊಳ್ಳಲು ಯಾವುದೇ ಪರಿಕರಗಳನ್ನೂ ನೀಡುತ್ತಿಲ್ಲ. ಅಕ್ಷರ ದಾಸೋಹ ನೌಕರರರಿಗೆ ಕಳೆದ ಎಪ್ರಿಲ್ ನಿಂದ ವೇತನ ನೀಡದೇ ಹಸಿವಿನಿಂದ ಬದುಕುವ ಪರಿಸ್ಥಿತಿಗೆ ಸರಕಾರ ತಳ್ಳಿದೆ. ವೇತನ ಇಲ್ಲದ ಅವರಿಗೆ ಸಾಕಷ್ಟು ಪೌಷ್ಟಿಕಾಂಶಕಾಂಶ ಆಹಾರವಿಲ್ಲದಿರುವುದರಿಂದ ಕರೋನ ತಡೆಗಟ್ಟಲು ಖಂಡಿತ ಸಾಧ್ಯವಿಲ್ಲ. ಸರಕಾರ ಕೂಡಲೇ ಸ್ಕೀಂ ನೌಕರರನ್ನು ಭಾರತ ರಾಷ್ಟೀಯ ಸಮ್ಮೇಳನದ ಕರೆಯಂತೆ ಕಾರ್ಮಿಕರು ಎಂದು ಪರಿಗಣಿಸಿ ಅವರಿಗೆ ಸೌಲಭ್ಯಗಳನ್ನು ನೀಡಬೇಕು ಎಂದರು. ಉಡುಪಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಭಾರತಿ ತಾಲೂಕು ಮುಖಂಡರಾದ ಅಂಬಿಕ ಅಕ್ಷರದಾಸೋಹದ ನೌಕರರ ಸಂಘದ ಸುನಂದ, ಕಮಲ ಸಿಐಟಿಯು ತಾಲೂಕು ಅಧ್ಯಕ್ಷರಾದ ರಾಮ ಕಾರ್ಕಡ, ಕಾರ್ಯದರ್ಶಿ ಕವಿರಾಜ್ ಎಸ್. ಮೋಹನ ಮುಂತಾದವರಿದ್ದರು.







ಕುಂದಾಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಶೀಲ ನಾಡ ಮಾತನಾಡಿ ಅಂಗನವಾಡಿ ನೌಕರರಾಗಿ ಹಲವಾರು ವರ್ಷಗಳಿಂದ ದುಡಿಯುತ್ತಿದ್ದು ಅನುಭವವಿದ್ದರೂ ಮೇಲ್ವಿಚಾರಕರಾಗಿ ನೇಮಕವಾಗಲು ಕೇಂದ್ರ ಸರಕಾರದ 2017 ಆದೇಶ ಪಿಯುಸಿ, ಪದವಿ ಪಡೆದವರಿಗೆ ಮಾತ್ರ ಎಂದಿರುವುದು ನೌಕರರಿಗೆ ಮಾಡಿರುವ ದ್ರೋಹ ವಾಗಿದೆ. ಆದ್ದರಿಂದ ಈ ಹಿಂದಿನಂತೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರಿಗೂ ನೇಮಕಾತಿ ಮಾಡಿಕೊಳ್ಳಬೇಕು ಅಲ್ಲದೇ ಗ್ರಾಮ ಮಟ್ಟದ ಟಾಸ್ಫೋರ್ಸ್ ಕಮಿಟಿಯಲ್ಲಿ ನೌಕರರನ್ನು ಸೇರ್ಪಡೆಗೊಳಿಸಿದ್ದಾರೆ. ನೌಕರರು ಕೆಲಸ ಮಾಡಲು ಹಿಂಜರಿಯುವುದಿಲ್ಲ ಆದರೆ ನಮಗೆ ಸರಿಯಾದ ರಕ್ಷಣೆ, ಭದ್ರತೆ ಒದಗಿಸಬೇಕು ಇಲ್ಲವಾದಲ್ಲಿ ಹೋರಾಟ ಮುಂದುವರಿಸುತ್ತೇವೆ ಎಂದು ಹೇಳಿದರು.

ಈ ವೇಳೆಯಲ್ಲಿ ಕುಂದಾಪುರ ಉಪತಹಶೀಲ್ದಾರರಾದ ವಿ ಎಸ್ ವಿನಯ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಸಿಐಟಿಯು ಮುಖಂಡರಾದ ಎಚ್ ನರಸಿಂಹ, ಸುರೇಶ್ ಕಲ್ಲಾಗರ, ನೌಕರರ ಸಂಘದ ಬಿ. ಆಶಾಲತಾ ಶೆಟ್ಟಿ, ಭಾಗ್ಯ, ಶಾಂತ, ಅಕ್ಷರ ದಾಸೋಹ ಸಂಘದ ನಾಗರತ್ನ, ಗೀತಾ ಇದ್ದರು.

ಬ್ರಹ್ಮಾವರದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಕೋಶಾಧಿಕಾರಿ ಶಶಿಧರಗೊಲ್ಲ, ಅಂಗನವಾಡಿ ನೌಕರರ ಸಂಘದ ಸರೋಜ, ಹರಿಣಿ ಮುಂತಾದವರಿದ್ದರು.

## ಪಂಜರದ ಪಕ್ಷಿ ಹಾಡುವುದೇಕೆ ನಾ ಬಲ್ಲೆ

ಕವನ

ಸ್ವಚ್ಛಂದ ಹಕ್ಕಿ ಗಾಳಿಯ ಬೆನ್ನೇರಿ ತೂಗುತ್ತದೆ
ಜುಳುಜುಳು ಹರಿವ ತೊರೆಯ
ಕೊನೆತುದಿವರೆಗೆ ತೇಲುತ್ತದೆ
ಸೂರ್ಯನ ಕಿತ್ತಳೆ ಕಿರಣಗಳಲಿ
ತನ್ನ ರೆಕ್ಕೆಗಳನದ್ದಿ
ಆಗಸವೆಲ್ಲ ನನದೇ ಎಂದು ಸಾರುತ್ತದೆ

ಆದರೆ
ಇಕ್ಕಟ್ಟಾದ ಪಂಜರದ ಸರಳುಗಳ ನಡುವೆ
ನಿಧಾನ ನಡೆವ ಹಕ್ಕಿ
ಪಟಗುಡುವ ರೆಕ್ಕೆಗಳ ಹಕ್ಕಿ
ತನ್ನ ರೋಷದ ಸರಳ ಸಂದುಗಳ ನಡುವಿಂದ
ಹೊರಜಗವ ಕಾಣಲಾರದು
ರೆಕ್ಕೆಗಳ ಹಿಂದೆ ಕಟ್ಟಿ
ಕಾಲುಗಳ ಬಂಧಿಸಲಾಗಿದೆ
ಎಂದೇ ಗಂಟಲ ತೆಗೆದು ಅದು ಹಾಡುತ್ತದೆ.

ಭಯದಿಂದ ಕಂಪಿಸುತ್ತ ಹಾಡುತ್ತದೆ
ಕಾಣದುದರ ಕುರಿತು
ಕಾಣಬೇಕೆನಿಸುವ ಹಂಬಲಗಳ ಕುರಿತು
ದೂರದ ಬೆಟ್ಟಕಣಿವೆಗಳಲಿ
ಹಕ್ಕಿ ದನಿ ಮಾರ್ದನಿಸುತ್ತದೆ
ಏಕೆಂದರೆ ಪಂಜರದ ಪಕ್ಷಿ
ಬಿಡುಗಡೆಯ ಹಾಡು ಹಾಡುತ್ತದೆ

ಸ್ವಚ್ಛಂದ ಹಕ್ಕಿ ಬರಲಿರುವ ತಂಗಾಳಿಯ ನೆನೆಯುತ್ತದೆ
ಮಾರುತವು ಮರಗಳ ನಡುವೆ ಸುಂಯ್ಯೆಂದು ಸುಳಿವಾಗ
ನಸುಕಿನ ಹೊಳೆವ ಹುಲ್ಲುಹಾಸಿನ ಮೇಲೆ
ಕೊಬ್ಬಿದ ಹುಳಗಳಿಗೆ ಕಾಯುತ್ತ
ಆಗಸವೇ ತನದೆಂದುಕೊಳುತ್ತದೆ

ಪಂಜರ ಪಕ್ಷಿ ತನ್ನ ಕನಸುಗಳ ಗೋರಿ ಮೇಲೆ ನಿಲ್ಲುತ್ತದೆ
ದುಃಸ್ವಪ್ನ ಕಂಡು ಅಂಜಿದ ಅದರ ನೆರಳೂ ಕಿಟಾರನೆ ಕಿರುಚುತ್ತದೆ
ರೆಕ್ಕೆಗಳ ಹೊಲಿಯಲಾಗಿದೆ, ಕಾಲುಗಳ ಕಟ್ಟಲಾಗಿದೆ
ಎಂದೇ ಅದು ಹಾಡಲು ಬಾಯಿ ಕಳೆಯುತ್ತದೆ

ಭಯದಿಂದ ಕಂಪಿಸುತ್ತ ಹಾಡುತ್ತದೆ
ಕಾಣದುದರ ಕುರಿತು
ಕಾಣಬೇಕೆನಿಸುವ ಹಂಬಲಗಳ ಕುರಿತು.
ದೂರದ ಬೆಟ್ಟಕಣಿವೆಗಳಲಿ
ಹಕ್ಕಿ ದನಿ ಮಾರ್ದನಿಸುತ್ತದೆ,
ಏಕೆಂದರೆ
ಪಂಜರದ ಪಕ್ಷಿ
ಬಿಡುಗಡೆಯ ಹಾಡು ಹಾಡುತ್ತದೆ..

*– ಮಾಯಾ ಏಂಜೆಲೋ*

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**